

# ನನ್ನ ಇನ್ನಷ್ಟು ಕತೆಗಳು

**ಮುಹಮ್ಮದ್ ಕುಳಾಯಿ**

**ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್ (ರಿ.)**
ಎ.ಪಿ.ಎಸ್. ಆರ್ಕೇಡ್, ಬೈಪಾಸ್ ರಸ್ತೆ
ಕಂಕನಾಡಿ, ಮಂಗಳೂರು - 575 002



**Nanna Innashtu Kathegalu** : A collection of short stories written by Mohammad Kulai, C42, 3rd Floor, Al-Rahaba Plaza, Nellikai Road, Mangalore - 575 001.

Published by : Kendra Byari Sahithya Parishath (R.)
A.P.S. Arcade
Bypass Road, Kankanady
Mangalore - 575 002

Pages : 120

© : Reserved

First Edition : 2007

Price : Rs. 100-00

Copies : 1000

ಮುಖಪುಟ ವಿನ್ಯಾಸ : **ಸತೀಶ್ ಕಲ್ಮಾಡಿ**

ವಿನ್ಯಾಸ ಮತ್ತು ಮುದ್ರಣ
**ಆಕೃತಿ ಕಂಪ್ಯೂಟರ್ಸ್**
ಕೆ.ಎಸ್. ರಾವ್ ರಸ್ತೆ, ಮಂಗಳೂರು - 575 001
ದೂರವಾಣಿ : 0824 2443002

**ತಾಹಿರಾಳಿಗೆ**

## ಪ್ರಕಾಶಕರ ಮಾತು

ಇದು ಮುಹಮ್ಮದ್ ಕುಳಾಯಿಯವರ ಐದನೇ ಕೃತಿ.

'ಕುಚ್ಚಿ ಕಾಡಿನ ಕಪ್ಪು ಹುಡುಗ' ಕನ್ನಡ ಕಥಾಸಂಕಲನ, 'ಪೇರ್ನಾಲ್' ಬ್ಯಾರಿ ಕಥಾ ಸಂಕಲನ, 'ಕದನ ಕುತೂಹಲ' ಕನ್ನಡ ಕಥಾ ಸಂಕಲನ ಹಾಗೂ 'ರಂಗನೋ ಮಲೆ ಮಂಗನೋ' ತುಳುವಿನಿಂದ ಕನ್ನಡಕ್ಕೆ ಅನುವಾದಿತ ಕಾದಂಬರಿ ಈ ಹಿಂದಿನ ನಾಲ್ಕು ಕೃತಿಗಳು.

ಇದರಲ್ಲಿ 'ಕದನ ಕುತೂಹಲ' ಕೃತಿಗೆ ಶಿವಮೊಗ್ಗ ಕರ್ನಾಟಕ ಸಂಘದಿಂದ 2001ನೇ ಸಾಲಿನ ರಾಜ್ಯಮಟ್ಟದ 'ಪಿ. ಲಂಕೇಶ್ ಪ್ರಶಸ್ತಿ' ಹಾಗೂ ಮಂಗಳೂರಿನ ನಿರತ ಸಾಹಿತ್ಯ ಸಂಪದದಿಂದ 2003ನೇ ಸಾಲಿನ 'ನಿರತ ಸಾಹಿತ್ಯ ಪ್ರಶಸ್ತಿ' ಲಭಿಸಿದೆ. ಇದಲ್ಲದೆ 'ಶಿಕ್ಷಣ ಮತ್ತು ಮುಸ್ಲಿಮರು' ಎಂಬ ಲೇಖನ ಸಂಕಲನವನ್ನೂ ಕುಳಾಯಿ ತನ್ನ ಗೆಳೆಯರ ಜೊತೆ ಸಂಪಾದಿಸಿದ್ದಾರೆ.

ಕುಳಾಯಿ ನನ್ನ ಆತ್ಮೀಯ ಗೆಳೆಯ. ತನ್ನ ಸಮುದಾಯದ ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುವ ಕಾರ್ಯಕರ್ತ. ಇವರ ಎಲ್ಲಾ ಕೃತಿಗಳೂ ಓದುಗರನ್ನು ಕುತೂಹಲ ಹಾಗೂ ಚಿಂತನೆಗೆ ಹಚ್ಚುವಲ್ಲಿ ಯಶಸ್ವಿಯಾಗಿವೆ. ಇಡೀ ಬದುಕನ್ನು, ಬದುಕಿನ ನಿಗೂಢತೆಯನ್ನು ಮುಷ್ಠಿ ಗಾತ್ರದಲ್ಲಿ ಹಿಡಿದಿಡುವ ಜೀವಂತ ಸಾಹಿತ್ಯ ಇವರ ಕಥೆಗಳಲ್ಲಿವೆ.

ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್ ಪ್ರಾರಂಭದಿಂದಲೂ ಬ್ಯಾರಿ ಸಾಹಿತಿಗಳಿಗೆ, ಕವಿಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಕವಿ, ಸಾಹಿತಿಗಳೇ ಪರಿಷತ್‌ನ ಅತಿ ದೊಡ್ಡ ಬಂಡವಾಳ. ಈ ನಿಟ್ಟಿನಲ್ಲಿ ಮುಹಮ್ಮದ್ ಕುಳಾಯಿಯವರ ಈ ಕೃತಿಯನ್ನು ಪ್ರಕಟಿಸಲು ಪರಿಷತ್‌ಗೆ ಅಭಿಮಾನವಿದೆ.

10-2-2007
ಮಂಗಳೂರು

**ಎಂ. ಬಿ. ಅಬ್ದುಲ್ ರಹ್ಮಾನ್** ಬಿ.ಎ., ಬಿ.ಎಲ್.
ಅಧ್ಯಕ್ಷರು
ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್



**ಜಿ. ರಾಜಶೇಖರ**
**ಎಸ್. ಮಹಾದೇವ ಭಟ್**
**ಬಿ.ಎಂ. ಬಶೀರ್**
**ಸತೀಶ್ ಕಲ್ಮಾಡಿ**
**ಉಮರ್ ಯು.ಎಚ್.**
**ಕಲ್ಲೂರು ನಾಗೇಶ್**
**ರೈಹಾನಾ ಅಫ್ರೋಝ್**
ಇವರಿಗೆ
**ಕೃತಜ್ಞತೆಗಳು**

# ಮುನ್ನುಡಿ

ಗೆಳೆಯ ಮುಹಮ್ಮದ್ ಕುಳಾಯಿ ಅವರನ್ನು ಓರ್ವ ಕತೆಗಾರ ಎಂದು ಮಾತ್ರ ನಾನು ಗುರುತಿಸಬಯಸುತ್ತೇನೆ. ಅವರ ಹೆಸರು ಅವರೋರ್ವ ಮುಸ್ಲಿಮನೆಂಬುದನ್ನು ಜಗತ್ತಿಗೆ ಸಾರಿ ಹೇಳಿದರೂ ಅವರನ್ನು ಮುಸ್ಲಿಂ ಕತೆಗಾರ ಎಂದು ಸಂಬೋಧಿಸಲು ನನ್ನ ಮನಸ್ಸು ಹಿಂದೇಟು ಹಾಕುತ್ತಿದೆ. ಕನ್ನಡದ ಬಹುತೇಕ ಲೇಖಕರನ್ನು, ಪ್ರಮುಖರನ್ನೂ ಒಳಗೊಂಡು - ನಾವು 'ಹಿಂದು' ಲೇಖಕರು ಎಂದು ಪರಿಗಣಿಸುವುದಿಲ್ಲ. ಹಾಗೆಂದ ಮೇಲೆ ಮುಸ್ಲಿಮ್ ಹೆಸರಿನ ಓರ್ವ ಲೇಖಕನನ್ನು ಮುಸ್ಲಿಮ್ ಲೇಖಕ ಎಂದು ಯಾಕೆ ಗುರುತಿಸಬೇಕು? ಸಾರಾ ಅಬೂಬಕರ್, ಬಾನೂ ಮುಸ್ತಾಕ್‌ರಂತಹವರ ಮಟ್ಟಿಗೆ ಈ ಸಂಬೋಧನೆಯ ಬಿಕ್ಕಟ್ಟು ಇನ್ನಷ್ಟು ತೊಡಕಿನದ್ದು. ಅವರ ಹೆಸರಿಗೆ ಮುಸ್ಲಿಮ್ ಲೇಖಕಿ ಮತ್ತು ಮಹಿಳಾ ಲೇಖಕಿ ಎಂಬ ಎರಡೆರಡು ವಿಶೇಷಣಗಳು ಅದೊಂದು ಸಹಜ ವಿದ್ಯಮಾನವೆಂಬಂತೆ ತಗಲಿಕೊಳ್ಳುತ್ತವೆ. ''ನಮ್ಮನ್ನು ಲೇಖಕರು ಎಂದು ಮಾತ್ರ ಗುರುತಿಸಿ, ನಮ್ಮ ಮತ ಮತ್ತು ಲಿಂಗ ಎರಡೂ ಕೇವಲ ಆಕಸ್ಮಿಕ; ನಮ್ಮ ಸಾಹಿತ್ಯಿಕ ರಚನೆಗಳಿಗೆ ನಿಮ್ಮ ನಾಮವಿಶೇಷಣಗಳ ಅಗತ್ಯವೂ ಇಲ್ಲ; ನೀವು ಕೊಡುವ ರಿಯಾಯಿತಿಗಳೂ ನಮಗೆ ಬೇಡ'' ಎಂದು ಅವರು ಸಹೃದಯ ಓದುಗರಿಗೆ ಹೇಳಿದರೆ ತಪ್ಪೇನೂ ಇಲ್ಲ. ತನ್ನ ಕಸುಬಿನಲ್ಲಿ ಶ್ರದ್ಧೆ, ಅಸ್ಮಿತೆಗಳಿರುವ ಯಾವ ಲೇಖಕನಾದರೂ ಹೇಳಬಹುದಾದ ಮಾತು ಅದು. ಆದರೆ ನಮ್ಮ ಸದ್ಯದ ಕಾಲ, ದೇಶ ಪರಿಸ್ಥಿತಿ, 'ಮುಸ್ಲಿಮ್ ಲೇಖಕ', 'ಮಹಿಳಾ



ಲೇಖಕಿ' ಮುಂತಾದ ಹಣೆಪಟ್ಟಿಗಳನ್ನು ಅನಿವಾರ್ಯಗೊಳಿಸಿಬಿಟ್ಟಿದೆ. ಮುಹಮ್ಮದ್ ಕುಳಾಯಿ, ಬೊಳುವಾರು ಮುಹಮ್ಮದ್ ಕುಂಞಿ, ಫಕೀರ್ ಮುಹಮ್ಮದ್ ಕಟಪಾಡಿ, ಅಬ್ದುಲ್ ರಶೀದ್, ರಹಮತ್ ತರೀಕೆರೆ, ಸಾರಾ ಅಬೂಬಕರ್, ಬಾನೂ ಮುಸ್ತಾಕ್ ಮುಂತಾದವರನ್ನು ಮುಸ್ಲಿಂ ಲೇಖಕರೆಂದು ಸಂಬೋಧಿಸುವುದು ನನ್ನ ವೈಯಕ್ತಿಕ ಆಯ್ಕೆಯಲ್ಲ. ಇವರ ಹೆಸರುಗಳೇ ಇವರ ಬೆನ್ನು ಹತ್ತಿದ ವಿಧಿಯಾಗಿದೆ. ಸಮಕಾಲೀನ ರಾಜಕೀಯ ಮುಸ್ಲಿಮರನ್ನು ಇತರರಿಂದ ಪ್ರತ್ಯೇಕಿಸಿ, ಅವರೆಲ್ಲರಿಗೂ ಒಂದು ವ್ಯಕ್ತಿತ್ವ, ರೂಪ, ಚಹರೆಗಳನ್ನು ಆರೋಪಿಸಿದೆ. ಈ ದೇಶದಲ್ಲಿ ಸರಿಸುಮಾರು ಹದಿನೈದು ಕೋಟಿ ಮುಸ್ಲಿಮರಿದ್ದು, ಅವರಲ್ಲಿ ಗಂಡಸರು, ಹೆಂಗಸರು, ಮಕ್ಕಳು, ಮುದುಕರು, ರೋಗಿಗಳು, ನಿತ್ರಾಣಿಗಳು, ಅರೆತ್ರಾಣಿಗಳು, ಬಲಾಢ್ಯರು, ಬಡಪಾಯಿಗಳು, ನಾನಾ ಭಾಷೆಗಳವರು ಮತ್ತು ಪಂಗಡಗಳವರಿದ್ದಾರೆ. ಈ ವೈವಿಧ್ಯಮಯ ಸಮುದಾಯಕ್ಕೆ ಏಕ ಘನಾಕೃತಿಯ ಸ್ವಭಾವ, ವ್ಯಕ್ತಿತ್ವಗಳನ್ನು ಆರೋಪಿಸುವುದು ಕೇವಲ ಒಂದು ರಾಜಕೀಯ ಪಕ್ಷದ ವೋಟು ಗಳಿಕೆಯ ಹುನ್ನಾರ ಎಂದು ನಾವು ಭಾವಿಸಕೂಡದು. ಅದೊಂದು ಸಮಕಾಲೀನ ಸಾಂಸ್ಕೃತಿಕ ಸಾಮಾಜಿಕ ವಿದ್ಯಮಾನವೂ ಹೌದು. ಈ ಸನ್ನಿವೇಶವನ್ನು ಎದುರು ಹಾಕಿಕೊಂಡು, ಮುಸ್ಲಿಮ್ ಲೇಖಕರು ಇಂದು ಬರೆಯಬೇಕಾಗಿದೆ. ಇತಿಹಾಸಕಾರರು ಮತ್ತು ಸಮಾಜ ಶಾಸ್ತ್ರಜ್ಞರು ಅಖಂಡ ಸಮುದಾಯಗಳ ಬಗ್ಗೆ ಬರೆದಾರು; ಆದರೆ ಲೇಖಕ ಅಖಂಡ ಸಮುದಾಯಗಳ ಕತೆ ಹೇಳಲಾರ. ಬಿಡಿಬಿಡಿ ವ್ಯಕ್ತಿಗಳ ಸುಖ ಕಷ್ಟ ಮತ್ತು ಸಂಸಾರಗಳ ಪಡಿ ಪಾಟಲುಗಳು ಮಾತ್ರ ಅವನಿಗೆ ವಸ್ತುವಾಗಿ ಒದಗಬಲ್ಲವು. ಸಮಕಾಲೀನ ರಾಜಕೀಯ ಮುಸ್ಲಿಮರಿಗೆ ಕೊಡಮಾಡಿರುವ ಏಕಮುಖ ವ್ಯಕ್ತಿತ್ವವನ್ನು ನಿರಾಕರಿಸಿ, ಮುಸ್ಲಿಮ್ ಸಂಸಾರಗಳ ಕಥನವನ್ನು, ಸಂಸಾರಗಳ ಒಳಗೇನೆ ಮುದುಕರ ಅಸಹಾಯಕತೆ, ತರುಣರ ಆಸೆ ಆಕಾಂಕ್ಷೆಗಳು, ಮದುವೆಗೆ ಬೆಳೆದು ನಿಂತಿರುವ ಹೆಣ್ಣುಮಕ್ಕಳ ಪಾಡು, ತಮ್ಮ ಧರ್ಮದ ಕಟ್ಟುಪಾಡುಗಳ ವಿರುದ್ಧ ಸಿಡಿದು ನಿಂತವರ ಬಂಡಾಯ - ಈ ಸಂಗತಿಗಳನ್ನು ನಿರೂಪಿಸುವುದರ ಮುಖಾಂತರವೇ ಮುಸ್ಲಿಮ್ ಲೇಖಕ, ಈ 'ಅಖಂಡ ಸಮುದಾಯ'ದ ಮಿಥ್ಯೆಯನ್ನು ಬಯಲು ಮಾಡುತ್ತಾನೆ. ಮುಹಮ್ಮದ್ ಕುಳಾಯಿ ಈ ಬಗೆಯ 'ಮುಸ್ಲಿಮ್ ಲೇಖಕ'; ಅಂದರೆ ಪ್ರಧಾನ ಧಾರೆಯ ರಾಜಕೀಯ ಸಿದ್ಧಾಂತವೊಂದು ನಾಡಿನ ಮುಸ್ಲಿಮರ ಬಗ್ಗೆ ನೀಡುತ್ತಿರುವ ವಿವರಣೆಗಳಿಗಿಂತ ಭಿನ್ನವಾದ ಮುಸ್ಲಿಮ್ ವ್ಯಕ್ತಿತ್ವದ ಕಥನಗಳನ್ನು ನಿರೂಪಿಸುತ್ತಿರುವ ಲೇಖಕ; ಅವರ

ಓರಗೆಯ ಇತರ ಮುಸ್ಲಿಮ್ ಲೇಖಕರಂತೆ. ಈಗಾಗಲೇ ಪ್ರಕಟವಾಗಿರುವ ಅವರ ಕಥಾ ಸಂಕಲನ, 'ಕದನ ಕುತೂಹಲ' (ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ, ಮಂಗಳೂರು - 2001)ದ ಅಷ್ಟೂ ಕತೆಗಳೂ, ಮುಸ್ಲಿಮರನ್ನು ಬಿಡಿಬಿಡಿ ವ್ಯಕ್ತಿಗಳಾಗಿಯೋ ಸಂಸಾರವಂದಿಗರಾಗಿಯೋ, ಅಥವಾ ಊರು ಮನೆಗಳ ಸ್ಥಳೀಯ ಸಮುದಾಯಗಳ ಸದಸ್ಯರಾಗಿಯೋ ಚಿತ್ರಿಸುವಂತಹವು.

ಪ್ರಸ್ತುತ ಸಂಕಲನದಲ್ಲಿಯೂ ಈ ಬಗೆಯ ಹಲವು ಕತೆಗಳಿವೆ. ಉದಾಹರಣೆಗೆ ಸಂಕಲನದ 'ದನ ಕರು ಹಾಕಿತು' ಎಂಬ ಮೊದಲ ಕತೆ ವೇಗವಾಗಿ ಬೆಳೆಯುತ್ತಿರುವ ಹಾಗೂ ಬದಲಾಗುತ್ತಿರುವ ಸಣ್ಣ ಊರೊಂದರ ಆವರಣವನ್ನು ಪಡೆದಿದೆ. ಇಲ್ಲಿ ಮುಸ್ಲಿಮರು ಇತರರ ಜೊತೆ ಬಾಳುತ್ತಿದ್ದಾರೆ; ಅವರ ಸುಖ ಕಷ್ಟಗಳಲ್ಲಿ ಅಂತಹ ಹೇಳಿಕೊಳ್ಳುವ ವ್ಯತ್ಯಾಸವೂ ಇಲ್ಲ. ಈ ಊರಿನ ಪೇಟೆಯಲ್ಲಿ ಅಂಗಡಿ, ಹೋಟೆಲು ಮುಂತಾದ ವ್ಯವಹಾರ ಮಾಡುತ್ತಿರುವವರಲ್ಲಿ ಸಹ ಇತರ ಮತಸ್ಥರ ಜೊತೆ ಮುಸ್ಲಿಮರೂ ಇದ್ದಾರೆ. 'ಊರಿನವರು ಯಾರು, ಪರ ಊರಿನವರು ಯಾರು' ಎಂದು ತಿಳಿಯಲು ಕಷ್ಟವಾಗುವಷ್ಟು ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಆ ಊರಿನಲ್ಲಿ ಪೇಟೆಯ ವ್ಯಾಪಾರಿಗಳದ್ದೇ ಪರಸ್ಪರ ಕಷ್ಟ ಸುಖಕ್ಕೆ ಆಗುವ ಒಂದು ಪುಟ್ಟ ಸಮುದಾಯ. ಇಲ್ಲಿ ಮತಧರ್ಮ ತಲೆ ಹಾಕುವುದಿಲ್ಲ. ನಮ್ಮ ಕರಾವಳಿಯ ಊರುಗಳಲ್ಲಿ ಈಗ ಮಂದಿರ ಬಿಟ್ಟರೆ ರಾಜಕೀಯವಾಗಿ ಅತ್ಯಂತ ಪ್ರಚೋದಕವಾಗಿರುವುದು ದನ. ಮುಹಮ್ಮದ್ ಕುಳಾಯಿ ಅವರ ಕತೆಯ ಕೇಂದ್ರವೂ ಒಂದು ದನ - ವಾರಿಸುದಾರರಿಲ್ಲದ ಒಂದು ದನ. ಅದು ಪೇಟೆಯ ಅಂಗಡಿಯವರೆಲ್ಲರಿಗೂ ಒಂದು ಸಮಸ್ಯೆಯಾಗಿದೆ. ತಮ್ಮ ಅಂಗಡಿ ಸಾಮಾನಿಗೇ ನೇರ ಬಾಯಿ ಹಾಕುವ ಆ ದನವನ್ನು ಪೇಟೆಯವರಂತೂ 'ಗೋಮಾತೆ' ಎಂದು ಪೂಜಿಸಲಾರರು. ತೊಂಡು ಮೇಯುವ ಆ ದನಕ್ಕೆ ಬಡಿಗೆ ಎತ್ತಿಕೊಳ್ಳದೆ ಅವರಿಗೆ ನಿರ್ವಾಹವೇ ಇಲ್ಲ. ಆದರೆ ಅದೇ ದನ ಪ್ರಸವ ವೇದನೆ ಅನುಭವಿಸುವಾಗ, ಎಲ್ಲ ಅಂಗಡಿಯವರೂ ದನ ಸುಸೂತ್ರವಾಗಿ ಈಯಲಿ ಎಂದು ಕಾತರಿಸುತ್ತಾರೆ; ಪ್ರಾರ್ಥಿಸುತ್ತಾರೆ ಕೂಡ. ತಮ್ಮ ತಮ್ಮ ಅಂಗಡಿ ಮುಂಗಟ್ಟುಗಳನ್ನು ಕಾಯ್ದುಕೊಳ್ಳುವ ಅವರ ಕಾಳಜಿಗೂ ಮತ ಧರ್ಮವಿಲ್ಲ; ಮೂಕ ಜೀವಿಯೊಂದರ ನೋವಿಗೆ ಮಿಡಿಯುವುದಕ್ಕೂ ಮತ ಧರ್ಮವಿಲ್ಲ. ಸಾಮಾನ್ಯ ಜನ ಬದುಕುವುದೇ ಹಾಗೆ; ತಮ್ಮ ತಮ್ಮ ಮಿತಿಯೊಳಗೆ; ತಮಗೆ ಸಾಧ್ಯವಾಗುವ ಮಾನವೀಯ ಅಂತಕರಣದಲ್ಲಿ. ಮುಹಮ್ಮದ್ ಕುಳಾಯಿಯವರ ಕತೆ ಈ ವಸ್ತುಸ್ಥಿತಿಯನ್ನು ತಿಳಿಹಾಸ್ಯದಲ್ಲಿ ಮಾರ್ಮಿಕವಾಗಿ ಚಿತ್ರಿಸುತ್ತದೆ. 'ದನ ಕರು ಹಾಕಿತು' ತನ್ನ ಅರ್ಥವಂತಿಕೆಯಲ್ಲಿ 'ಕದನ ಕುತೂಹಲ' ಸಂಕಲನದ ಅತ್ಯಂತ ಸಾರ್ಥಕ ಕತೆಗಳಲ್ಲಿ ಒಂದಾಗಿರುವ 'ಮೂಸಜ್ಜ ಮತ್ತು ಬೀದಿ ನಾಯಿ'ಯನ್ನು ನೆನಪಿಸುತ್ತದೆ. ಯಾವ ಊರಿನ ಕತೆಯೂ, ಅದು ಬರೇ ಮನುಷ್ಯರನ್ನು ಕುರಿತು ಹೇಳಿದರೆ, ಸಂಪೂರ್ಣವಾಗುವುದಿಲ್ಲ. ನಾಯಿ, ಬೆಕ್ಕು, ದನ, ಆಡು, ಕುರಿ, ಕೋಳಿ ಮತ್ತಿತರ ಪ್ರಾಣಿ ಪಕ್ಷಿಗಳಿಲ್ಲದ ಊರು ಒಂದು ಊರೇ ಅಲ್ಲ. ಮುಹಮ್ಮದ್ ಕುಳಾಯಿ ಅವರ ಈ ಎರಡೂ ಕತೆಗಳೂ ಪ್ರಾಣಿ ಮತ್ತು ಮನುಷ್ಯರ ಸಹಬಾಳ್ವೆಯನ್ನು ಸೊಗಸಾಗಿ ನಿರೂಪಿಸುತ್ತವೆ. ಅವರ ಇನ್ನೊಂದು ಕತೆಯೂ ನನಗೆ ಈಗ ನೆನಪಾಗುತ್ತಿದೆ. 'ಕದನ ಕುತೂಹಲ' ಸಂಕಲನದ 'ಮನುಷ್ಯರು' ಎಂಬ ಕತೆ. ಒಂದು ಆಡಿನ ಆತ್ಮ ವೃತ್ತಾಂತ. ಅದು ತನ್ನ ಕತೆಯ ಜೊತೆ, ತನ್ನನ್ನು ಸಾಕಿ ಬೆಳೆಸಿದ ಮನುಷ್ಯರ ಕತೆಯನ್ನೂ ಕರುಳು ಇರಿಯುವ ವ್ಯಂಗ್ಯದಲ್ಲಿ ಹೇಳುತ್ತದೆ.

'ಪ್ರೀತಿ' ಪ್ರಸ್ತುತ ಸಂಕಲನದ ಇನ್ನೊಂದು ಸಾರ್ಥಕ ಕತೆ. ಕಥೆಯ ನಾಯಕ ಅಬ್ಬು, ಒಂದಾನೊಂದು ಕಾಲದಲ್ಲಿ ಹಣಕಾಸಿನ ಮಟ್ಟಿಗೆ ಅನುಕೂಲವಾಗಿದ್ದವ. ಆದರೆ ಈಗ ಅವನ ಕೈ ಕಟ್ಟಿದೆ. ವ್ಯಾಪಾರ ದಿವಾಳಿ ಎದ್ದಿದೆ. ಅಬ್ಬು ತನ್ನ ಅಹನ್ಯ ಹನಿ ಬದುಕಿಗೆ ಒಗ್ಗಿಕೊಂಡಿದ್ದಾನೆ. ಆದರೆ ಅವನ ಹೆಂಡತಿ ಪಾತುಮ್ಮನಿಗೆ ಕಷ್ಟದ ದಿನಗಳಲ್ಲೂ, ತಾನು ಶ್ರೀಮಂತರ ಮನೆಯಿಂದ ಬಂದವಳು ಎಂಬ ಬಿಗುಮಾನ ಬಿಡುವುದಿಲ್ಲ. ಊಟಕ್ಕೆ ಒಂಟೆ ಮಾಂಸ, ಬಾಸ್ಮತಿ ಅಕ್ಕಿ, ಚಹಾಕ್ಕೆ ಖರ್ಜೂರ ತಂದಿದ್ದೀಯಾ ಎಂದು ತನ್ನ ಗಂಡನನ್ನೂ ಹಂಗಿಸುತ್ತಲೇ ತಾನು ಅದನ್ನೆಲ್ಲಾ ಉಂಡವಳು ಎಂಬ ಹೆಗ್ಗಳಿಕೆಯನ್ನೂ ಅವಳು ಹೇಳಿಕೊಳ್ಳುತ್ತಿದ್ದಾಳೆ. ಬಾಯಿಗೆ ವೀಳೆಯವಿಲ್ಲದಾಗ, ತಾನು ಮಾಳಿಗೆಯ ಮನೆಯ ಸಂತಾನದವಳು ಎಂಬ ಮಾತನ್ನೇ ಜಗಿಯುತ್ತಾ ಪಾತುಮ್ಮ ತನ್ನ ಬಡತನದ ಜೊತೆ ಏಗುತ್ತಿದ್ದಾಳೆ. ಅವಳು ಹೀಗೆ ದೊಡ್ಡ ಗಂಟಲಲ್ಲಿ ತನ್ನ ಅಹಮಿಕೆ ಹೇಳಿಕೊಂಡು ಗಂಡನನ್ನು ಹೀಯಾಳಿಸುತ್ತಿದ್ದರೆ, ಮಗಳು ರುಕಿಯಾ 'ಮೆಲ್ಲಗೆ ಮಾತಾಡಮ್ಮಾ ಅಕ್ಕಪಕ್ಕದವರು ಕೇಳಿಕೊಳ್ತಾ ಇದ್ದಾರೆ' ಎಂದು ಹೇಳುವುದು ತಾಯಿ ಮತ್ತು ಮಗಳ ವಿಭಿನ್ನ ಬಗೆಯ ಅಸ್ಮಿತೆಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಳಿಸುತ್ತದೆ. ವ್ಯಾಪಾರದಲ್ಲಿ ಕೈ ಸೋತ ಗಂಡ, ಅವನ ಜಗಳಗಂಟಿ ಹೆಂಡತಿ ಮತ್ತು ಕೋಮಲೆಯೂ ಸ್ವಾಭಿಮಾನಿಯೂ ಆಗಿರುವ ಮಗಳು - ಈ ಬಡ ಮುಸ್ಲಿಮ್ ಕುಟುಂಬದ ವಿಶಿಷ್ಟ ರೀತಿಯ ಬಡತನದ ನೋವನ್ನು ಮುಹಮ್ಮದ್ ಕುಳಾಯಿ ಹೃದಯ

ಸ್ಪರ್ಶಿ ವಿವರಗಳಲ್ಲಿ ಮೂಡಿಸುತ್ತಾರೆ. ಸದಾ ಗಂಡನನ್ನು ಬೈದು ರಂಪ ವೆಬ್ಬಿಸುತ್ತಿದ್ದ ಪಾತುಮ್ಮ, ಹಾಸಿಗೆ ಹಿಡಿದು ತನ್ನ ಕೊನೆಯ ಕ್ಷಣಗಳನ್ನು ಎಣಿಸುತ್ತಿರುವ ಅಬ್ಬುವನ್ನು ಕಂಡು ಗೋಳಾಡುವುದು ಧ್ವನಿಪೂರ್ಣವಾದ ಒಂದು ವಿವರವಾಗಿದೆ. ಅವಳ ಜಗಳಗಂಟಿತನ ಕೂಡ, ಸಂಸಾರವನ್ನು ಅವಳು ಹಚ್ಚಿಕೊಂಡ ಒಂದು ಬಗೆ; ಜಗಳವಾಡುತ್ತಲೇ ಜೊತೆಯಾಗಿ ಬಾಳುವೆ ಮಾಡುವ ಎಲ್ಲ ಸಂಸಾರಗಳಂತೆ ಪಾತುಮ್ಮಳದ್ದೂ ಒಂದು ಸಂಸಾರ ಎಂದು ನಮಗೆ ಮನವರಿಕೆಯಾಗುವುದು ಕತೆಯ ಆ ಕ್ಷಣದಲ್ಲಿ. ಅಬ್ಬು ತನ್ನ ಸಹನೆಯಲ್ಲಿ ಹೇಗೋ, ಹಾಗೆ ಪಾತುಮ್ಮ ತನ್ನ ಜಗಳಗಂಟಿತನದಲ್ಲಿ ಮತ್ತು ಪಶ್ಚಾತ್ತಾಪದಲ್ಲಿ ನಮಗೆ ಆತ್ಮೀಯಳಾಗುತ್ತಾಳೆ. ಅಬ್ದುಲ್ಲ ಮತ್ತು ಫಾತಿಮಾ ಎಂಬ ಮುಸ್ಲಿಮ್ ಹೆಸರುಗಳು ಕರಾವಳಿಯ ಜನರ ನಾಲಿಗೆಯಲ್ಲಿ ಅಬ್ಬು ಮತ್ತು ಪಾತುಮ್ಮ ಆಗಿವೆ. ಲೇಖಕರು ತಮ್ಮ ಕತೆಯ ಉದ್ದಕ್ಕೂ ಹೆಸರುಗಳ ಈ ತದ್ಭವ ರೂಪಗಳನ್ನೇ ಬಳಸಿದ್ದಾರೆ. ಮುಸ್ಲಿಮರು ಇಲ್ಲಿನ ಬದುಕಿನಲ್ಲಿ ಹೇಗೆ ಹಾಸುಹೊಕ್ಕಾಗಿ ಸೇರಿ ಹೋಗಿದ್ದಾರೆ ಎನ್ನುವುದಕ್ಕೆ ಜನರ ಬಾಯಲ್ಲಿ ಅವರ ಹೆಸರುಗಳು ರೂಪಾಂತರಗೊಳ್ಳುವುದೂ ಒಂದು ಉದಾಹರಣೆ. ಮುಸ್ಲಿಮ್ ಮತ್ತು ಕ್ರೈಸ್ತ ಹೆಸರುಗಳ ಈ ಬಗೆಯ ಕನ್ನಡೀಕರಣಕ್ಕೆ ಕರಾವಳಿಯಲ್ಲಿ ಸಾಕಷ್ಟು ಉದಾಹರಣೆಗಳಿವೆ. ಇಂತಹದ್ದನ್ನೆಲ್ಲಾ ಹೆಕ್ಕಿಕೊಂಡೇ ಒಳ್ಳೆಯ ಕತೆಗಾರ ತನ್ನ ಕತೆಯ ಗೂಡನ್ನು ಕಟ್ಟುವುದು.

ಸಂಕಲನದ ಇನ್ನೊಂದು ಯಶಸ್ವೀ ಕತೆ 'ಐದು ಪವನ್ ಚಿನ್ನ'. ಕಥಾನಾಯಕನೇ ಇಲ್ಲಿ ನಿರೂಪಕನೂ ಹೌದು. ಅವನ ಮದುವೆಯಾಗಿ ಈಗ ಹಲವು ವರ್ಷಗಳು ಕಳೆದಿದ್ದರೂ ಮದುವೆಗೆ ಮೊದಲು ವಾಗ್ದಾನವಾಗಿದ್ದ ವರದಕ್ಷಿಣೆಯಲ್ಲಿ ಐದು ಪವನ್ ಚಿನ್ನ ಅವನಿಗೆ ಇನ್ನೂ ಬಂದಿಲ್ಲ. ಅದು ಅವನನ್ನು ಒಂದು ಗೀಳಿನಂತೆ ಕಾಡುತ್ತಿದೆ. ಕತೆಯ ಉದ್ದಕ್ಕೂ ನಿರೂಪಕನ ಕೊರಗು, ಹಪಾಪಿತನಗಳನ್ನು ಲೇಖಕರು ವ್ಯಂಗ್ಯ, ಹಾಸ್ಯಗಳ ಲಾಘವದಲ್ಲಿ ನಿರೂಪಿಸಿದ್ದು, ಆ ಕಾರಣಕ್ಕೇನೆ ಅವನು ನಮಗೆ ಹತ್ತಿರದವನಾಗುತ್ತಾನೆ. ಅವನು ಆಸೆಬುರುಕ, ಅಲ್ಪ, ಆದರೆ ಸಾಮಾನ್ಯರಿಗಿಂತ ಬೇರೆಯಾದವನಲ್ಲ. ಅವನು ಮುಸ್ಲಿಮನಾದರೂ ಕೊಲೆಗಡುಕನಲ್ಲ; ಅತ್ಯಾಚಾರಿಯಲ್ಲ; ಭಯೋತ್ಪಾದಕ ನಂತೂ ಅಲ್ಲವೇ ಅಲ್ಲ. ಮುಹಮ್ಮದ್ ಕುಳಾಯಿ ಮತ್ತು ಇತರ ಮುಸ್ಲಿಮ್ ಲೇಖಕರು ಸಂಸಾರವಂದಿಗ ಮುಸ್ಲಿಮರ ಕುರಿತು ಬರೆದು, ಪ್ರಚಲಿತ ರಾಜಕೀಯದ ಸುಳ್ಳುಗಳನ್ನು ಬಯಲಿಗೆಳೆಯುತ್ತಾರೆ ಎಂದು ನಾನು



ಹೇಳಿದ್ದು ಈ ಅರ್ಥದಲ್ಲಿ.

'ತೆರೆದಿದೆ ಮನ' ನಮ್ಮನ್ನು ಟೀಸ್ ಮಾಡುವ ಕತೆ. ತಾನು ಪಡೆದ ಸಾಲ - ಅದು ಕೂಡ ತನ್ನ ಸ್ನೇಹಿತನಿಗಾಗಿ ಪಡೆದ ಸಾಲ - ಹಿಂದಿರುಗಿಸಲಾಗದೆ, ಈ ಕತೆಯ ನಿರೂಪಕ ಒದ್ದಾಡುತ್ತಿದ್ದಾನೆ. ಈ ಸಾಲ ತೀರಿಸಲು ಬೇಕಾದ ಮೊತ್ತ ಅವನ ಎದೆಯ ಮೇಲೆ, ಬಡ್ಡಿ ಬೆಳೆಸಿಕೊಳ್ಳುತ್ತ ಹೊರೆಯಾಗಿ ಕೂತಿದೆ. ಅವನಿಗೆ ಎಲ್ಲೂ ಒಂದು ಕಾಸೂ ಹುಟ್ಟುವುದಿಲ್ಲ; ಆದರೆ ಸಾಲ ಕೊಟ್ಟವರು ಮಾತ್ರ ಯಮದೂತರಂತೆ ಅವನ ಕಿಬ್ಬದಿಯ ಕೀಲು ಮುರಿಯಲು ತಯಾರಾಗಿದ್ದಾರೆ. ಕಥಾ ನಾಯಕ ದುಡ್ಡು ಹೊಂದಿಸಲು ಮಾಡುವ ಪ್ರಯತ್ನಗಳನ್ನೆಲ್ಲ ಮಾಡಿ, ಕೊನೆಗೆ ಕೈ ಚೆಲ್ಲಿ, ನಿರುಮ್ಮಳ ಮನಸ್ಸಿನಲ್ಲಿ, ತನ್ನ ಮೇಲೆ ಬಂದೆರಗಲಿರುವ ಸಾಲಿಗರಿಗಾಗಿ ಕಾಯುತ್ತಾ ಕೂರುತ್ತಾನೆ. ಇದೇ ಕತೆಯ ಅಂತ್ಯ. ಮುಹಮ್ಮದ್ ಕುಳಾಯಿಯವರಿಗೆ, ಅವರ ಬರವಣಿಗೆಯಲ್ಲಿ ಒಮ್ಮೊಮ್ಮೆ ಒಂದು ದೌರ್ಬಲ್ಯ ಕಾಡುತ್ತದೆ; ತನ್ನ ಪಾತ್ರಗಳ ಸಂಘರ್ಷ ಮತ್ತು ಬಿಕ್ಕಟ್ಟುಗಳನ್ನು ಸಲೀಸಾಗಿ ಪರಿಹರಿಸಿ, ಸಿನಿಮೀಯವಾಗಿ ಕೊನೆಗೊಳಿಸುವುದು ಅವರ ಅನೇಕ ಕತೆಗಳಲ್ಲಿ ಕಂಡುಬರುತ್ತದೆ. ಮನಮುಟ್ಟುವ ವಿವರ, ಧ್ವನಿಪೂರ್ಣವಾದ ಭಾಷೆಗಳಿಂದ ಕಥನವನ್ನು ನಿರೂಪಿಸುವ ಅವರ ಹಲವು ಒಳ್ಳೆಯ ಕತೆಗಳ ಮುಕ್ತಾಯ ಈ ಕಾರಣಕ್ಕೇನೆ ಅಸಹಜವೆನ್ನಿಸುತ್ತವೆ. ಆದರೆ ಇಲ್ಲಿ ಮಾತ್ರ ಲೇಖಕರು ತನ್ನ ಈ ದೌರ್ಬಲ್ಯಕ್ಕೆ ಪಕ್ಕಾಗದೆ ಕತೆ ಯನ್ನು ಹಠಾತ್ತನೆ ನಿಲ್ಲಿಸಿ ಬಿಡುತ್ತಾರೆ. ತನಗೆ ಬೀಳಲಿರುವ ಹೊಡೆತಗಳಿಗಾಗಿ ಕಾಯುತ್ತ ಕುಳಿತ ಬಡಪಾಯಿ ಸಾಲಗಾರನ ಚಿತ್ರದೊಂದಿಗೆ ಕತೆ ಮುಗಿಯುತ್ತದೆ. ಓದುಗನ ಮನಸ್ಸಿನಲ್ಲಿಯೂ ಇದು ಒಂದು ರೂಪಕವಾಗಿ ನಿಲ್ಲುವಷ್ಟು ಶಕ್ತಿಯುತವಾಗಿದೆ.

ಕುಳಾಯಿಯವರ ಇನ್ನೊಂದು ಕತೆ 'ಆಯಿಶಾ' ಮಧ್ಯಮ ವರ್ಗದ ಮುಸ್ಲಿಮ್ ಕುಟುಂಬವೊಂದರ ಬಿಕ್ಕಟ್ಟನ್ನು ನಿರೂಪಿಸುತ್ತದೆ. ಕತೆಯ ವಿವರಗಳು ಮುಸ್ಲಿಮ್ ವಿವಾಹ ಮತ್ತು ಕುಟುಂಬ ಪದ್ಧತಿಯಿಂದ ಎತ್ತಿಕೊಂಡಂತಹವುಗಳು; ಆದರೆ ಅವುಗಳ ಮುಖಾಂತರ, ಕತೆ ಕಟ್ಟಿ ಕೊಡುವ ಜೀವನಾನುಭವ, ಯಾವುದೇ ಕುಟುಂಬದ್ದೂ ಆಗಬಹುದು. ಸೊಸೆಯಾಗಿ ಇನ್ನೊಂದು ಮನೆಗೆ ಹೋಗಬೇಕಾದ ಹೆಣ್ಣು ಅತ್ತೆಯ ಜೊತೆ ಏಗಬೇಕಾದ ಸ್ಥಿತಿ ಮತ್ತು ಕಾಲಾನುಕ್ರಮದಲ್ಲಿ ಅವಳೇ ಒಬ್ಬಳು ಅತ್ತೆಯಾಗಿ ತನ್ನ ಸೊಸೆಯನ್ನು ಸಂಭಾಳಿಸಬೇಕಾದ ಅನಿವಾರ್ಯತೆ - ಯಾವ ಹೆಣ್ಣೂ ಇದಕ್ಕೆ ಹೊರತಲ್ಲ. ಕುಟುಂಬ, ಎಲ್ಲ ಜಾತಿ ಧರ್ಮಗಳಲ್ಲೂ ಒಂದು ಯಜಮಾನಿಕೆಯ ವ್ಯವಸ್ಥೆಯಾಗಿದ್ದು, ಯಾರ

ಮಾತು ಯಾರು ಪಾಲಿಸಬೇಕು ಎಂಬುದು ಎಲ್ಲ ಕುಟುಂಬಗಳಲ್ಲೂ ಒಂದು ಮುಖ್ಯ ಸಮಸ್ಯೆ. ಸಮಾನ ನೆಲೆಯಲ್ಲಿ ಪರಸ್ಪರ ಪ್ರೀತಿ, ಗೌರವ ಮತ್ತು ಕಾಳಜಿಗಳಿಲ್ಲದೆ, ಕುಟುಂಬಗಳಲ್ಲಿ ನೆಮ್ಮದಿಯೂ ಇರಲು ಸಾಧ್ಯವಿಲ್ಲ. ಈ ಕತೆಯ ಕೊನೆಯಲ್ಲಿ ತಾಯಿ, ಮಗ ಮತ್ತು ಸೊಸೆ ಮೂವರೂ ಈ ಪ್ರೀತಿ, ಗೌರವ, ಕಾಳಜಿಗಳನ್ನು ಅನಾಮತ್ತಾಗಿ ಎಂಬಂತೆ ಪಡೆದು ಕೊಂಡು ಬಿಡುತ್ತಾರೆ! ಆದಾಗ್ಯೂ ಈ ಕತೆಯಲ್ಲಿ ಚಿತ್ರಿತವಾಗಿರುವ ಕುಟುಂಬದ ಅಧಿಕಾರದ ಸಂರಚನೆ ಸಹಜವಾಗಿದೆ; ಸಂಭಾವ್ಯವೂ ಆಗಿದೆ. ಪ್ರಸ್ತುತ ಸಂಕಲನದ 'ಋಣ' ಕೂಡಾ ಇಂತಹದ್ದೇ ಇನ್ನೊಂದು ಸಾರ್ಥಕ ಕತೆ.

ಮುಹಮ್ಮದ್ ಕುಳಾಯಿ ಅವರ ಪ್ರಸ್ತುತ ಸಂಕಲನದಲ್ಲಿ ಊರು, ಮನೆ, ಸಂಸಾರಗಳ ನಿರ್ದಿಷ್ಟವೂ ವಿವರ ಖಚಿತವೂ ಆದ ನಿರೂಪಣೆಯ ಬದಲಿಗೆ ಒಂದು ಕಲ್ಪನೆಯನ್ನೇ ವಿಸ್ತರಿಸುತ್ತಾ ಹೋದ ಕತೆಗಳೂ ಇವೆ. 'ಇಂಟರ್‌ವ್ಯೂ' ಮತ್ತು 'ಮುನ್ನುಡಿ' ಈ ಬಗೆಯ ಕತೆಗಳು. ಉದ್ಯೋಗ ಅರಸುತ್ತಿರುವ ಬಡವರ ಮನೆಯ ಹತಾಶ ತರುಣಿಯ ಹಗಲುಗನಸಿನ ಒಂದು ವೃತ್ತಾಂತವೇ ಇಂಟರ್‌ವ್ಯೂ. ಕಲಾತ್ಮಕ ಪ್ರತಿಭೆಯ ಅಪಾಂಗರಿಬ್ಬರು 'ಮುನ್ನುಡಿ'ಯ ಪಾತ್ರಗಳು. ಆತ ಸಂಗೀತಗಾರ, ಆದರೆ ಹುಟ್ಟು ಕುರುಡ. ಆಕೆ ಪ್ರತಿಭಾವಂತ ಲೇಖಕಿ; ಆದರೆ ಎರಡು ಕಾಲುಗಳನ್ನೂ ಕಳೆದುಕೊಂಡವಳು. ಈ ದುಃಖಿಗಳ ಮುಂದಿನ ಕತೆ ನೀವೇ ಊಹಿಸಬಹುದಾದಂತೆ ಮದುವೆಯಲ್ಲಿ ಸುಖಾಂತ್ಯ. 'ಇಂಟರ್‌ವ್ಯೂ' ಮತ್ತು 'ಮುನ್ನುಡಿ'ಯ ಪಾತ್ರಗಳು ಎಲ್ಲಿಯೂ ಸಲ್ಲುವಂತಹವು; ಪ್ಲಾಸ್ಟಿಕ್ ಹೂವುಗಳ ಹಾಗೆ. ಬಡತನ ಮತ್ತು ಮೂವರು ತಂಗಿಯರನ್ನು ಬೆನ್ನಿಗಿಟ್ಟುಕೊಂಡು ಉದ್ಯೋಗ ಅರಸುತ್ತಿರುವ ತರುಣಿ ಅಥವಾ ಪ್ರತಿಭಾವಂತ ಅಪಾಂಗರಿಗೆ ಕರಾವಳಿಯ ಊರೊಂದರ ಆವರಣವೇ ಬೇಕೆಂದಿಲ್ಲ. ಜಗತ್ತಿನ ಯಾವ ಮೂಲೆಯಲ್ಲಾದರೂ ಅವರನ್ನು ನೆಲೆಗೊಳಿಸಬಹುದು. ಕತೆಗಾರ ಒಂದೋ ತನ್ನ ಕತೆಯನ್ನು ನಿರ್ದಿಷ್ಟ ಕಾಲ ದೇಶಗಳಲ್ಲಿ ನೆಲೆಗೊಳಿಸಬೇಕು ಅಥವಾ ತನ್ನ ಕಾಲ್ಪನಿಕ ಕಥಾ ಲೋಕ ವಾಸ್ತವ ಲೋಕದಷ್ಟೇ ನಿಜವೆಂದು ಭಾಷೆಯಲ್ಲಿ ಕಾಣಿಸಬೇಕು. ಮುಹಮ್ಮದ್ ಕುಳಾಯಿ ಮೊದಲು ಹೇಳಿದ ರೀತಿಯಲ್ಲಿ ಬರೆದಿರುವ ಬಹುತೇಕ ಎಲ್ಲಾ ಕತೆಗಳೂ ಸಾರ್ಥಕ ರಚನೆಗಳಾಗಿವೆ. ಆದರೆ 'ಇಂಟರ್‌ವ್ಯೂ', 'ಮುನ್ನುಡಿ' ಮತ್ತು 'ಅನಾವರಣ'ದ ಕತೆಗಳ ಪಾತ್ರಗಳು ನೈಜವೆಂದೇ ನನಗೆ ಅನ್ನಿಸಲಿಲ್ಲ. ನಿರುದ್ಯೋಗ, ಬಡತನ, ಅಪಾಂಗತ್ವ ಮುಂತಾದ ವಾಸ್ತವ ಲೋಕದ, ಆದರೆ ಸಾರ್ವತ್ರಿಕವಾದ ಸಂಗತಿಗಳು ಸಾಹಿತ್ಯದಲ್ಲಿ ಜೀವ ತಳೆಯಬೇಕಾಗಿರುವುದು ಊರು ಮನೆಗಳ ವಿವರದ ಮುಖಾಂತರವೇ. ಈ ಕಾರಣಕ್ಕೇನೆ 'ಪ್ರೀತಿ'ಯ ಅಬ್ಬು, ಪಾತುಮ್ಮ ಮತ್ತು ಅವರ ಮಗಳು ರುಕಿಯಾ, 'ದನ ಕರು ಹಾಕಿತು' ಕತೆಯ ಪಾತ್ರಗಳು, 'ಐದು ಪವನ್ ಚಿನ್ನ' ಮತ್ತು 'ತೆರೆದಿದೆ ಮನೆ ಬಾ... ಓ...' ಕತೆಗಳ ನಿರೂಪಕರು, 'ಆಯಿಷಾ' ಹಾಗೂ ಮುಹಮ್ಮದ್ ಕುಳಾಯಿಯವರ ಹಿಂದಿನ ಸಂಕಲನ, 'ಕದನ ಕುತೂಹಲ'ದ ಅಪ್ಪೂ ಪಾತ್ರಗಳು ನಮ್ಮೆದುರು ಜೀವಂತವಾಗಿ ಒಡಮೂಡುತ್ತವೆ. ಆದರೆ 'ಇಂಟರ್‌ವ್ಯೂ', 'ಮುನ್ನುಡಿ', 'ಅನಾವರಣ'ಗಳ ಪಾತ್ರಗಳು ನೆರಳಿನ ಆಕೃತಿಗಳಂತೆ ಭಾಸವಾಗುತ್ತವೆ. ಲೋಕಜೀವನವನ್ನು ಚಿತ್ರಿಸುವ ಆಕಾಂಕ್ಷೆಯುಳ್ಳ ಲೇಖಕರೆಲ್ಲ ನೆನಪಿನಲ್ಲಿಡಬೇಕಾದ ಮಾತೊಂದನ್ನು ಕವಿ ಗೋಪಾಲಕೃಷ್ಣ ಅಡಿಗ ತನ್ನ 'ಸ್ವಾತಂತ್ರ್ಯ: 1958ರ ಪಾಠ' ಎಂಬ ಕವಿತೆಯಲ್ಲಿ ಹೇಳಿದ್ದಾರೆ.

> ''..........ಕಲ್ಪನೆಯೊಳಗೆ
> ಬೀಜವೊಂದೇ ಹಬ್ಬಿ ತಬ್ಬಬಹುದಖಿಳಾಂಡ ಕೋಟಿಯನ್ನು
> ಪ್ರಾಣವೋ ಅಸ್ತಿ ಪಂಜರ ಬದ್ಧ; ಮೋಡವೇ
> ಇಳಿವಾಗ ತನುರೂಪಿ ಬಿಂದು!..............''
>
> (ಸಮಗ್ರ ಕಾವ್ಯ, ಸಾಕ್ಷಿ ಪ್ರಕಾಶನ, ಬೆಂಗಳೂರು-1976, ಪುಟ. 296)

ವಿವರ ಖಚಿತ ಚಿತ್ರಣದ ಅಸ್ತಿಪಂಜರವಿಲ್ಲದೆ ಕತೆಯ ಪ್ರಾಣವೂ ಇಲ್ಲ. ನೀರ ಹನಿಯ ಸದೇಹ ರೂಪ ತಳೆಯದ ಆಕಾಶದ ಮೋಡ ಸಾರ್ಥಕವಲ್ಲ. ಭಾಷೆಯಲ್ಲಿ ಒಡಮೂಡದ ಭಾವವೂ ಸಾರ್ಥಕವಲ್ಲ. ಇದರ ಅರಿವು ಮುಹಮ್ಮದ್ ಕುಳಾಯಿ ಅವರಿಗೆ ಇದೆ ಎನ್ನುವುದಕ್ಕೆ ಅವರ ಹೆಚ್ಚಿನ ಕತೆಗಳೇ ನಿದರ್ಶನ.

ಮುಹಮ್ಮದ್ ಕುಳಾಯಿ ಅವರ ಬರವಣಿಗೆ ನಿರಂತರವಾಗಿ ಮುಂದುವರಿಯಲಿ ಎಂದು ಹಾರೈಸುತ್ತೇನೆ. ಈ ಬಗೆಯ 'ಮುಸ್ಲಿಮ್' ಬರವಣಿಗೆಯೂ ನಮ್ಮ ಕಾಲದ ಕೆಡುಕನ್ನು ಎದುರಿಸುವ ಒಂದು ಬಗೆ ಎಂಬುದು ನನ್ನ ದೃಢವಾದ ನಂಬಿಕೆ. ತಮ್ಮ ಈ ಸಂಕಲನಕ್ಕೆ ಮುನ್ನುಡಿ ಬರೆಯಲು ಹೇಳಿದ ಅವರ ಪ್ರೀತಿ ವಿಶ್ವಾಸಗಳಿಗೆ ನಾನು ಕೃತಜ್ಞ.

**06-02-2007** **ಜಿ. ರಾಜಶೇಖರ**

ಉಡುಪಿ

## ಪರಿವಿಡಿ


| | |
|---|---|
| ದನ ಕರು ಹಾಕಿತು | 17 |
| ಇಂಟರ್‌ವ್ಯೂ | 28 |
| ಮುನ್ನುಡಿ | 38 |
| ಪ್ರೀತಿ | 51 |
| ಐದು ಪವನ್ ಚಿನ್ನ | 67 |
| ತೆರೆದಿದೆ ಮನೆ ಬಾ... ಓ... | 74 |
| ಆಯಿಷಾ | 84 |
| ಅನಾವರಣ | 93 |
| ಋಣ | 104 |

# ದನ ಕರು ಹಾಕಿತು

ಹತ್ತು ವರ್ಷಗಳ ಹಿಂದೆ ನಮ್ಮೂರನ್ನು ಒಂದು ಹಳ್ಳಿಯೆಂದೇ ಹೇಳಬಹುದಿತ್ತು. ಆದರೆ ಈಗ ಅದು ಹಾಗಿಲ್ಲ. ತುಂಬಾ ಬೆಳೆದಿದೆ. ಊರೊಳಗೆ ಈಗ ಸುಮಾರು ಹನ್ನೊಂದು ಬಾರ್ ಎಂಡ್ ರೆಸ್ಟೋರೆಂಟ್‌ಗಳಿವೆ. ಒಂಭತ್ತು ವೈನ್‌ಶಾಪ್‌ಗಳಿವೆ. ಮೂರು ಶರಾಬು ಅಂಗಡಿಗಳಿವೆ. ಎರಡು ಕ್ಲಬ್ ಹೆಸರಲ್ಲಿ ನಡೆಯುವ ಜುಗಾರಿ ಅಡ್ಡೆಗಳಿವೆ. ಒಂದು ಲೈವ್‌ಬ್ಯಾಂಡ್ ಇದೆ. ಇಲ್ಲಿ, ಹಿಂದೆ ರಾಜ ಮಹಾರಾಜರುಗಳ ದರ್ಬಾರುಗಳಲ್ಲಿದ್ದಂತೆ ಹತ್ತಕ್ಕೂ ಹೆಚ್ಚು ಸುಂದರಿಯರಾದ ನರ್ತಕಿಯರಿದ್ದಾರೆ. ದೊಡ್ಡ ದೊಡ್ಡ ಕಟ್ಟಡಗಳು, ಪರವೂರಿಂದ ಬಂದ ವ್ಯಾಪಾರಿಗಳು, ಸುಂದರವಾದ ಮನೆಗಳು, ಬೇರೆ ಬೇರೆ ಭಾಷೆ ಮಾತನಾಡುವ ಜನರು, ಹೀಗೆ ಇಡೀ ಊರಿನ ಚಿತ್ರಣವೇ ಬದಲಾಗಿದೆ. ಇಲ್ಲಿ ಈಗ ಈ ಊರಿನವರು ಯಾರು? ಪರ ಊರಿನವರು ಯಾರು? ಎಂಬುದೇ ತಿಳಿಯುತ್ತಿಲ್ಲ. ಅಷ್ಟೊಂದು ಜನಜಂಗುಳಿ. ಅದಕ್ಕೇ ಈ ಊರನ್ನು ಈಗ ಒಂದು ಸಣ್ಣ ಪಟ್ಟಣವೆಂದು ಹೇಳುವುದು.

ಪಟ್ಟಣವಾದರೂ ಇಲ್ಲಿಯ ಬಸ್ಸುಗಳು ಊರೊಳಗೆ ಬರುವುದಿಲ್ಲ. ಅದಕ್ಕೆ ಕಾರಣ ಇಲ್ಲಿಯ ಕಿರಿದಾದ ರಸ್ತೆಗಳು. ಬಸ್ಸು ಬಂದು ನಿಲ್ಲುವ ತಾಣ ಮಾತ್ರ ಇನ್ನೂ ಅದೇ ಹತ್ತು ವರ್ಷಗಳ ಹಿಂದಿನ ಹಳ್ಳಿಯಂತೆಯೇ ಇದೆ. ನಿಲ್ದಾಣದ ಎದುರುಬದಿಯಲ್ಲಿ ನೂರು ವರ್ಷಗಳಷ್ಟು ಹಳೆಯದಿರಬಹುದಾದ ಹಂಚಿನ ಕಟ್ಟಡದಲ್ಲಿ ಕಾಮತರ ಬಟ್ಟೆ ಅಂಗಡಿ, ರಾಮ ಭಟ್ಟರ ಮೋಹಿನಿ ವಿಲಾಸ, ಅಬ್ಬು ಬ್ಯಾರಿಯ ದಿನಸಿ ಅಂಗಡಿ, ರವಿಯಣ್ಣನ ತರಕಾರಿ ಅಂಗಡಿ, ಗಣೇಶನ



ಟೆಲಿಫೋನು ಬೂತು, ಮೋಂತು ಪೊರ್ಬುನ ಸೈಕಲ್ ಶಾಪ್, ಹಸನಬ್ಬನ ಹಣ್ಣಿನ ಅಂಗಡಿ, ಜೋಸೆಫನ ಕಬ್ಬಿನ ಹಾಲು ಹೀಗೆ ಸಾಲು ಸಾಲಾಗಿ, ದೂರದಿಂದ ನೋಡುವವರಿಗೆ ಒಂದು ರೈಲು ನಿಂತಂತೆ ಕಂಡರೂ ಕಾಣಬಹುದು. ಇಲ್ಲಿಯ ಒಂದು ಚಿಕ್ಕ ಬದಲಾವಣೆ ಎಂದರೆ, ಎರಡು ವರ್ಷಗಳ ಹಿಂದೆ ಇಲ್ಲಿನ ಗೆಳೆಯರ ಬಳಗದವರು ಕಟ್ಟಿಸಿದ ಬಸ್ಸು ನಿಲ್ದಾಣ. ನೆಲಕ್ಕೂ, ಬೆಂಚಿಗೂ, ಕಂಬಕ್ಕೂ ಕಂದು ಬಣ್ಣದ ಗ್ರಾನೈಟ್ ಹಾಸಿ, ಸುಮಾರು ಐವತ್ತು ಜನ ಒಟ್ಟಿಗೆ ನಿಲ್ಲಬಹುದಾದ ಸಿಮೆಂಟು, ಕಲ್ಲಿನಿಂದ ಕಟ್ಟಿದ ಈ ಭವ್ಯ ನಿಲ್ದಾಣದ ಒಳಗೆ ಚಪ್ಪಲಿ ಹಾಕಿ ಹೋಗಲೂ ಮನಸ್ಸಾಗುವುದಿಲ್ಲ. ಅಷ್ಟೊಂದು ಸುಂದರವಾದ ನಿಲ್ದಾಣವಿದು. ಮಾತ್ರವಲ್ಲ ಈ ನಿಲ್ದಾಣ ಇಡೀ ಊರಿಗೆ ಒಂದು ದ್ವಾರದ ಕಳೆ ತಂದಿದೆ. ಈ ನಿಲ್ದಾಣ ಆದ ಮೇಲೆ ಅನತಿ ದೂರದಲ್ಲಿ ಒಂದು ರಿಕ್ಷಾ ಪಾರ್ಕ್ ಕೂಡಾ ಸ್ಥಾಪನೆಯಾಗಿದೆ. ಒಂದು ಎಂಟು - ಹತ್ತು ರಿಕ್ಷಾಗಳು, ಕಾರು, ಟೆಂಪೋಗಳು ಈಗ ಇಲ್ಲಿ ಜನರ ಸೇವೆಗಾಗಿ ಸದಾ ಕಾಯುತ್ತಿರುತ್ತವೆ. ಈ ಎಲ್ಲಾ ಬದಲಾವಣೆಯಿಂದಾಗಿಯೇ ಈ ಊರನ್ನು ಒಂದು ಪಟ್ಟಣವೆಂದು ನಾನು ಕರೆದದ್ದು.

ಸುಮೂರು ಮೂರು ತಿಂಗಳ ಹಿಂದೆ ಈ ಊರಿನಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು. ವಾರೀಸುದಾರರಿಲ್ಲದ ಹಸುವೊಂದು ರಸ್ತೆಬದಿಯಲ್ಲಿಯೇ ಕರು ಹಾಕಿಬಿಟ್ಟಿತು. ಹಸು ಕರು ಹಾಕುವುದು ವಿಚಿತ್ರ ಘಟನೆಯಲ್ಲ. ಆದರೆ ಈ ಹಸು ಹಾಕಿದ ಕರುವಿಗೆ ಐದು ಕಾಲು. ಭುಜದಿಂದ ಸೊಂಡಿಲಿನಂತೆ ಇಳಿಬಿದ್ದ ಐದನೇ ಕಾಲು ನೆಲದಿಂದ ಅರ್ಧ ಫೀಟು ಮೇಲಕ್ಕೆ ನೇತಾಡುತ್ತಿತ್ತು. ಪತ್ರಿಕೆಯವರು ಈ ಸುದ್ದಿಯನ್ನು ಕರುವಿನ ದೊಡ್ಡ ಫೊಟೊ ಸಹಿತ ಅಚ್ಚು ಹಾಕಿಬಿಟ್ಟರು. ವಿಷಯ ತಿಳಿದ ಊರ, ಪರವೂರ ಜನ ಈಗ ಹಿಂಡು ಹಿಂಡಾಗಿ ಈ ವಿಚಿತ್ರ ಕರುವನ್ನು ನೋಡಲು ಬರುತ್ತಿದ್ದಾರೆ. ಹಸು ಮತ್ತು ಕರುವನ್ನು ಬಸ್ಸು ನಿಲ್ದಾಣದ ಬಳಿ ಇರುವ ಹುಣಸೆ ಮರಕ್ಕೆ ಕಟ್ಟಿ ಹಾಕಲಾಗಿದೆ. ಈ ಹಸು ಮತ್ತು ಕರುವಿನ ಹಿಂದೆ ಒಂದು ದೊಡ್ಡ ಕಥೆಯೇ ಇದೆ. ಅದನ್ನೇ ನಾನಿಲ್ಲಿ ಹೇಳಹೊರಟಿರುವುದು.

ಸುಮಾರು ನಾಲ್ಕೈದು ತಿಂಗಳ ಹಿಂದೆ, ಒಂದು ಬೆಳಗ್ಗೆ ಬಸ್ಸು ನಿಲ್ದಾಣದ ಮುಂದಿನ ಕಟ್ಟಡದ ಎಲ್ಲ ಅಂಗಡಿಗಳು ತೆರೆದಿದ್ದವು. ತರಕಾರಿ ಅಂಗಡಿಯ ರವಿಯಣ್ಣ ತನ್ನ ಅಂಗಡಿಯನ್ನು ಬಿಟ್ಟು ಅಲ್ಲೇ ಹತ್ತಿರವಿದ್ದ ಬೇಲಿಗೆ ಮುಖಮಾಡಿ ಕುಕ್ಕರುಗಾಲಿನಲ್ಲಿ ಕುಳಿತಿದ್ದರೂ ಅವನ ಎರಡು ಕಣ್ಣುಗಳೂ ಬೆನ್ನ ಹಿಂದಿನ ತನ್ನ ಅಂಗಡಿಯತ್ತಲೇ ಇದ್ದವು. ಆಗಲೇ ಅದೆಲ್ಲಿಂದ ಬಂತೋ ಮೂರು ಹಸುಗಳ ಒಂದು ಹಿಂಡು! ರವಿಯಣ್ಣ ನೋಡುತ್ತಿದ್ದಂತೆಯೇ ಅದರಲ್ಲಿ ಒಂದು ಹಸು ಅವನ ಅಂಗಡಿಗೆ ನುಗ್ಗಿ ಜಗಲಿಯಲ್ಲಿ ಅಟ್ಟಿ ಕಟ್ಟಿದ್ದ ಬಸಳೆಯ ಕಟ್ಟಕ್ಕೆ 'ಗಬಕ್ಕ'ಂತ ಬಾಯಿ ಹಾಕಿಯೇ ಬಿಟ್ಟಿತು. ರವಿಯಣ್ಣ

ಇತ್ತ ಸರಿಯಾಗಿ ಮೂತ್ರ ಮಾಡಲೂ ಆಗದೆ, ಎದ್ದು ಹೋಗಲೂ ಸಾಧ್ಯವಾಗದೆ ಹೊಯ್... ಹೊಯ್... ಎಂದು ಕುಳಿತಲ್ಲಿಂದಲೇ ಬೊಬ್ಬೆ ಹೊಡೆಯುವುದೂ, ದಿನಸಿ ಅಂಗಡಿಯ ಅಬ್ಬು ಬ್ಯಾರಿ ಆ ದೃಶ್ಯವನ್ನು ನೋಡುವುದೂ ಸರಿ ಹೋಯಿತು. ಅಬ್ಬು ಬ್ಯಾರಿ ಟೆಲಿಫೋನ್ ಬೂತಿನ ಗಣೇಶನನ್ನು ಕರೆದುಕೊಂಡು ಹಸುವನ್ನು ಅದೆಷ್ಟು ದೂರ ಅಟ್ಟಿಸಿಕೊಂಡು ಹೋದರೂ ಹಸು ಎರಡು ಕಟ್ಟು ಬಸಳೆಯನ್ನು ಬಾಯಲ್ಲಿಟ್ಟುಕೊಂಡು ಓಡಿಯೇ ಬಿಟ್ಟಿತು.

ಮೂತ್ರ ಮಾಡಿ ಬರುತ್ತಾ ರಸ್ತೆಯಲ್ಲಿ ನಿಂತ ರವಿಯಣ್ಣ ''ಹೋಯಿತಲ್ಲ ಅಬ್ಬು, ಬೆಳಿಗ್ಗೆ ಬೆಳಿಗ್ಗೆ ಬೋಣಿಗೆ ಹತ್ತು ರೂಪಾಯಿ ಲೋಸ್ ಆಯಿತಲ್ಲಾ ಎಲ್ಲಿಂದ ಬಂತು ಈ ಶನಿ? ನಾನು ಮೂತ್ರ ಮಾಡ್ಲಿಕ್ಕೇ ಹೋಗಬಾರದಿತ್ತು ಅಲ್ಲವಾ?'' ಎಂದು ಬೇಸರ ವ್ಯಕ್ತಪಡಿಸಿದ.

ಹೀಗೆ ಒಂದು ತಿಂಗಳಲ್ಲಿ ಇಂತಹ ಮೂರ್‍ನಾಲ್ಕು ಘಟನೆಗಳು ಸಂಭವಿಸಿದವು. ಈ ಹಸುಗಳು ಒಮ್ಮೆ ಹೂವಿನಂಗಡಿಯ ಬುಟ್ಟಿಗೇ ಬಾಯಿ ಹಾಕಿ ಹಲವಾರು ಹೂಗಳನ್ನು ನಾಶಪಡಿಸಿದರೆ, ಮತ್ತೊಮ್ಮೆ ಹಸನಬ್ಬನ ಹಣ್ಣಿನಂಗಡಿಯ ಪೆಟ್ಟಿಗೆಯನ್ನೇ ಮಗುಚಿ ಹಾಕಿದ್ದವು. ಇನ್ನೊಮ್ಮೆ ಜೋಸೆಫ್‌ನ ಕಬ್ಬಿನ ಕಟ್ಟವನ್ನು ಎಳೆದುಕೊಂಡು ಹೋಗಿ ಪುಡಿಗೈದಿದ್ದವು. ಹೀಗೆಲ್ಲ ಆಗುವಾಗ ಅಂಗಡಿಯವರೆಲ್ಲ ಒಟ್ಟಾದರು.

''ಎಂತ ಮಾಡುವುದು ಮಾರಾಯ? ಈ ಹಸುಗಳ ಉಪದ್ರ ಜೋರಾಯಿತಲ್ಲಾ? ಅವುಗಳ ಮುಂದೆ ನಿಲ್ಲಲಿಕ್ಕೇ ಹೆದರಿಕೆ ಆಗ್ತದೆ. ದೊಡ್ಡ ಆನೆಯಂತಿವೆ. ಹಾಯಲಿಕ್ಕೇ ಬರ್ತವೆ. ಎಂತ ಮಾಡುವುದು?'' ರವಿಯಣ್ಣ ತನ್ನ ಚಿಂತೆ ವ್ಯಕ್ತಪಡಿಸಿದ.

''ನೋಡಿ, ಇನ್ನು ನಾವೆಲ್ಲ ಒಂದೊಂದು ಬಡಿಗೆ ಇಟ್ಟುಕೊಳ್ಳುವುದು ಒಳ್ಳೆಯದು. ಅದು ಈ ಕಡೆ ಬಂತೂ ಎಂದರೆ ಎಲ್ಲಾ ಕೂಡಿ ಅದರ ಒಂದು ಕಾಲು ತುಂಡು ಮಾಡಬೇಕು. ಮತ್ತೆ ಅದು ಈ ಕಡೆ ತಿರುಗಿಯೂ ನೋಡುವುದಿಲ್ಲ. ಏನಂತೀರಾ?'' ಅಬ್ಬು ಬ್ಯಾರಿ ತನ್ನ ಸಲಹೆ ನೀಡಿದ.

ಮರುದಿನದಿಂದ ಎಲ್ಲರೂ ತಮ್ಮ ತಮ್ಮ ಅಂಗಡಿಗಳಲ್ಲಿ ಲಾಠಿಯಂತಹ ಉದ್ದದ ಒಂದು ಬೆತ್ತವನ್ನು ಇಟ್ಟುಕೊಂಡರು.

ಬೆತ್ತ ನೋಡಿದ ಹಸುಗಳು ಮತ್ತೆ ಅಂಗಡಿಯತ್ತ ಬರುವುದು ಕಡಿಮೆಯಾಯಿತು. ಆದರೆ ಬಸ್ಸು ನಿಲ್ದಾಣ ಮಾತ್ರ ಸೆಗಣಿ ಮೂತ್ರದಿಂದ ಗಲೀಜಾಗಿ ಯಾರೂ ಅದರೊಳಗೆ ಕಾಲಿಡದಂತಾಗಿತ್ತು.

ಒಂದು ದಿನ ಮಧ್ಯಾಹ್ನದ ಹೊತ್ತು ಅಬ್ಬು ಬ್ಯಾರಿ ಬೆತ್ತದಿಂದ ಒಂದು ಹಸುವನ್ನು ಕೈಗೆ ಬಂದಂತೆ ಹೊಡೆಯುತ್ತಾ ಬಡಿಯುತ್ತಾ ಅಟ್ಟಿಸಿಕೊಂಡು ಹೋಗುವುದನ್ನು



ಬೇರೆ ಅಂಗಡಿಗಳವರು ಹೊರಗೆ ನಿಂತು ನೋಡತೊಡಗಿದರು. ಅಬ್ಬು ಬ್ಯಾರಿಯ ಹೊಡೆತಕ್ಕೆ ಹಸುವು ಒಂದೇ ಸಮನೆ ಅರಚುತ್ತಾ ಓಡುತ್ತಿತ್ತು. ಸುಮಾರು ಒಂದು ಫರ್ಲಾಂಗಿನಷ್ಟು ಓಡಿಸಿದ ಅಬ್ಬು ಮತ್ತೆ ಸುಸ್ತಾಗಿ, ತನ್ನ ಕಾಲರ್‌ನಡಿಯಲ್ಲಿದ್ದ ಟವೆಲ್‌ನಿಂದ ಬೆವರೊರೆಸಿಕೊಳ್ಳುತ್ತಾ, ಮತ್ತೊಂದು ಕೈಯಲ್ಲಿದ್ದ ಬೆತ್ತವನ್ನು ಊರುತ್ತಾ ಶ್ವಾಸವನ್ನು ಎಳೆದು ಎಳೆದು ಬಿಡುತ್ತಾ ಹಿಂದೆ ಬರುತ್ತಿದ್ದವನನ್ನು ಮೋಹಿನಿ ವಿಲಾಸದ ರಾಮ ಭಟ್ಟರು ಕರೆದು,

''ಹೌದನಾ ಅಬ್ಬು, ನೀನು ಹೀಗೆ ಆ ಬಾಯಿ ಬರದ ಹಸುವಿಗೆ ಹೊಡೆಯುತ್ತಿಯಲ್ಲಾ. ಇದು ಸರಿಯಾ? ಅದಕ್ಕೆ ಬುದ್ಧಿ ಉಂಟಾ? ಇದು ತಪ್ಪಲ್ಲವಾ?'' ಎಂದರು.

ಮೊದಲೇ ಸುಸ್ತಾಗಿದ್ದ ಅಬ್ಬು ಬ್ಯಾರಿಯ ಕೋಪ ನೆತ್ತಿಗೇರಿತು. ''ಯಾವುದು ತಪ್ಪು ಭಟ್ರೆ? ಬನ್ನಿ ಅಲ್ಲಿ ನೋಡಿ! ನಿಮಗೇಂತ ಸಾಮಾನು ಕಟ್ಟಿ ಒಂದು ಬುಟ್ಟಿಯಲ್ಲಿ ಹಾಕಿ ಜಗಲಿಯಲ್ಲಿಟ್ಟು ನಾನು ನಮಾಜಿಗೇಂತ ನಿಂತಿದ್ದೆ ಅಷ್ಟೇ, ಎಲ್ಲಿಂದ ಬಂತೋ? ಬುಟ್ಟಿಯನ್ನು ಮಗುಚಿ ಹಾಕಿ ಅದರಲ್ಲಿದ್ದ ಮೈದದ ಕಟ್ಟಕ್ಕೆ ಬಾಯಿ ಹಾಕಿ ಎಳೆದುಒಡೆದು ರಸ್ತೆಯಲ್ಲೆಲ್ಲಾ ಚೆಲ್ಲಿದೆಯಲ್ಲಾ? ನೋಡಿ ಹದಿನೈದು ಕಿಲೋ ಮೈದಾ, ನನ್ನ ಹೊಟ್ಟೆ ಉರೀತಿದೆ. ಇದು ತಪ್ಪಾ? ನೀವಾದ್ರೆ ಬಿಡ್ತಿದ್ರಾ?''

''ಹಾಗಲ್ಲ ಅಬ್ಬು, ಅದಕ್ಕೆ ಗೊತ್ತುಂಟಾ? ಅದಕ್ಕೆ ಬುದ್ಧಿಯುಂಟಾ? ಅದು ಜಾನುವಾರು ಅಲ್ಲವಾ?''

''ಅದಕ್ಕೆ ಬುದ್ಧಿ ಇಲ್ಲದಿದ್ದರೆ ಅದನ್ನು ಸಾಕುವವರಿಗೆ ಬುದ್ಧಿ ಬೇಡವಾ? ಹಸು, ಆಡು, ನಾಯಿ, ಹಂದಿ ಇಂತಹ ಸಾಕು ಪ್ರಾಣಿಗಳನ್ನು ಮನೆಯಲ್ಲಿ ಕಟ್ಟಿಹಾಕಿ ಸಾಕಬೇಕು. ರಸ್ತೆಗೆ ಬಿಡಬಾರದು. ಹೀಗೆ ಕಾನೂನು ಉಂಟು ಗೊತ್ತುಂಟಾ ನಿಮಗೆ?''

''ಕಾನೂನು ಉಂಟು ಹೌದು ಮಾರಾಯ! ತೊಂದರೆ ಕೊಟ್ಟರೆ ಅದನ್ನು ಕೊಂಡು ಹೋಗಿ ದೊಡ್ಡಿಗೆ ಕಟ್ಟಬೇಕು, ಹೊಡೆಯಬಾರದು ಎಂಬ ಕಾನೂನು ಕೂಡಾ ಇದೆ ತಿಳಿಯಿತಲ್ಲ ನಿನಗೆ'' ಭಟ್ರು ಸ್ವಲ್ಪ ಏರಿದ ಧ್ವನಿಯಲ್ಲಿಯೇ ಹೇಳಿದರು.

''ದೊಡ್ಡಿಗೆ ಕಟ್ಟಬೇಕಾ? ನೋಡುವಾ ಹಿಡಿದು ಕೊಡಿ ಅದನ್ನು! ಧೈರ್ಯ ಉಂಟಾ ನಿಮಗೆ ಅದರ ಎದುರು ನಿಲ್ಲಲಿಕ್ಕೆ? ಹತ್ತು ಜನ ಇದ್ದರೂ ಅದನ್ನು ಹಿಡಿಯಲಿಕ್ಕೆ ಸಾಧ್ಯ ಇಲ್ಲ ಗೊತ್ತುಂಟಾ? ಹಾಯ್ದರೆ ಉಂಟಲ್ಲಾ - ನಾವು ಪಡ್ಚ...''

ಹೊಟೇಲ್‌ನ ಎದುರು ಜನ ಸೇರುವುದನ್ನು ಕಂಡ ಭಟ್ರು ಮೆಲ್ಲ ಒಳಗೆ ಸರಿದರು. ಅಬ್ಬು ಅಲ್ಲಿಂದ ತನ್ನ ಅಂಗಡಿಯತ್ತ ನಡೆಯುತ್ತಿರುವಾಗ ಬಟ್ಟೆ ಅಂಗಡಿ ಕಾಮತರು ''ಅಬ್ಬು ಸ್ವಲ್ಪ ಇಲ್ಲಿ ಬಾ'' ಎಂದು ಕರೆದರು.

ಬೆತ್ತವನ್ನು ಅಲ್ಲೇ ಇಟ್ಟು ಜಗಲಿಯೇರಿ ಕ್ಯಾಶ್‌ನ ಎದುರು ಕುಳಿತ ಅಬ್ಬು

ಇನ್ನೂ ಶ್ವಾಸ ಎಳೆದುಕೊಳ್ಳುತ್ತಲೇ ಇದ್ದ.

''ನೀನು ಆ ಹಸುವಿಗೆ ಹೊಡೆದದ್ದು ಬಾರೀ ಒಳ್ಳೇದಾಯ್ತು ಮಾರಾಯ. ನಿನಗೆ ವಿಷಯ ಗೊತ್ತುಂಟ ಅಬ್ಬು?''

ಅಬ್ಬು 'ಏನು?' ಎಂಬಂತೆ ಕಾಮತರ ಮುಖ ನೋಡಿದ.

''ನಿನ್ನೆ ಉಂಟಲ್ಲಾ, ಮಧ್ಯಾಹ್ನ ನಾನು ಒಳಗೆ ಬುತ್ತಿ ಬಿಚ್ಚಿ ಊಟಕ್ಕೆ ಕುಳಿತಿದ್ದೆ ಮಾರಾಯ. ಅರ್ಧ ಊಟ ಆಗುವಾಗ ಹೊರಗೆ ಏನೋ ಸದ್ದಾದಂತಾಯಿತು. ಎದ್ದು ನೋಡುತ್ತೇನೆ ಇದೇ ಹಸು ಮಾರಾಯ. ನಾನು ಹೊರಗೆ ತೂಗು ಹಾಕಿದ ಚೂಡಿದಾರ ಉಂಟಲ್ಲ, ಅದರ ಕಾಲನ್ನು ಅಕ್ರೋಟು ಜಗಿದ ಹಾಗೆ ಜಗಿಯುತ್ತಿತ್ತು ನೋಡು. ನನಗೆ ಕೋಪದಿಂದ ಕೈಕಾಲು ನಡುಗಲು ಶುರುವಾಯಿತು. ಎಂಜಲು ಕೈಯಲ್ಲಿ ಬೆತ್ತ ತೆಗೆದುಕೊಂಡು ಹೊರಗೆ ಬರುವುದರಲ್ಲಿಯೇ ಅದಕ್ಕೆ ಹೇಗೆ ಗೊತ್ತಾಯಿತೋ? ಚೂಡಿದಾರವನ್ನು ಎಳೆದು ಅಲ್ಲೇ ನೆಲಕ್ಕೆ ಹಾಕಿ ಓಡಿಹೋಯಿತು ಮಾರಾಯ. ಚೂಡಿದಾರವನ್ನು ತೆಗೆದು ನೋಡುತ್ತೇನೆ ಮಾರಾಯ, ಎಂತ ನೋಡುವುದು, ಮೀನು ಹಿಡಿಯುವ ಬಲೆ ಉಂಟಲ್ಲಾ ಹಾಗೆ ಆಗಿದೆ. ನೂರೈವತ್ತು ರೂಪಾಯಿ ಲೋಸ್. ಅದರ ಹೊಟ್ಟೆ ಉರಿ ನನಗೆ ಇನ್ನೂ ಹೋಗಿಲ್ಲ''.

''ನಿನಗೆ ಇನ್ನೊಂದು ವಿಷಯ ಗೊತ್ತುಂಟ ಅಬ್ಬು?'' ಕಾಮತರು ಗುಟ್ಟು ಹೇಳುವವರಂತೆ ತನ್ನ ತಲೆಯನ್ನು ಅಬ್ಬುವಿನ ಕಿವಿಯ ಹತ್ತಿರ ತಂದರು. ''ನಿನಗೆ ಇಷ್ಟು ಬುದ್ಧಿ ಹೇಳಿದರಲ್ಲ ಆ ಭಟ್ರು. ಅವರು ನಿನ್ನೆ ಮಾಡಿದ ಕೆಲಸ ಗೊತ್ತುಂಟ ನಿನಗೆ? ನಿನ್ನೆ ಮೋಟರ್‌ಸೈಕಲ್‌ಗೆ ಇದೇ ಹಸು ಅಡ್ಡ ಓಡಿ ಬಂದು, ಮೋಟಾರ್ ಸೈಕಲಿನವ ಬಿದ್ದು, ಅವನ ಕೈ ತುಂಡಾಗಿ, ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರಲ್ಲ, ಅದು ಹೇಗಾದದ್ದು ಗೊತ್ತುಂಟ ನಿನಗೆ?''

''ಇಲ್ಲ'' ಎಂಬಂತೆ ಅಬ್ಬು ಕಾಮತರ ಮುಖ ನೋಡಿದ.

''ಹೊಟೇಲ್‌ನ ಹಿಂದೆ ಭಟ್ಟರ ನೀರಿನ ಟಾಂಕಿ ಉಂಟಲ್ಲ. ಅದರಲ್ಲಿ ಇದೇ ಹಸು ನೀರು ಕುಡೀತಿತ್ತು. ಅದನ್ನು ಕಂಡ ಭಟ್ರು ಕೋಪದಿಂದ ಖಾಲಿಯಾದ ಬಾಳೆ ಗೊನೆಯ ದಂಟು ಉಂಟಲ್ಲಾ, ಅದರಲ್ಲಿ ಹಸುವಿನ ಬೆನ್ನಿಗೊಂದು ಬೀಸಿ ಬಾರಿಸಿದರು. ಪೆಟ್ಟು ತಿಂದ ಹಸು ಹೆದರಿ ಒಮ್ಮೆಲೇ ರಸ್ತೆಗೆ ಅಡ್ಡ ಓಡಿಬಂತು. ಮೋಟಾರ್ ಸೈಕಲ್‌ನವ ಬಂದು ಹಸುವಿಗೆ ಢಿಕ್ಕಿ ಹೊಡೆದು ಬಿದ್ದ. ಇದು ನಡೆದದ್ದು. ನಾನು ನನ್ನ ಈ ಕಣ್ಣಿನಲ್ಲಿ ನೋಡಿದ್ದು ಇದು. ಸುಮ್ಮನೆ ನಿಷ್ಠೂರ ಯಾಕೇಂತ ಯಾರ ಹತ್ತಿರವೂ ಹೇಳಿಲ್ಲ.... ಈವತ್ತು ನಿನಗೆ ಬುದ್ಧಿ ಹೇಳ್ತಾರೆ. ಇವರದ್ದು ಬರೇ ನೀರು ಕುಡಿದದ್ದು. ನನ್ನದು ನೂರೈವತ್ತು ರೂಪಾಯಿ ಚೂಡಿದಾರ, ನಿನ್ನದು ಹದಿನೈದು ಕಿಲೋ ಮೈದಾ. ನಾವು



ಹೊಡೆದರೆ ತಪ್ಪು...''

''ಹೋಗಲಿ ಬಿಡಿ ಕಾಮತರೇ... ಆಗ ಏನೋ ಕೋಪದಲ್ಲಿ ಹೊಡೆದೆ... ಈಗ ಯಾಕೆ ಹೊಡೆದೇಂತ ಪಶ್ಚಾತ್ತಾಪ ಆಗ್ತದೆ.. ಎಲ್ಲರೂ ಬುದ್ಧಿ ಹೇಳ್ಲಿಕ್ಕೆ ಬರ್ತಾರೆ... ನಮ್ಮ ಕಷ್ಟ, ನಷ್ಟ, ನೋವು ಯಾರಿಗೂ ಅರ್ಥ ಆಗುವುದಿಲ್ಲ'' ಎಂದು ಜಗಲಿ ಇಳಿದು ಹೊರಟ.

ಅವನು ಹೊರಡುತ್ತಿರುವಂತೆಯೇ ಕಾಮತರು ಹೇಳಿದರು ''ಅಬ್ಬು, ಈ ವಿಷಯ ನಿನ್ನಲ್ಲಿಯೇ ಇರಲಿ, ಯಾರತ್ರನೂ ಬಾಯಿ ಬಿಡಬೇಡ ಏನು? ಮತ್ತೆ ಆ ಹಸು ಉಂಟಲ್ಲ ಅದು ಇನ್ನು ಈ ಕಡೆ ಬೆನ್ನು ಕೂಡಾ ಹಾಕುವುದಿಲ್ಲ ನೋಡು ಬೇಕಾದರೆ...''.

ಈ ಘಟನೆಯ ನಂತರ ಕೆಲವರು ಅಬ್ಬುವನ್ನು ಒಂಥರಾ ನೋಡುವುದು. ಮಾತು, ಸಲಿಗೆ, ಕಡಿಮೆ ಮಾಡಿರುವುದು ಅವನ ಗಮನಕ್ಕೆ ಬಾರದೆ ಇರಲಿಲ್ಲ. ಮೋಹಿನಿ ವಿಲಾಸದ ಭಟ್ಟರಂತೂ ಇವನ ಅಂಗಡಿಯಿಂದ ಸಾಮಾನು ಕೊಂಡುಕೊಳ್ಳುವುದನ್ನೇ ನಿಲ್ಲಿಸಿ ಬಿಟ್ಟಿದ್ದರು ಮಾತ್ರವಲ್ಲ ಮಾತನಾಡುವುದನ್ನೂ ಕಡಿಮೆ ಮಾಡಿದ್ದರು.

ಆಮೇಲೆ ತಿಂಗಳು ಕಳೆದರೂ ಯಾವ ಹಸುಗಳೂ ಅತ್ತ ಸುಳಿಯಲಿಲ್ಲ. ಅಂಗಡಿಯವರೆಲ್ಲಾ ಹಸುಗಳನ್ನು ಮರೆತೇ ಬಿಟ್ಟಿದ್ದರು. ಅವರ ಬೆತ್ತಗಳೂ ಮೂಲೆ ಸೇರಿದ್ದವು.

ಒಂದು ಬೆಳಗ್ಗೆ ಮೋಹಿನಿ ವಿಲಾಸದ ರಾಮ ಭಟ್ಟರು ಹೊಟೇಲು ತೆರೆಯಲು ಬಂದಾಗ ಒಂದು ಹಸು ರವಿಯಣ್ಣನ ತರಕಾರಿ ಅಂಗಡಿಯ ಮುಂದೆ ನಿಂತಿತ್ತು. ಅವರು ಅದನ್ನು ನೋಡಿಯೂ ನೋಡದವರಂತೆ 'ನನಗೇಕೆ?' ಎನ್ನುತ್ತಾ ಒಳಗೆ ನಡೆದರು. ಆಗ ಇನ್ನೂ ಯಾವುದೇ ಅಂಗಡಿಗಳು ತೆರೆದಿರಲಿಲ್ಲ. ಆಮೇಲೆ ಬಂದದ್ದು ಹೂವಿನಂಗಡಿಯ ಶಂಕರ. ಆತನೂ ಹಸುವಿನ ತಂಟೆಗೆ ಹೋಗದೆ ತನ್ನ ಅಂಗಡಿ ತೆರೆದು ವ್ಯಾಪಾರದಲ್ಲಿ ಮುಳುಗಿಬಿಟ್ಟ. ಮತ್ತೆ ಒಂದೊಂದೇ ಅಂಗಡಿ ತೆರೆದುಕೊಳ್ಳ ತೊಡಗಿತು. ರವಿಯಣ್ಣ ಬಂದವನೇ ತನ್ನ ಅಂಗಡಿಯ ಮುಂದೆ ನಿಂತಿದ್ದ ಹಸುವನ್ನು ಓಡಿಸಲು ನೋಡಿದ. ಹಸು ಮಿಸುಕಾಡಲಿಲ್ಲ. ಅದು ಗಳಿಗೆಗೊಮ್ಮೆ ತನ್ನ ತಲೆಯನ್ನು ಗಿರಗಿಟ್ಟಿಯಂತೆ ತಿರುಗಿಸುತ್ತಾ ಅರಚುತ್ತಿತ್ತು. ಬಾಲವನ್ನು ಬೀಸುತ್ತಾ ತನ್ನ ಹಿಂದಿನ ಕಾಲನ್ನು ಜಾಡಿಸುತ್ತಾ ಮೈ ಕೊಡವಿಕೊಳ್ಳುತ್ತಾ ಹೂಂಕರಿಸುತ್ತಿತ್ತು. ರವಿಯಣ್ಣ ತನ್ನ ಬೆತ್ತವನ್ನು ಹುಡುಕಿ ತಂದು ಹೊಯ್... ಹೊಯ್... ಎಂದು ನೆಲಕ್ಕೆ ಬಡಿದ. ಉಹೂಂ... ಹಸು ಕದಲುತ್ತಿಲ್ಲ. ಇದನ್ನು ತನ್ನ ಅಂಗಡಿಯ ಜಗಲಿಯಲ್ಲಿ ನಿಂತು ನೋಡುತ್ತಿದ್ದ ಅಬ್ಬು ಬ್ಯಾರಿ ಮೆಟ್ಟಲಿಳಿದು ಬಂದು 'ಏನು ರವಿಯಣ್ಣಾ ಹಸುವಿಗೆ ಏನೋ ಆದಂತಿದೆಯಲ್ಲಾ?' ಎಂದು ಹಸುವಿನ ಸುತ್ತ ತಿರುಗುತ್ತಾ ಪರೀಕ್ಷಿಸುವಂತೆ

ನೋಡಿದ. ಆಗಲೇ ವೋಂತು ಪೊರ್ಬುವೂ ಬಂದು ಹಸುವಿನ ಮೈಮುಟ್ಟಿ ತಡವತೊಡಗಿದ.

''ಅಬ್ಬು, ಹಸುವಿಗೆ ಗಬ್ಬ ಇದೆ. ನೋವು ಪ್ರಾರಂಭವಾಗಿರಬೇಕು. ಕರು ಹಾಕುವ ಲಕ್ಷಣ ಕಾಣುತ್ತಿದೆ'' ಎಂದ.

ಅಷ್ಟರಲ್ಲೇ ಕಾಮತರು, ರಾಮ ಭಟ್ಟರೂ ಬಂದು ಸೇರಿದರು. ''ಹೌದು ನೋವು ಪ್ರಾರಂಭವಾಗಿದೆ. ಇನ್ನು ಅರ್ಧ - ಒಂದು ಗಂಟೆಯಲ್ಲಿ ಕರು ಹಾಕಬಹುದು'' ಎಂದರು ಕಾಮತರು ಹಸುವಿನ ಬೆನ್ನು ಸವರುತ್ತಾ.

''ಇಲ್ಲಿ ಬೇಡ, ಅಂಗಡಿಯ ಮುಂದೆ ಜನ ಎಲ್ಲಾ ಹೋಗ್ತಾ ಬರ್ತಾ ಇರ್ತಾರೆ. ನಾವು ಇದನ್ನು ಓ ಅಲ್ಲಿ ಹುಣಸೇ ಮರದ ಅಡಿಗೆ ಕೊಂಡು ಹೋಗುವ. ಸ್ವಲ್ಪ ಮರೆ ಮಾಡುವ ಏನಂತೀರಾ?'' ಅಬ್ಬು ಸಲಹೆ ನೀಡಿದ.

ಅಬ್ಬುವಿನ ಸಲಹೆಯನ್ನು ಎಲ್ಲರೂ ಒಪ್ಪಿದರು.

ಅಬ್ಬು ಹಸುವಿನ ಕೊರಳು ಬಳಸಿದ. ಹಣೆ ತಡವಿದ. ಕೊಂಬನ್ನು ಹಿಡಿದು ಮುಂದಕ್ಕೆ ಎಳೆದ. ಕಾಮತರು, ವೋಂತು ಪೊರ್ಬು ಬೆನ್ನು ಸವರುತ್ತಾ ಮುಂದಕ್ಕೆ ತಳ್ಳಿದರು. ಊಹೂಂ, ಹಸು ಒಂದು ಹೆಜ್ಜೆಯೂ ಮುಂದಿಡುತ್ತಿಲ್ಲ. ಅಷ್ಟರಲ್ಲೇ ರಾಮ ಭಟ್ಟರು ಒಂದು ಹಗ್ಗ ತಂದು ಹಸುವಿನ ಕೊರಳಿಗೆ ಹಾಕಿ ಎಳೆಯತೊಡಗಿದರು. ಮಿಕ್ಕವರೆಲ್ಲಾ ಮೈದಡವುತ್ತಾ ಮುಂದಕ್ಕೆ ದೂಡಿ ಎಳೆದು ತಂದು ಹುಣಸೆ ಮರಕ್ಕೆ ಕಟ್ಟಿ ಹಾಕಿದರು. ಅಬ್ಬು ಹೋಗಿ ಒಂದು ದೊಡ್ಡ ಗೋಣಿತಾಟು ತಂದ. ಎಲ್ಲರೂ ಕೂಡಿ ಹಸುವಿಗೆ ಒಂದು ಮರೆ ಕಟ್ಟಿದರು.

ಹಸುವಿನ ಒದ್ದಾಟ ಕ್ಷಣ ಕ್ಷಣವೂ ಜಾಸ್ತಿಯಾಗತೊಡಗಿತು.

''ಏನೋ ತೊಂದರೆ ಇದೆ. ನಾವು ಯಾರಾದರೂ ತಿಳಿದವರನ್ನು ಕರೆಯುವುದು ಒಳ್ಳೆಯದು. ಯಾರಿದ್ದಾರೆ?'' ವೋಂತು ಪೊರ್ಬು ತನ್ನ ಅನುಭವ ಹೇಳಿದ.

''ನೋಣಯ್ಯ ಇದ್ದಾನೆ. ಅವನು ಜಾನುವಾರುಗಳಿಗೆ ನಾಟಿ ಮದ್ದು ಕೊಡುತ್ತಾನೆ. ಅವನನ್ನು ಕರೆಸೋಣವಾ?'' ಕಾಮತರು ಸಲಹೆ ಕೊಟ್ಟರು.

ಕೆಲವೇ ನಿಮಿಷಗಳಲ್ಲಿ ನೋಣಯ್ಯ ಬಂದ. ಹಸುವನ್ನು ಪರೀಕ್ಷಿಸಿದ. ''ನೋವು ಪ್ರಾರಂಭವಾಗಿದೆ. ಯಾಕೋ ಕರು ಹೊರ ಬರುವ ಲಕ್ಷಣ ಕಾಣುತ್ತಿಲ್ಲ. ಏನೋ ದೊಡ್ಡ ತೊಂದರೆ ಇರಬೇಕು. ನೀವು ಕೂಡಲೇ ಗೋಡಾಕ್ಟ್ರನ್ನು ಕರೆಸುವುದು ಒಳ್ಳೆಯದು. ಇಲ್ಲದಿದ್ದರೆ ಹಸುವಿನ ಜೀವಕ್ಕೆ ಅಪಾಯ'' ಎಂದ.

ಎಲ್ಲರೂ ಕೂಡಿ ಸರಕಾರಿ ವೈದ್ಯರ ದೂರವಾಣಿ ಸಂಖ್ಯೆಯನ್ನು ಪತ್ತೆ ಮಾಡಿ ಸಂಪರ್ಕಿಸಿದರು. ''ನನ್ನಲ್ಲಿ ವಾಹನ ಇಲ್ಲ, ಯಾವುದಾದರೂ ವಾಹನ ಕಳುಹಿಸಿಕೊಡಿ,



ಬರ್ತೇವೆ' ವೈದ್ಯರಿಂದ ಉತ್ತರ ಬಂತು.

ಅಬ್ಬು ಕೂಡಲೇ ಬಾಡಿಗೆ ಕಾರೊಂದನ್ನು ಗೊತ್ತು ಮಾಡಿಕೊಂಡು ಧಾವಿಸಿದ.

ವೈದ್ಯರು ಒಬ್ಬ ಸಹಾಯಕನೊಂದಿಗೆ ಬಂದು ಕಾರಿನಿಂದಿಳಿವದರೇ ಮೊದಲು ಹಸುವಿನ ಹಣೆ ಮುಟ್ಟಿ ಭಕ್ತಿಯಿಂದ ನಮಸ್ಕರಿಸಿದರು. ''ಯಾರದ್ದು ಹಸು ಇದು?'' ಕೇಳಿದರು.

''ಇದಕ್ಕೆ ವಾರೀಸುದಾರರಿಲ್ಲ ಸ್ವಾಮಿ. ಬೀಡಾಡಿ ಹಸು. ನಾವು ಬೆಳಗ್ಗೆ ಬರುವಾಗಲೇ ಇಲ್ಲಿ ನಿಂತುಕೊಂಡಿತ್ತು'' ಎಂದರು ಕಾಮತರು.

ವೈದ್ಯರು ಹಸುವನ್ನು ಪರೀಕ್ಷಿಸಿದರು. ''ಕರು ಸ್ವಸ್ಥಾನದಲ್ಲಿಲ್ಲ. ಏನೋ ದೊಡ್ಡ ತೊಂದರೆ ಇದೆ. ಇನ್ನು ಅರ್ಧ ಗಂಟೆಯೊಳಗೆ ಕೆಲಸ ಆಗಬೇಕು. ಇಲ್ಲದಿದ್ದರೆ ಹಸುವಿನ ಜೀವಕ್ಕೆ ಅಪಾಯವಿದೆ. ನೀವೆಲ್ಲ ಹೊರಗೆ ಹೋಗಿ... ನನಗೆ ಸ್ವಲ್ಪ ಬಿಸಿ ನೀರು ಬೇಕು'' ಎಂದರು.

ಅಬ್ಬು ರಾಮ ಭಟ್ಟರ ಹೊಟೇಲ್‌ನತ್ತ ಓಡಿದ. ''ಭಟ್ರೇ... ಒಂದು ತಪಲೆ ಬಿಸಿನೀರು ಬೇಕು'' ಎನ್ನುತ್ತಾ ಕಿಸೆಗೆ ಕೈಹಾಕಿ 'ದುಡ್ಡೆಷ್ಟು?' ಕೇಳಿದ.

ಭಟ್ರು ಒಮ್ಮೆ ಅವನನ್ನು ದುರುಗುಟ್ಟಿ ನೋಡಿದರು. ''ನೋಡು ಅಬ್ಬು ನಿನ್ನ ಈ ಪೆದಂಬು ಉಂಟಲ್ಲಾ, ನನಗೆ ಅದೇ ಆಗುವುದಿಲ್ಲ. ನಿನ್ನ ಈ ಅಹಂಕಾರ ಉಂಟಲ್ಲಾ, ಇದನ್ನು ನೀನು ಬಿಡಬೇಕು ಗೊತ್ತಾಯಿತಲ್ಲಾ... ನಾನೂ ಮನುಷ್ಯ ಮಾರಾಯ... ನನ್ನಲ್ಲೂ ಮನುಷ್ಯತ್ವ ಇದೆ - ಹೋಗು, ನೀನು ಹೋಗು... ನೀರು ನಾನು ಕಳಿಸಿಕೊಡ್ತೇನೆ'' ಎಂದರು ಭಟ್ರು ಏರಿದ ದನಿಯಲ್ಲಿ. ಅಬ್ಬು ಒಮ್ಮೆಲೇ ಪೆಚ್ಚಾದ. ''ಆಯಿತು ಭಟ್ರೆ... ಆಯಿತು... ತಪ್ಪಾಯಿತು... ಕ್ಷಮಿಸಿ... ಮತ್ತೆ ವೈದ್ಯರಿಗೆ ಒಂದು ಒಳ್ಳೆಯ ಚಾ ಮತ್ತು ತಿಂಡಿ ಕಳಿಸಿಕೊಡಿ'' ಎಂದು ಹಿಂತಿರುಗಿದ.

ವೈದ್ಯರು ಕೊಟ್ಟ ಗಡುವು ಸಮೀಪಿಸುತ್ತಿದ್ದಂತೆಯೇ ಎಲ್ಲರೂ ತಮ್ಮ ವ್ಯವಹಾರ ಮರೆತು ಹಸುವಿಗೆ ಕಟ್ಟಿದ ಮರೆಯ ಹಿಂದೆ ನಿಂತುಕೊಂಡರು. ಒಳಗಿನಿಂದ ಹಸುವಿನ ಅರಚಾಟ ಕರುಳು ಕತ್ತರಿಸುವಂತೆ ಕೇಳುತ್ತಿದೆ. ಎಲ್ಲರಲ್ಲೂ ದುಗುಡ. ಅಬ್ಬು ಗೋಣಿತಾಟಿನ ರಂಧ್ರದಿಂದ ಒಳಗೆ ಇಣುಕಿ ನೋಡಿದ. ಹಸುವಿನ ಇಡೀ ದೇಹ ನಡುಗುತ್ತಿದೆ. ವೈದ್ಯರು ಹರಸಾಹಸ ಪಡುತ್ತಿದ್ದಾರೆ. ಅವರ ಬಟ್ಟೆಗಳು ಬೆವರಿನಿಂದ ತೊಯ್ದು ಹೋಗಿವೆ.

ವೈದ್ಯರು ನೀಡಿದ ಗಡುವು ದಾಟುತ್ತಿದೆ.

ಕಾಮತರು ಗೋಣಿ ತಾಟಿನ ಎಡೆಯಿಂದ ಇಣುಕಿದರು. ಹಸುವಿನ ಗರ್ಭದಿಂದ ಕರು ಹೊರಬರುತ್ತಿದೆ. ಅವರು ಅಬ್ಬುವಿನ ಕಿವಿಯಲ್ಲಿ ಕರು ಹೊರಬರುತ್ತಿದೆ ಎಂದು

ಮೆಲ್ಲ ಪಿಸುಗುಟ್ಟಿ ಕಣ್ಣುರೆಪ್ಪೆ ಮಿಟುಕಿಸದೆ ನೋಡಿದರು. ಮತ್ತೆ ಎರಡೇ ನಿಮಿಷದಲ್ಲಿ ಕರು ನೆಲದ ಮೇಲಿತ್ತು. ಎಲ್ಲರೂ ಒಮ್ಮೆ ಕಣ್ಣು ಮುಚ್ಚಿ ದೀರ್ಘವಾಗಿ ಉಸಿರೆಳೆದು ಕೊಂಡರು. ಎಲ್ಲರ ಮುಖಗಳಲ್ಲೂ ಮಂದಹಾಸ. ಎಲ್ಲರ ಬಾಯಲ್ಲೂ ವೈದ್ಯರದೇ ತಾರೀಫು. ಮೋಂತು ಪೊರ್ಬು ವೈದ್ಯರಿಗೆ ಕುಳಿತುಕೊಳ್ಳಲೆಂದು ಮರದಡಿಯಲ್ಲಿ ಒಂದು ಕುರ್ಚಿ ತಂದು ಹಾಕಿದ. ರಾಮ ಭಟ್ಟರು ತನ್ನ ಮಾಣಿಯನ್ನು ಕರೆದು ಒಂದು ಸ್ಪೆಷಲ್ ಕಾಫಿ ಮತ್ತು ಮಸಾಲೆದೋಸೆ ತರುವಂತೆ ಆದೇಶಿಸಿದರು. ಅಬ್ಬು ಬ್ಯಾರಿ ಹಸನ್‌ನ ಅಂಗಡಿಯಿಂದ ಒಂದು ಚೀಲ ತುಂಬಾ ಹಣ್ಣು ಹಂಪಲು ಕೊಂಡು ತಂದ. ವೈದ್ಯರು ಮರೆಯಿಂದ ಹೊರಬರುತ್ತಿದ್ದಂತೆಯೇ ಎಲ್ಲರೂ ಹಸ್ತಲಾಘವ ಮಾಡಿದರು. ಕುರ್ಚಿಯಲ್ಲಿ ಕುಳ್ಳಿರಿಸಿ ಕಾಫಿ ತಿಂಡಿ ಕೊಟ್ಟರು. ಎಷ್ಟು ಉಪಚಾರ ಮಾಡಿದರೂ ಅವರಿಗೆ ಸಮಾಧಾನವೇ ಇಲ್ಲ. ವೈದ್ಯರು ಕರುವಿಗೆ ಐದು ಕಾಲು ಎಂದಾಗ ಎಲ್ಲರಿಗೂ ಆಶ್ಚರ್ಯ. ವಿಚಿತ್ರ ಕರುವನ್ನು ನೋಡಲು ಮರದಡಿ ಜನಸಾಗರವೇ ನೆರೆಯಿತು.

ವೈದ್ಯರು ಹೊರಟುನಿಂತರು. ಅಬ್ಬು ಕಾರು ಹಿಡಿದು ತಂದ. ತಾನು ಕೊಂಡ ಹಣ್ಣಿನ ಚೀಲವನ್ನು ಹಿಂದಿನ ಸೀಟಿನಲ್ಲಿಟ್ಟ. ಆಗಲೇ ರಾಮ ಭಟ್ಟರಿಗೆ ಒಂದು ಯೋಚನೆ ಹೊಳೆಯಿತು. ಅವರು ಅಬ್ಬುವನ್ನೂ ಕಾಮತರನ್ನೂ ದೂರ ಕರೆದೊಯ್ದು ''ನಾವು ವೈದ್ಯರಿಗೆ ಏನಾದರೂ ಸ್ವಲ್ಪ ದುಡ್ಡು ಒಂದು ಲಕೋಟೆಯಲ್ಲಿ ಹಾಕಿಕೊಡುವನಾ? ಪಾಪ ಬಹಳ ಕಷ್ಟಪಟ್ಟಿದ್ದಾರೆ'' ಎಂದರು.

''ಹಾಗೆ ಕೊಟ್ಟರೆ ಲಂಚ ಕೊಟ್ಟರೂಂತ ಅವರೇನಾದರೂ ಬೇಸರ ಮಾಡಿ ಕೊಂಡರೆ? ಏನು ಹೇಳ್ತೀಯಾ ಅಬ್ಬು?'' ಅಬ್ಬುವಿನ ಮುಖ ನೋಡಿದರು ಕಾಮತರು.

''ಕೊಡಲಿಕ್ಕೆ ನನಗೂ ಮನಸ್ಸುಂಟು ಮಾರಾಯ್ರೇ, ಆದ್ರೆ ಸರಕಾರಿ ವೈದ್ಯರಲ್ಲವಾ? ನಾವು ಕೊಟ್ಟು ಅವರು ಬೇಡ ಎಂದುಬಿಟ್ಟರೆ? ಮತ್ತೆ ನಮಗೇ ಸಂಕಟ ಅಲ್ಲವಾ? ಏನಂತೀರಾ?''

ಕೊನೆಗೆ ಇನ್ನೂರೈವತ್ತು ರೂಪಾಯಿ ಕೊಡುವುದಾಗಿಯೂ, ಅದನ್ನು ಅವರ ಜೊತೆ ಕಾರಿನಲ್ಲಿ ಹೋಗಿ ಅವರ ದಾವಾಖಾನೆಯಲ್ಲಿಯೇ ಕೊಡಬೇಕಾಗಿಯೂ, ಕಾರಿನ ಬಾಡಿಗೆ ಮತ್ತು ಆ ಹಣವನ್ನು ತಾವು ಮೂವರೂ ಹಂಚಿಕೊಳ್ಳಬೇಕಾಗಿಯೂ ರಾಮ ಭಟ್ಟರು ತೀರ್ಮಾನಿಸಿದರು.

ಜನರೆಲ್ಲ ಸೇರಿ ವೈದ್ಯರನ್ನು ಬೀಳ್ಕೊಟ್ಟರು. ಅಬ್ಬು ಇನ್ನೂರೈವತ್ತು ರೂಪಾಯಿ ಯನ್ನು ಒಂದು ಲಕೋಟೆಯಲ್ಲಿ ಹಾಕಿ ಮಡಚಿ ಕಿಸೆಯಲ್ಲಿಟ್ಟುಕೊಂಡು ಕಾಮತರ ಜೊತೆ ಕಾರು ಏರಿದ.

ದವಾಖಾನೆ ತಲುಪುತ್ತಿದ್ದಂತೆಯೇ ''ನನಗೆ ಒಳ್ಳೇದಾಗುವುದಿಲ್ಲ ಮಾರಾಯರೇ,



ಹಣವನ್ನು ನೀವೇ ಕೊಡಿ'' ಎಂದು ಅಬ್ಬು ಕಾಮತರನ್ನು ಪೀಡಿಸತೊಡಗಿದ. ಆದರೆ ಕಾಮತರು ''ದುಡ್ಡು ಕೊಡದಿದ್ದರೂ ಪರವಾಯಿಲ್ಲ. ನಾನಂತೂ ಖಂಡಿತ ಕೊಡುವುದಿಲ್ಲ'' ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿಬಿಟ್ಟರು. ಅಬ್ಬು ಈಗ ಉಪಾಯವಿಲ್ಲದೆ ''ಆದ ಹಾಗೆ ಆಗ್ತದೆ, ಕೊಟ್ಟೇ ಬಿಡುವುದು'' ಎಂದು ಗಟ್ಟಿ ನಿರ್ಧಾರ ಮಾಡಿಕೊಂಡ.

ವೈದ್ಯರು ಇಬ್ಬರನ್ನೂ ಆದರದಿಂದ ಬರಮಾಡಿಕೊಂಡರು. ಇಬ್ಬರಿಗೂ ಕುಳಿತು ಕೊಳ್ಳಲು ಕುರ್ಚಿ ಕೊಟ್ಟು, ಫ್ಯಾನ್ ಹಾಕಿ, ತಾನು ತನ್ನ ಸ್ಥಾನದಲ್ಲಿ ಕುಳಿತುಕೊಂಡರು.

''ನಿಮ್ಮಿಂದ ತುಂಬಾ ಉಪಕಾರವಾಯಿತು ಡಾಕ್ಟ್ರೇ. ಎರಡು ಜೀವಗಳನ್ನು ಉಳಿಸಿದಿರಿ. ನೀವಲ್ಲದಿದ್ದರೆ ಖಂಡಿತ ಆ ಹಸು ಉಳಿಯುತ್ತಿರಲಿಲ್ಲ'' ಎಂದರು ಕಾಮತರು.

''ನನ್ನದೆಂತ ಉಂಟು ಸ್ವಾಮಿ ಇದರಲ್ಲಿ? ಎಲ್ಲ ದೇವರದ್ದು. ನಾನು ನನ್ನ ಕರ್ತವ್ಯ ಮಾಡಿದೆ. ನೀವು ನಿಮ್ಮ ಕರ್ತವ್ಯ ಮಾಡಿದಿರಿ ಅಷ್ಟೇ'' ಎಂದರು ವೈದ್ಯರು.

ಅಬ್ಬು ನಡುಗುವ ಕೈಯಿಂದ ಮೆಲ್ಲ ಲಕೋಟೆ ಹೊರತೆಗೆದ. ''ಡಾಕ್ಟ್ರೇ ನೀವು ತಪ್ಪು ತಿಳಿಯಬಾರದು. ಇದು ನಮ್ಮ ಒಂದು ಚಿಕ್ಕ ಕಾಣಿಕೆ. ಸ್ವೀಕರಿಸಬೇಕು'' ಎನ್ನುತ್ತಾ ಲಕೋಟೆಯನ್ನು ನೀಡಿದ.

ವೈದ್ಯರು ಲಕೋಟೆ ಪಡೆದು ಒಮ್ಮೆ ತಿರುಗಿಸಿ ನೋಡಿದರು. ಮುಚ್ಚಳ ಬಿಚ್ಚಿ ಒಳಗೆ ಇಣುಕಿದರು. ನೋಟುಗಳು ಕಾಣುತ್ತಿವೆ.

''ಎಷ್ಟಿದೆ ಸಾಹೇಬರೇ ಇದರಲ್ಲಿ?''

ಅಬ್ಬು ಒಮ್ಮೆಲೇ ತತ್ತರಿಸಿಹೋದ. ಅವನ ಗಂಟಲ ಪಸೆ ಆರಿತು.

''ತಪ್ಪಾಗಿದ್ದರೆ ಕ್ಷಮಿಸಿ ಡಾಕ್ಟ್ರೇ, ಇದು ಲಂಚ ಅಲ್ಲ. ನಮ್ಮ ಮನಸ್ಸಿನ ಸಮಾಧಾನಕ್ಕಾಗಿ ಇನ್ನೂರೈವತ್ತು ರೂಪಾಯಿ ಇದೆ ಸ್ವೀಕರಿಸಬೇಕು'' ಎಂದ.

''ನೋಡಿ ಸಾಹೇಬರೇ, ನಾನು ನಾರ್ಮಲ್ ಕೇಸಿಗೆ ಐದು ನೂರು ರೂಪಾಯಿ ತೆಗೆದುಕೊಳ್ಳುತ್ತೇನೆ. ಇದು ಸ್ಪೆಷಲ್ ಕೇಸ್. ನೀವು ಇನ್ನೂರೈವತ್ತು ರೂಪಾಯಿ ಕೊಡ್ತೀದ್ದೀರಲ್ಲಾ?''

ಅಬ್ಬು ವೈದ್ಯರ ಮುಖವನ್ನೇ ನೋಡಿದ. ಅಲ್ಲಿ ಯಾವುದೇ ಭಾವನೆಗಳು ಅವನಿಗೆ ಗೋಚರಿಸಲಿಲ್ಲ.

''ಡಾಕ್ಟ್ರೇ, ನೀವು ನಮ್ಮನ್ನು ತಮಾಷೆ ಮಾಡುವುದಾ?''

''ಅಲ್ಲ ಸಾಹೇಬರೇ, ಇದರಲ್ಲಿ ತಮಾಷೆ ಎಂಥದ್ದು? ಐದು ನೂರು ರೂಪಾಯಿ ಗಿಂತ ಕಡಿಮೆ ನಾನು ತೆಗೆದುಕೊಳ್ಳುವುದೇ ಇಲ್ಲ'' ಅವರ ಮಾತಿನಲ್ಲಿದ್ದ ಒರಟುತನದಿಂದ

ಅಬ್ಬು ಸೆಟೆದು ಕುಳಿತ. ಅವನ ತಲೆ ತಿರುಗತೊಡಗಿತು. ಮೈಯೆಲ್ಲ ಬಿಸಿಯೇರತೊಡಗಿತು. ಕೋಪದಿಂದ ಮುಖ ಕೆಂಪೇರತೊಡಗಿತು.

''ನೀವು ನಿಜ ಹೇಳ್ತಿದ್ದೀರಾ ಡಾಕ್ಟ್ರೇ'' ಅಬ್ಬು ಮತ್ತೆ ಕೇಳಿದ.

''ಹೌದು ಸಾಹೇಬರೇ, ಇದರಲ್ಲಿ ಸುಳ್ಳು ಹೇಳುವಂಥದ್ದು ಏನಿದೆ? ಐದು ನೂರು ರೂಪಾಯಿಗಿಂತ ಕಮ್ಮಿ ನಾನು ತೆಗೆದುಕೊಳ್ಳುವುದಿಲ್ಲ''.

ಅಬ್ಬು ಒಮ್ಮೆಲೇ 'ದಢಕ್ಕ'ಂತ ಎದ್ದು ನಿಂತ. ವೈದ್ಯರ ಕೈಯಲ್ಲಿದ್ದ ಲಕೋಟೆಯನ್ನು ಕಿತ್ತುಕೊಂಡು 'ಕಾಮತರೇ ನಡೀರಿ ಹೋಗೋಣ' ಎನ್ನುತ್ತಾ ಹೊರಟೇ ಬಿಟ್ಟ.

**ಪ್ರಜಾವಾಣಿ**



## ಇಂಟರ್‌ವ್ಯೂ

ಎಷ್ಟೇ ಬೇಗ ಬಂದರೂ ನನಗಿಂತ ಮುಂಚೆ ನಾಲ್ಕು ಹುಡುಗಿಯರು ಬಂದು ಸರದಿಯಲ್ಲಿ ಕುಳಿತಾಗಿತ್ತು. ನಾನೂ ಐದನೆಯವಳಾಗಿ ಕುಳಿತು ಕಾಯತೊಡಗಿದೆ. ಇಂಟರ್‌ವ್ಯೂ ಪ್ರಾರಂಭವಾಗಲು ಇನ್ನೂ ಅರ್ಧ ಗಂಟೆ ಸಮಯವಿತ್ತು. ಇನ್ನೆಷ್ಟು ಹುಡುಗಿಯರು ಬರಲಿದ್ದಾರೋ ಎನ್ನುವಷ್ಟರಲ್ಲೇ ಮತ್ತೊಬ್ಬಳು ಬಂದು ನಮ್ಮ ಜೊತೆ ಸೇರಿಕೊಂಡಳು. ಹೀಗೆ ಮತ್ತರ್ಧ ಗಂಟೆಯಲ್ಲಿ ನಮ್ಮ ಸಂಖ್ಯೆ ಒಂಭತ್ತಕ್ಕೇರಿತ್ತು.

ನನಗೆ ಈ ಇಂಟರ್‌ವ್ಯೂ ಎಂಬ ಪ್ರಹಸನ ಹೊಸತೇನಲ್ಲ. ಡಿಗ್ರಿ ಮುಗಿಸಿ ಮೂರು ವರ್ಷಗಳಲ್ಲಿ ಇಪ್ಪತ್ತಕ್ಕೂ ಹೆಚ್ಚು ಇಂಟರ್‌ವ್ಯೂಗಳಲ್ಲಿ ಪಳಗಿದ್ದೇನೆ. ಅವರ ಅಸಂಬದ್ಧ ಪ್ರಶ್ನೆಗಳು, ಅದಕ್ಕೆ ಕೊಡಬೇಕಾದ ಉತ್ತರಗಳು ನನಗೆ ಅಭ್ಯಾಸವಾಗಿಬಿಟ್ಟಿವೆ. ಅವರು ಕೇಳುವ ಮೊದಲ ಪ್ರಶ್ನೆ ''ಎಷ್ಟು ವರ್ಷಗಳ ಅನುಭವ ಇದೆ?'' ಎಂಬುದು. ಕೆಲಸ ಸಿಕ್ಕಿದರಲ್ಲವೇ ಅನುಭವ ಇರುವುದು ಎಂಬುದು ಅವರಿಗೆ ಅರ್ಥವಾಗುವುದಿಲ್ಲ. ದುಡ್ಡಿದ್ದವರಿಗೆ, ಪ್ರಭಾವ ಇದ್ದವರಿಗೆ, ರೂಪ ಇದ್ದವರಿಗೆ ಕೆಲಸವೂ ಸಿಗುತ್ತದೆ, ಅನುಭವವೂ ಸಿಗುತ್ತದೆ.

ಕರೆಗಂಟೆ ಕೇಳಿಸಿತು.

ಸರದಿಯ ತುದಿಯಲ್ಲಿದ್ದವಳು ಧಡಕ್ಕನೆ ಎದ್ದು ನಿಂತು ತನ್ನ ಬಟ್ಟೆಗಳನ್ನು ಸರಿಪಡಿಸುತ್ತಾ ತಲೆಕೂದಲ ಮೇಲೊಮ್ಮೆ ಕೈಯಾಡಿಸಿ, ವಾಚು, ಬಳೆಗಳನ್ನು ಸರಿಪಡಿಸಿಕೊಂಡು ವ್ಯಾನಿಟಿ ಬ್ಯಾಗ್ ಭುಜದ ಸರಿಯಾದ ಜಾಗದಲ್ಲಿಯೇ ನೋಡಿಕೊಂಡು ಕರವಸ್ತ್ರದಿಂದ ಮುಖಕ್ಕೆ ಶಾಖ ಕೊಡುತ್ತಾ ತಯಾರಾಗಿ ನಿಂತಳು. ಸುಂದರಿಯಾದ ಅವಳ ಸೌಂದರ್ಯವನ್ನೆಲ್ಲಾ ಅಲಂಕಾರ ನುಂಗಿ ಹಾಕಿತ್ತು. ಜವಾನ ಬಂದು

‘ಯಾರಮ್ಮಾ ಮೊದಲು ಬಂದಿದ್ದು, ಬನ್ನಿಯಮ್ಮ’ ಎಂದಾಗ ಅವಳು ಬಳುಕುತ್ತಾ ಒಳ ನಡೆದಳು.

ಅವಳು ಹೋದದ್ದೇ ತಡ ಮಿಕ್ಕವರೆಲ್ಲಾ ತಮ್ಮ ತಮ್ಮ ಸೌಂದರ್ಯವನ್ನು ವೃದ್ಧಿಗೊಳಿಸಿಕೊಳ್ಳುವ ಕಾಯಕದಲ್ಲಿ ತೊಡಗಿದರು. ಚೂಡಿದಾರ, ಮಿಡಿ, ಸ್ಕರ್ಟ್, ಜೀನ್ಸ್, ಅಂಗಿ, ಟೀಶರ್ಟ್ ತೊಟ್ಟ ಲಲನಾಮಣಿಯರು ಸೌಂದರ್ಯ ಸ್ಪರ್ಧೆಗೆ ಹೊರಟಂತಿತ್ತು. ನಿಜ ಹೇಳಬೇಕೆಂದರೆ ಒಬ್ಬಳನ್ನೊಬ್ಬಳು ಮೀರಿಸುವಂತಹ ಸುಂದರಿಯರು.

ಬೆಳಗ್ಗೆ ಸ್ನಾನ ಮಾಡಿ ಬಂದು ನಾನೂ ಕನ್ನಡಿಯ ಮುಂದೆ ಒಂದು ಗಂಟೆ ನಿಂತಿದ್ದೆ. ಮುಖಕ್ಕೆ ಫೇರ್ ಎಂಡ್ ಲವ್‌ಲೀ ತಿಕ್ಕಿ, ಪಾಂಡ್ಸ್ ಪೌಡರ್ ಹಚ್ಚಿ, ಕಾಡಿಗೆ ಪೆನ್ಸಿಲ್‌ನಿಂದ ಹುಬ್ಬು ತೀಡಿಕೊಂಡರೂ ಏನೂ ಪ್ರಯೋಜನವಾಗಲಿಲ್ಲ. ಕಾಗೆ ತೊಳೆದರೆ ಬಿಳಿಯಾಗುತ್ತದೆಯೇ...? ದೇಹದ ಉಬ್ಬು-ತಗ್ಗುಗಳಾದರೂ ಸ್ವಲ್ಪ ಸರಿಯಾಗಿದ್ದಿದ್ದರೆ... ಎಲ್ಲದಕ್ಕೂ ಪಡೆದುಕೊಂಡು ಬರಬೇಕು.. ಅಮ್ಮನ ಸೀರೆಗಳಲ್ಲಿ ಒಂದನ್ನು ಆರಿಸಿ ಉಟ್ಟು ಸ್ವಲ್ಪವಾದರೂ ನೋಡುವಂತಿರಲಿ ಎಂದು ಸಾಹಸ ಪಡುತ್ತಿರುವಾಗ ಅಮ್ಮ ಒಂದು ಚಿಟಿಕೆ ಕುಂಕುಮ ತಂದು ಬೈತಲೆಗೆ ಹಚ್ಚಿ, ಎರಡು ಸೇವಂತಿಗೆ ಮುಡಿಗೆ ಸಿಕ್ಕಿಸಿ ‘‘ಈ ಕೆಲಸವಾದರೂ ನಿನಗೆ ಸಿಗಲಮ್ಮಾ.. ನಮ್ಮ ಕಷ್ಟಗಳೆಲ್ಲ ದೂರವಾಗಲಿ’’ ಎಂದು ಆಶೀರ್ವಾದ ಮಾಡಿದಳು. ಇಲ್ಲಿ ಅಮ್ಮನ ಆಶೀರ್ವಾದ ಬಿಡಿ, ಬ್ರಹ್ಮನ ಆಶೀರ್ವಾದಕ್ಕೂ ಪವರ್ ಇಲ್ಲ ಎಂಬುದು ಪಾಪ ಅಮ್ಮನಿಗೇನು ಗೊತ್ತು.

ಈಗಾಗಲೇ ಮೂರು ಜನ ಒಳಗೆ ಹೋಗಿ ಹಿಂತಿರುಗಿಯಾಗಿತ್ತು. ಬರುವಾಗ ಅವರ ಮುಖದಲ್ಲಿ ಯುದ್ಧವನ್ನು ಗೆದ್ದು ಬಂದ ಹುರುಪನ್ನು ಗಮನಿಸಿದ್ದೆ. ನಾಲ್ಕನೆಯವಳು ಒಳಗಿದ್ದಳು. ಮುಂದಿನ ಸರದಿ ನನ್ನದು. ಎಷ್ಟೇ ಅನುಭವವಿದ್ದರೂ ನನ್ನೆದೆ ಬಡಿದುಕೊಳ್ಳತೊಡಗಿತ್ತು.... ನಾಲ್ಕನೆಯವಳು ಹೊರಬಂದಳು. ಕರೆಗಂಟೆ ಬಾರಿಸಿತು... ಬಾಗಿಲು ದೂಡಿ ಒಳಗಡಿ ಇಟ್ಟೆ... ಅಲ್ಲಿ ಒಬ್ಬ ಯುವಕ ಫೈಲ್ ನೋಡುತ್ತಾ ಕುಳಿತಿದ್ದ. ಹವಾನಿಯಂತ್ರಿತ ಕೋಣೆಯಲ್ಲೂ ನಾನು ಬೆವರತೊಡಗಿದ್ದೆ. ‘ಬನ್ನಿ’ ಆತ ತಲೆ ಎತ್ತದೆ ನೋಡಿದ. ನಾನು ಹೋಗಿ ಎದುರು ನಿಂತೆ... ಕೆಲವು ನಿಮಿಷಗಳು ಮೌನ... ಆತ ಫೈಲ್ ಮಡಚಿ ಮೇಜಿನ ಮೇಲಿಟ್ಟು ನನ್ನನ್ನು ನೋಡಿ ಮುಗುಳ್ನಕ್ಕ. ಕುರ್ಚಿ ತೋರಿಸಿ ‘‘ಕುಳಿತುಕೊಳ್ಳಿ’’ ಎಂದ.

‘‘ಪರವಾ ಇಲ್ಲ ಸಾರ್’’ ಎನ್ನುತ್ತಾ ನನ್ನ ಸರ್ಟಿಫಿಕೇಟ್‌ಗಳ ಫೈಲನ್ನು ಆತನಿಗೆ ಒಪ್ಪಿಸಿದೆ. ಆತ ಅವುಗಳನ್ನೆಲ್ಲ ತಿರುವಿ ಹಾಕತೊಡಗಿದ. ಕೋಣೆ ತುಂಬ ನಿಶ್ಶಬ್ದ ಆವರಿಸಿತ್ತು. ಮೈ ಬಿಸಿಯೇರತೊಡಗಿತ್ತು. ‘‘ದೇವರೇ ಈ ಕೆಲಸ ನನಗೇ ಸಿಗುವಂತಾಗಲಿ’’



ಎಂದು ಒಂದು ಕ್ಷಣ ಕಣ್ಣುಮುಚ್ಚಿ ಪ್ರಾರ್ಥಿಸಿದೆ.

‘‘ನಿಮ್ಮ ಮನೆ ಎಲ್ಲಿ?’’ ಇದು ಆತನ ಮೊದಲ ಪ್ರಶ್ನೆ.

‘‘ಇಲ್ಲಿಂದ ಇಪ್ಪತ್ತು ಕಿ.ಮೀ. ಇದೆ ಸಾರ್’’ ಎಂದೆ.

‘‘ಎಷ್ಟು ಬಸ್‌ಚಾರ್ಜ್?’’

‘‘ಒಂಬತ್ತು ರೂಪಾಯಿ ಸಾರ್’’

‘‘ಮನೆಯಲ್ಲಿ ಯಾರ್‍ಯಾರಿದ್ದಾರೆ?’’

ಇದೆಲ್ಲಾ ಇವನಿಗ್ಯಾಕೆ? ಎನಿಸಿದರೂ ಈ ಹಿಂದೆ ಇಂತಹ ಪ್ರಶ್ನೆಗಳನ್ನು ಯಾರೂ ಕೇಳಿರಲಿಲ್ಲ. ಮನೆಯ ಪರಿಸ್ಥಿತಿ ತಿಳಿದಾದರೂ ಕೆಲಸ ಕೊಟ್ಟರೆ ಎಂಬ ಆಸೆಯಿಂದ ‘‘ತಾಯಿ ಮತ್ತು ಮೂವರು ತಂಗಿಯರು ಸಾರ್’’ ಎಂದೆ.

‘‘ತಂದೆ..?’’

‘‘ಇಲ್ಲ ಸಾರ್... ಮೂರು ವರ್ಷಗಳ ಹಿಂದೆ ತೀರಿಕೊಂಡರು’’

‘‘ಜೀವನಕ್ಕೇನು ಮಾಡುತ್ತಿದ್ದೀರಿ?’’

‘‘ತಾಯಿ ಬೀಡಿ ಕಟ್ಟುತ್ತಾರೆ ಸಾರ್’’

‘‘ನಿಮಗೆ ಬೀಡಿ ಕಟ್ಟಲು ಬರುತ್ತದಾ?’’

‘‘ಬರುತ್ತೆ ಸಾರ್. ಆದರೆ ಈಗ ತಾಯಿ ಒಬ್ಬರಿಗೇ ಬೇಕಾಗುವಷ್ಟು ಕೆಲಸ ಕೂಡ ಇಲ್ಲ ಸಾರ್’’ ಎಂದೆ.

‘‘ತಂಗಿಯರು ಏನು ಮಾಡ್ತಿದ್ದಾರೆ?’’

‘‘ಓದುತ್ತಿದ್ದಾರೆ ಸಾರ್’’

‘‘ನೀವು ಎಷ್ಟು ಸಂಬಳ ನಿರೀಕ್ಷಿಸುತ್ತೀರಿ?’’

ನನ್ನ ಎದೆಬಡಿತ ಹೆಚ್ಚಾಗತೊಡಗಿತು... ಈ ಹಿಂದೆ ಯಾರೂ ಕೇಳದ ಪ್ರಶ್ನೆಗಳು. ಆತನ ಮಾತಿನ ಧಾಟಿಯಲ್ಲಿ ನನ್ನನ್ನೇ ಆಯ್ಕೆ ಮಾಡುವ ಎಲ್ಲ ಲಕ್ಷಣಗಳೂ ಗೋಚರಿಸಿದವು. ‘‘ನೀವು ಕೊಟ್ಟಷ್ಟು ಸಾರ್’’ ಎಂದೆ. ಮತ್ತೆರಡು ಕ್ಷಣ ಮೌನ.

‘‘ಅನುಭವ ಇಲ್ಲವೇ...?’’

‘‘ಇಲ್ಲ ಸಾರ್’’

ಆತ ತಕ್ಷಣ ಫೈಲ್ ಮುಚ್ಚಿ ತಲೆ ಎತ್ತಿದ. ಮುಖದಲ್ಲಿ ಅದೇ ಮಂದಹಾಸ. ‘‘ನಮಗೆ ಕನಿಷ್ಠ ಎರಡು ವರ್ಷಗಳ ಅನುಭವ ಬೇಕು. ಅದಿಲ್ಲದೆ ಏನು ಮಾಡೋದಕ್ಕೂ ಆಗೋಲ್ಲ’’ ಆತ ಫೈಲನ್ನು ನನ್ನ ಮುಂದೆ ಚಾಚಿದ.

ನನಗೆ ಒಮ್ಮೆಲೇ ಭೂಮಿಯೊಳಗೆ ಕುಸಿದಂತಾಯಿತು. ಮತ್ತೆ ಇಷ್ಟೆಲ್ಲಾ ಪ್ರಶ್ನೆಗಳನ್ನು ಯಾಕೆ ಕೇಳಿದ್ದು? ಮೊದಲೇ ಅನುಭವ ಕೇಳಲು ಏನು ಬಡಿದಿತ್ತು

ಇವನಿಗೆ... ನಾನು ಒಳಗೊಳಗೇ ಕುದಿಯತೊಡಗಿದೆ... ಆದರೂ... ''ಸಾರ್, ನಾವು ತುಂಬಾ ಬಡವರು ಸಾರ್... ಮೂರು ವರ್ಷದಿಂದ ಕೆಲಸಕ್ಕಾಗಿ ಅಲೆಯುತ್ತಿದ್ದೇನೆ. ಎಲ್ಲಿ ಹೋದರೂ ಅನುಭವವನ್ನೇ ಕೇಳುತ್ತಾರೆ. ಕೆಲಸ ಸಿಗದೆ ಹೇಗೆ ಸಾರ್ ಅನುಭವ ಆಗೋದು...'' ನಾನು ಮಾತನಾಡುತ್ತಿರುವಾಗಲೇ ಆತ ನನ್ನನ್ನು 'ಹೋಗು' ಎನ್ನುವಂತೆ ಕರೆಗಂಟೆ ಒತ್ತಿಯಾಗಿತ್ತು. ನನಗೆ ಬೇಕಂತಲೇ ಈತ ಅವಮಾನ ಮಾಡುತ್ತಿದ್ದಾನೆ ಎನಿಸಿತು. ಬಾಗಿಲ ಬಳಿ ಬಂದವಳನ್ನು ಕರೆದು ಆತ ಮತ್ತೆ ಹೇಳಿದ ''ನೀವು ಹೋಗಬೇಡಿ. ಒಂದರ್ಧ ಗಂಟೆ ಹೊರಗೆ ಕುಳಿತುಕೊಳ್ಳಿ... ನಾನು ಕರೆಯುತ್ತೇನೆ'' ಎಂದು.

ನನ್ನ ಮನಸ್ಸಿನ ಮೂಲೆಯಲ್ಲಿ ಆಸೆ ಮತ್ತೆ ಚಿಗುರೊಡೆಯಿತು. ಹೊರ ಬಂದಾಗ ಸರದಿಯಲ್ಲಿ ಮತ್ತೂ ನಾಲ್ಕು ಹುಡುಗಿಯರು ಸೇರಿಕೊಂಡಿದ್ದರು. ಅವರಲ್ಲಿಬ್ಬರಂತೂ ಸಿನಿಮಾ ತಾರೆಯರಂತಿದ್ದರು. ಅವರ ವೇಷ, ಬಣ್ಣ, ಅಲಂಕಾರ ನೋಡುವಾಗಲೇ ಶ್ರೀಮಂತ ಮನೆತನದವರೆಂದು ಗುರುತಿಸಬಹುದಿತ್ತು. ಇವರನ್ನು ಬಿಟ್ಟು ಈತ ನನಗೆ ಕೆಲಸ ಕೊಡುತ್ತಾನೆಯೇ? ಮತ್ತೇಕೆ ಕಾಯಲು ಹೇಳಿದ! ನನ್ನೊಳಗೇ ಗೊಂದಲ ಆರಂಭವಾಗಿತ್ತು. ಒಬ್ಬೊಬ್ಬರೇ ಒಳಗೆ ಹೋಗಿ ಬಂದು ಹಿಂತಿರುಗುತ್ತಿದ್ದರು. ಬಹುಶಃ ಕುಳಿತಿರಲು ಹೇಳಿದ್ದು ನನ್ನೊಬ್ಬಳನ್ನೇ. ನನಗೇ ಕೆಲಸ ಕೊಡಲು ಇರಬಹುದೇ? ತಲೆ ತುಂಬಾ ಯೋಚನೆಗಳು... ಸರದಿ ಮುಗಿದು ಕೊನೆಗೆ ನನಗೆ ಕರೆ ಬಂತು. ನಾನು ಒಳಗೆ ಹೋದೆ. ಆತ ಈಗ ತಿರುಗುವ ಕುರ್ಚಿಯಲ್ಲಿ ಆರಾಮವಾಗಿ ಮೈಚೆಲ್ಲಿ ಕುಳಿತಿದ್ದ. 'ಬನ್ನಿ' ಎನ್ನುತ್ತಾ ಕುರ್ಚಿ ತೋರಿಸಿದ. ಈ ಸಲ ಬೇಡವೆಂದರೂ ನನ್ನನ್ನು ಕುಳಿತುಕೊಳ್ಳಲು ಒತ್ತಾಯಿಸಿದ. ನಿರ್ಬಂಧಿತಳಾಗಿ ನಾನು ಕುಳಿತುಕೊಂಡೆ.

''ನೋಡಿ ಇದು ಬಹಳ ಜವಾಬ್ದಾರಿಯುತ ಹುದ್ದೆ. ಅನುಭವ ಇಲ್ಲದವರಿಗೆ ಈ ಕೆಲಸ ಕೊಡುವುದಿಲ್ಲ. ಇನ್ನೂ ಹತ್ತು ಜನ ಅರ್ಜಿ ಹಾಕಿದವರಿದ್ದಾರೆ. ಅವರ ಇಂಟರ್‌ವ್ಯೂ ನಾಳೆ ಇಟ್ಟುಕೊಂಡಿದ್ದೇವೆ. ನೇಮಕಾತಿಗೆ ಇನ್ನೂ ಒಂದೆರಡು ವಾರ ತಗಲಬಹುದು. ನಮಗೆ ಈಗಲೇ ಟೆಂಪರರಿ ಪೋಸ್ಟ್‌ಗೆ ಒಬ್ಬರು ಬೇಕು. ಒಂದು ತಿಂಗಳ ಮಟ್ಟಿಗೆ ಮಾತ್ರ. ಹೊಸ ನೇಮಕ ಆಗುವವರೆಗೆ. ನೀವು ಈಗ ಕೆಲಸ ಇಲ್ಲದೆ ಖಾಲಿ ಇದ್ದೀರಿ. ಇಷ್ಟವಿದ್ದರೆ ನೀವು ಈ ಕೆಲಸಕ್ಕೆ ಬರಬಹುದು. ಸ್ವಲ್ಪ ಮಟ್ಟಿನ ಅನುಭವವೂ ನಿಮಗೆ ಸಿಗುತ್ತೆ. ಕಂಡೀಶನ್ ಅಂದರೆ, ನಾಳೆಯೇ ಕೆಲಸಕ್ಕೆ ಹಾಜರಾಗಬೇಕು ಮತ್ತು ಒಂದು ತಿಂಗಳು ಮಾತ್ರ. ಸಂಬಳಾಂತ ಅಲ್ಲ, ನಿಮಗೆ ಸಂತೋಷವಾಗುವಂತೆ ಒಂದು ಎಮೌಂಟ್ ಕೊಡುತ್ತೇವೆ''.

ಏನು ಉತ್ತರಿಸಬೇಕೋ ತಿಳಿಯದೆ ನಾನು ಸುಮ್ಮನೆ ನಿಂತಿದ್ದೆ.



''ಸರಿ ಇನ್ನು ನೀವು ಹೋಗಿ. ಬರುವುದಾದರೆ ಬೆಳಗ್ಗೆ ಶಾರ್ಪ್ ಒಂಬತ್ತು ಗಂಟೆಗೆ ಜಾಯಿನ್ ಆಗಿ''.

ನಿರಾಶೆ ಹೊತ್ತು ಮನೆಗೆ ಹಿಂತಿರುಗಿದವಳು, ಅಮ್ಮನಲ್ಲಿ ವಿಷಯ ಚರ್ಚಿಸಿದೆ. ಒಂದು ತಿಂಗಳು ಕೆಲಸ ಮಾಡಿ ಒಂದೆರಡು ವರ್ಷ ಅನುಭವದ ಸರ್ಟಿಫಿಕೇಟ್ ಪಡೆಯಲು ಪ್ರಯತ್ನಿಸಬಹುದು ಎಂಬ ಆಲೋಚನೆಯೊಂದಿಗೆ ಕೆಲಸಕ್ಕೆ ಹೋಗಲು ನಿರ್ಧರಿಸಿದೆ.

ಮರುದಿನ ನಾನು ಕೆಲಸಕ್ಕೆ ಹಾಜರಾದೆ. ಅಂದೂ ಕೆಲವು ಹುಡುಗಿಯರ ಇಂಟರ್‌ವ್ಯೂ ನಡೆಯುತ್ತಿರುವುದನ್ನು ಗಮನಿಸಿದ್ದೆ. ಅಂತೂ ನನಗಿನ್ನು ಈ ಕೆಲಸ ಸಿಗುವುದು ದೂರದ ಮಾತೇ... ಇಷ್ಟು ಹುಡುಗಿಯರಲ್ಲಿ ಯಾರು ಆ ಅದೃಷ್ಟವಂತಳೋ ದೇವರಿಗೇ ಗೊತ್ತು...

ಕೆಲಸಕ್ಕೆ ಸೇರಿ ಅಂದಿಗೆ ಮೂರು ದಿನವಾಗಿತ್ತು. ಸಂಜೆ ಆತನ ಚೇಂಬರಿನೊಳಗೆ ಹೋಗಿದ್ದಾಗ ಆತ ಹೇಳಿದ :

''ನೋಡಿ ನಮ್ಮದು ಪ್ರತಿಷ್ಠಿತ ಸಂಸ್ಥೆ. ಇಲ್ಲಿಗೆ ದಿನಾ ಹಲವಾರು ಜನ ಬರುತ್ತಿರುತ್ತಾರೆ. ನಾಳೆಯಿಂದ ನೀವು ಬರುವಾಗ ಸ್ವಲ್ಪ ಒಳ್ಳೆಯ ಬಟ್ಟೆಯನ್ನು ಹಾಕಿಕೊಂಡು ಬರಬೇಕು. ನಿಮ್ಮ ಸ್ಥಾನಕ್ಕೆ ಒಪ್ಪುವಂತಹ ಬಟ್ಟೆ ಧರಿಸಿದರೆ ಅದು ನಮಗೂ ಗೌರವ''.

ನಾನು ಮಾತನಾಡಲಿಲ್ಲ. ಮಾತನಾಡಲಿಕ್ಕೇನಿದೆ.. ನಾನೀಗ ಧರಿಸಿರುವ ಬಟ್ಟೆಯೇ ನನ್ನದಲ್ಲ. ಗೆಳತಿಯಿಂದ ಕೆಲವು ದಿನಗಳ ಮಟ್ಟಿಗೆ ಎಂದು ಹೇಳಿ ಪಡೆದುಕೊಂಡದ್ದು. ಇನ್ನು ಇದಕ್ಕಿಂತ ಒಳ್ಳೆಯ ಬಟ್ಟೆಗೆ ನಾನೆಲ್ಲಿ ಹೋಗಲಿ...? ನನ್ನಲ್ಲಿರುವ ಒಳ್ಳೆಯ ಬಟ್ಟೆ ಎಂದರೆ ತಂದೆ ಬದುಕಿದ್ದಾಗ ತಾಯಿಗೆ ತೆಗೆದುಕೊಟ್ಟ ಸೀರೆಗಳು ಮಾತ್ರ.

ಮರುದಿನ ನಾನು ತಾಯಿಯ ಸೀರೆಯನ್ನು ಉಟ್ಟುಕೊಂಡು ಹೋಗಿದ್ದೆ. ಆತ ಒಮ್ಮೆ ನನ್ನನ್ನು ತಲೆಯಿಂದ ಕಾಲಿನವರೆಗೆ ನೋಡಿದ. ಆ ನೋಟದಲ್ಲಿ ಅಸಮಾಧಾನವಿತ್ತು. ನಾನೇನು ಮಾಡಲಿಕ್ಕಾಗುತ್ತೆ. ಇವನ ಒಂದು ತಿಂಗಳ ಕೆಲಸಕ್ಕೆ ನಾಟಕದ ಬಾಡಿಗೆ ಬಟ್ಟೆ ತರಲಾಗುತ್ತದಾ?

ಸಂಜೆ ಮತ್ತೆ ಆತನ ಚೇಂಬರಿಗೆ ಹೋದಾಗ ಆತ ಕೇಳಿದ ''ನಿಮ್ಮಲ್ಲಿ ಒಳ್ಳೆಯ ಬಟ್ಟೆಗಳಿಲ್ಲವೇ?''

ನಾನು ಸುಮ್ಮನೆ ನೆಲ ನೋಡುತ್ತಾ ನಿಂತೆ. ಇವನಿಗೇಕೆ ಅಧಿಕಪ್ರಸಂಗ. ಯಾಕೋ ಇವನದ್ದು ಅತಿಯಾಯಿತು ಎನಿಸಿತು.

ಆತ ತನ್ನ ಗುರುತು ಕಾರ್ಡನ್ನು ನನ್ನತ್ತ ಚಾಚಿ ಹೇಳಿದ ''ಇದರ ಹಿಂದೆ ಇರುವ

ವಿಳಾಸದ ಮಳಿಗೆಗೆ ಹೋಗಿ ಈ ಗುರುತು ಕಾರ್ಡು ತೋರಿಸಿ ನಿಮಗೆ ಬೇಕಾದ ಬಟ್ಟೆಗಳನ್ನು ಖರೀದಿಸಿಕೊಳ್ಳಿ. ನಾನು ಫೋನ್ ಮಾಡಿ ಹೇಳುತ್ತೇನೆ''.

''ಬೇಡ ಸಾರ್...'' ಎಂದೆ.

''ತಗೊಳ್ಳಿ... ಇಂದೇ ಹೋಗಿ'' ಆತನ ಮಾತು ಆಜ್ಞೆಯಂತಿತ್ತು.

ಮಾತು ಮುಂದುವರೆಸಲು ಇಷ್ಟವಾಗದೆ ಕಾರ್ಡು ಪಡೆದು ಹೊರಗೆ ಬಂದೆ. ನನ್ನ ಸ್ವಾಭಿಮಾನವನ್ನೇ ಕೆಣಕಿದಂತಾಗಿತ್ತು. ಏನು! ಇವನು ನನ್ನ ಮೇಲೆ ಅಧಿಕಾರ ಚಲಾಯಿಸುತ್ತಿದ್ದಾನೆಯೇ? ಬಡವರೆಂದರೆ ಇವನಿಗೆ ಇಷ್ಟೊಂದು ತಾತ್ಸಾರವೇ...? ಅಲ್ಲಾ ಅನುಕಂಪವಿರಬಹುದೇ?... ಇವನ ಅನುಕಂಪ ಯಾರಿಗೆ ಬೇಕು... ಸಂಜೆಯಾಗುತ್ತಲೇ ಅವನ ಕಾರ್ಡು ಹರಿದು ಹಾಕಿ ಮನೆಯ ದಾರಿ ಹಿಡಿದೆ.

ಮರುದಿನ ಹೋದಾಗ ಆತನ ಕಣ್ಣಲ್ಲಿ ಅಸಹನೆ ಗೋಚರಿಸುತ್ತಿತ್ತು. ಅಂದಿಡೀ ಆತ ನನ್ನಲ್ಲಿ ಮಾತೇ ಆಡಲಿಲ್ಲ. ಮುಖ ಊದಿಕೊಂಡೇ ಇತ್ತು.

ಸಂಜೆ ಆಫೀಸು ಮುಗಿಯತ್ತಲೇ ಆತ ''ಒಂದರ್ಧ ಗಂಟೆ ನನ್ನ ಜೊತೆ ಬನ್ನಿ'' ಎಂದ. ದೊರೆ ತನ್ನ ಆಳಿಗೆ ಹೇಳುವ ಧಾಟಿಯಲ್ಲಿತ್ತು ಆ ಮಾತು. ನಾನು ಒಮ್ಮೆ ಗಲಿಬಿಲಿಗೊಂಡೆ. ಸಾವರಿಸಿಕೊಂಡು ಆತನ ಹಿಂದೆ ನಡೆದೆ. ಆತ ಡ್ರೈವರ್‌ನಿಂದ ತನ್ನ ಕಾರಿನ ಕೀ ಪಡೆದುಕೊಂಡು, ''ನೀನು ಮನೆಗೆ ಹೋಗು'' ಎನ್ನುತ್ತಾ ಕಾರಿನ ಚಾಲಕನ ಸ್ಥಾನದಲ್ಲಿ ಕುಳಿತು, ಮುಂದಿನ ಬಾಗಿಲು ತೆರೆದು ''ಕುಳಿತುಕೊಳ್ಳಿ'' ಎಂದು ಆಜ್ಞೆ ಮಾಡಿದ.

ಎಲ್ಲಿಗೆ ಎಂದು ಕೇಳುವುದು ಬಿಡಿ, ಯೋಚಿಸುವಷ್ಟು ಕೂಡಾ ನನಗೆ ಸಮಯ ವಿರಲಿಲ್ಲ. ಆತ ಕಾರು ಸ್ಟಾರ್ಟ್ ಮಾಡಿಯಾಗಿತ್ತು. ನಾನು ಸಮ್ಮೋಹನಕ್ಕೊಳಗಾದವಳಂತೆ ಹತ್ತಿ ಕುಳಿತೆ. ಆತನೇ ಬಗ್ಗಿ ಬಾಗಿಲೆಳೆದುಕೊಂಡ. ಕಾರು ಹೊರಟಿತು.

ಹವಾನಿಯಂತ್ರಿತ ಕಾರಿನೊಳಗೆ ತಂಪೇರತೊಡಗಿತ್ತು. ನಾನು ಈತನ ಜೊತೆ ಎಲ್ಲಿಗೆ ಹೊರಟಿದ್ದೇನೆ? ಯಾಕೆ ಹೋಗುತ್ತಿದ್ದೇನೆ? ಹೃದಯದ ಮೂಲೆಯಲ್ಲಿ ಚಿಕ್ಕ ಭಯದ ಕಿಡಿಯೊಂದು ಹೊತ್ತಿಕೊಳ್ಳತೊಡಗಿತ್ತು. ಮೆಲ್ಲ ಕತ್ತು ತಿರುಗಿಸಿ ಆತನ ಮುಖ ನೋಡಿದೆ. ಹುಬ್ಬು ಗಂಟಿಕ್ಕಿಯೇ ಇತ್ತು. ಎಲ್ಲಿಗೆ ಎಂದು ಕೇಳುವ ಧೈರ್ಯ ನನಗಿರಲಿಲ್ಲ. ನಾನು ಎಷ್ಟೊಂದು ಪುಕ್ಕಲು ಎಂದು ಆಗಲೇ ಗೊತ್ತಾದದ್ದು. ಆತ ಗುಂಡಿ ಒತ್ತಿರಬೇಕು. ಇದ್ದಕ್ಕಿದ್ದಂತೆ ತೇಲಿ ಬಂದ ಹದವಾದ, ಹಿತವಾದ ಶಾಸ್ತ್ರೀಯ ಸಂಗೀತ ಮನಸ್ಸಿಗೆ ಮುದ ನೀಡತೊಡಗಿತು. ಇಂಪಾದ ಗಾನ, ಮೈಕೊರೆವ ಚಳಿ, ಜೊತೆಗೆ ಒಳಗಿನ ಆಹ್ಲಾದಕರ ಸುವಾಸನೆಗೆ ಮೈಮರೆತು ಕುಳಿತುಬಿಟ್ಟೆ. ಹಿಂದೆಂದೂ ನಾನು ಇಂತಹ ಕಾರಿನಲ್ಲಿ ಪಯಣಿಸಿದ್ದಿಲ್ಲ. ಇಂತಹ ಸುಖವನ್ನು ಅನುಭವಿಸಿರಲಿಲ್ಲ..



ಸುಖ ಎಂದರೆ ಇದುವೇ ಇರಬೇಕು.

ದಾರಿಯುದ್ದಕ್ಕೂ ಆತನ ಬಾಯಿಯಿಂದ ಒಂದೇ ಒಂದು ಶಬ್ದವೂ ಉದುರಲಿಲ್ಲ. ಆತನ ಮುಖದ ಗಂಟು ಈಗ ಸಡಿಲವಾಗತೊಡಗಿತ್ತು. ಕೈಬೆರಳುಗಳು ಸ್ಟೇರಿಂಗ್‌ನ ಮೇಲೆ ಸಂಗೀತಕ್ಕೆ ತಾಳ ಹಾಕುತ್ತಿದ್ದವು. ಸುಮಾರು ಅರ್ಧ ಗಂಟೆಯ ಪ್ರಯಾಣದ ಬಳಿಕ ಕಾರು ನಿಂತಿತು. ಆತ ಇಳಿದು ನನ್ನನ್ನು ಇಳಿಯುವಂತೆ ಹೇಳಿ ''ಬನ್ನಿ'' ಎಂದ. ನಾನು ಆತನ ಹಿಂದೆ ನಡೆದೆ. ಆತ ಒಂದು ಬೃಹತ್ ಜವಳಿ ಮಳಿಗೆಯೊಳಗೆ ಹೊಕ್ಕ. ಮಳಿಗೆಯ ಮಾಲಕರು ಎದ್ದು ನಿಂತು ಬಹಳ ಗೌರವದಿಂದ ಆತನಿಗೆ ಕುರ್ಚಿ ನೀಡಿ ''ಏನು ಬೇಕಿತ್ತು ಸಾರ್?'' ಎಂದು ಕೇಳಿದರು. ''ಇವರಿಗೆ ಬಟ್ಟೆ ತೋರಿಸಿ'' ಎಂದು, ನನ್ನಲ್ಲಿ ''ನಿಮಗೆ ಯಾವುದು ಬಟ್ಟೆ ಬೇಕು ಆರಿಸಿಕೊಳ್ಳಿ'' ಎಂದ. ನನಗೆ ಈಗ ಆತನ ಉದ್ದೇಶ ಅರ್ಥವಾಗಿತ್ತು. ಮಾಲಕರೇ ನನ್ನನ್ನು ಕರೆದೊಯ್ದು ಬಟ್ಟೆಗಳ ರಾಶಿ ಹಾಕಿದರು. ಎಲ್ಲಾ ದುಬಾರಿ ಬೆಲೆಯವು. ನನಗೆ ಯಾವುದು ಆರಿಸಬೇಕೆಂದೇ ತಿಳಿಯಲಿಲ್ಲ. ನಾನು ಗಲಿಬಿಲಿಗೊಂಡಿದ್ದೆ. ಈಗ ಅವನೇ ಎದ್ದು ಬಂದು ನನ್ನ ಬಳಿ ನಿಂತು ನಾಲ್ಕು ಸಿದ್ಧ ಉಡುಪುಗಳನ್ನು ಎರಡು ಸೀರೆಗಳನ್ನೂ ಆರಿಸಿದ. ನನ್ನತ್ತ ತಿರುಗಿ ''ಆಗಬಹುದಲ್ಲವೇ?'' ಕೇಳಿದ. ನಾನು ಆತನ ಮುಖ ನೋಡಿದೆ. ಇನ್ನು ಅದಕ್ಕೆ ಸಂಬಂಧಪಟ್ಟದ್ದು ಏನೇನು ಬೇಕೋ ತೆಗೆದುಕೊಳ್ಳಿ ಎನ್ನುತ್ತಾ ಆತ ಹೋಗಿ ಮೊದಲಿದ್ದ ಕುರ್ಚಿಯಲ್ಲಿ ಕುಳಿತ. ಆತ ಹೇಳಿದ್ದು ಒಳಉಡುಪುಗಳು ಎಂದು ನನಗೆ ಮನದಟ್ಟಾಯಿತು. ಇನ್ನು ನಿಧಾನಿಸಿದರೆ ಆತ ಮತ್ತೆ ಬಂದಾನು ಎಂದು ಬೇಗ ಬೇಗ ಖರೀದಿಸಿದೆ. ಮಾಲಕರು ಎಲ್ಲವನ್ನು ಪ್ಯಾಕ್ ಮಾಡಿ ಚೀಲವನ್ನು ನನ್ನ ಕೈಗಿತ್ತರು. ಅಂಗಡಿಯಿಂದ ಹೊರಗೆ ಬಂದವನೇ ಆತ ನನ್ನ ಕೈಯಿಂದ ಚೀಲವನ್ನು ಪಡೆದು ಕಾಲಿನಲ್ಲಿರಿಸಿ ನನ್ನನ್ನು ಒಂದು ಚಪ್ಪಲಿ ಅಂಗಡಿಗೆ ಕರೆದೊಯ್ದ. ನನ್ನ ಕಾಲಿನ ಅಳತೆಯ ಎರಡು ಜೊತೆ ಚಪ್ಪಲಿಗಳನ್ನು ಖರೀದಿಸಿದ. ನಾನೀಗ ಮೂಗುದಾರ ಹಾಕಿದ ಪ್ರಾಣಿಯಂತಾಗಿದ್ದೆ. ಅವನಿಷ್ಟಕ್ಕೆ ವಿರುದ್ಧವಾಗಿ ಏನೂ ಹೇಳಲೂ ನನ್ನಿಂದ ಸಾಧ್ಯವಾಗುತ್ತಿರಲಿಲ್ಲ. ನಾನು ನನ್ನತನವನ್ನೆಲ್ಲ ಅವನಿಗೆ ಒಪ್ಪಿಸಿಬಿಟ್ಟಿದ್ದೆ. ಮತ್ತೆ ಕಾರು ಮುಂದುವರಿದು ಒಂದು ದೊಡ್ಡ ಹೊಟೇಲ್ ಮುಂದೆ ನಿಂತಿತು. ''ಬನ್ನಿ, ತುಂಬಾ ಹಸಿವಾಗ್ತಾ ಇದೆ. ಏನಾದರೂ ತಿನ್ನೋಣ'' ಎಂದ. ''ನನಗೆ ಬೇಡ'' ಎನ್ನಲೂ ಅವಕಾಶ ವಿಲ್ಲದ ರೀತಿಯಲ್ಲಿ ಆತ ಮಾತನಾಡುತ್ತಿದ್ದ.

ಹೋಟೆಲ್‌ನಲ್ಲಿ ಅವನೆದುರು ತಲೆತಗ್ಗಿಸಿ ಕುಳಿತಿದ್ದೆ. ನಾನು ಎಂದೂ ಹೀಗೆ ಪರಪುರುಷನ ಜೊತೆ ಎಲ್ಲಿಗೂ ಹೋದವಳಲ್ಲ. ಸಂಕೋಚದಿಂದ ಮುದುಡಿ ಹೋಗಿದ್ದೆ. ''ಏನು ತಗೋಳ್ತೀರಿ? ಮೆನು ನೋಡಿ'' ಎಂದ. ''ನನಗೆ ಟೀ ಸಾಕು'' ಎಂದೆ. ಆಫೀಸಿ

ನಿಂದ ಹೊರಟ ಮೇಲೆ ನಾನು ಅವನ ಜೊತೆ ಆಡಿದ ಮೊದಲ ಮಾತಿದು. ಆತನೇ ತಿಂಡಿಗೆ ಆರ್ಡರ್ ಮಾಡಿದ. ''ಐಸ್‌ಕ್ರೀಂ ಬೇಕಾ?'' ಕೇಳಿದ. ''ಬೇಡ'' ಎಂದು ತಲೆಯಾಡಿಸಿದೆ. ತಿಂಡಿ ತಿಂದು ಟೀ ಕುಡಿದು ಆತ ನನ್ನನ್ನು ಬಸ್ ನಿಲ್ದಾಣದಲ್ಲಿ ತಂದು ಇಳಿಸಿದ. ಬಟ್ಟೆಯ ಚೀಲಗಳನ್ನೆಲ್ಲ ನನ್ನ ಕೈಗಿತ್ತು ''ಬಾಯ್'' ಎಂದು ಮುಗುಳುನಕ್ಕ. ಕಾರು ಹೊರಟುಹೋಯಿತು. ನಾನು ಕೆಲವು ಕ್ಷಣ ಕಾರು ಹೋಗುವುದನ್ನೇ ನೋಡುತ್ತಾ ನಿಂತುಬಿಟ್ಟೆ.

ಬಸ್ಸೇರಿ ಕುಳಿತವಳಿಗೆ ಏನೋನೋ ಯೋಚನೆಗಳು. ಅಮ್ಮ ಕೇಳಿದರೆ ಏನೆಂದು ಹೇಳುವುದು? ಈ ಬಟ್ಟೆಗಳ ಬಿಲ್ಲನ್ನು ಸಂಬಳದಲ್ಲಿ ಕಳೆದರೆ ನನಗೆ ಒಂದು ಪೈಸೆಯೂ ಸಿಗಲಿಕ್ಕಿಲ್ಲ. ಈ ಬಟ್ಟೆಗಳ ಬದಲು ಆತ ಸಂಬಳವನ್ನೇ ಕೊಟ್ಟಿದ್ದರೆ ತಂಗಿಯರ ಕಾಲೇಜು ಫೀಸನ್ನಾದರೂ ಕಟ್ಟಬಹುದಿತ್ತು... ಹೀಗೆ ಚಿಂತಿಸುತ್ತಾ ಮನೆ ಸೇರಿದವಳು ಅಮ್ಮನಲ್ಲಿ ವಿಷಯವೆಲ್ಲ ತಿಳಿಸಿದೆ. ಅಮ್ಮ ಏನೊಂದೂ ಮಾತನಾಡಲಿಲ್ಲ. ತಂಗಿಯರಂತೂ ಬಟ್ಟೆಗಳನ್ನು ನೋಡಿ ಕುಣಿದು ಕುಪ್ಪಳಿಸಿದರು. ''ಅಕ್ಕ, ಇದೊಂದು ನಾಳೆ ನನಗೆ ಕಾಲೇಜಿಗೆ ಹಾಕ್ಕೊಂಡು ಹೋಗ್ಲಿಕ್ಕೆ ಕೊಡು... ಅಕ್ಕಾ, ಈ ಸೀರೆ ಒಂದು ದಿನ ನಾನು ಉಟ್ಟುಕೊಳ್ಳುತ್ತೇನೆ'' ಎನ್ನುತ್ತಾ ಸಂಭ್ರಮಪಟ್ಟರು.

ಮರುದಿನ ಹೊಸಬಟ್ಟೆ ಧರಿಸಿಕೊಂಡು ಆಫೀಸಿಗೆ ಹೋದಾಗ ಜನರೆಲ್ಲಾ ನನ್ನನ್ನೇ ನೋಡುತ್ತಿದ್ದಾರೆ ಎಂದೆನಿಸತೊಡಗಿತ್ತು. ಇನ್ನು ಆತನ ಮುಂದೆ ಹೇಗೆ ಹೋಗುವುದು ಎಂದು ಯೋಚಿಸುತ್ತಿರುವಾಗಲೇ ಕರೆಗಂಟೆ ಕೇಳಿಸಿತು. ಎದ್ದು ಒಳಗಡಿ ಇಟ್ಟೆ. ನಾಚಿಕೆ, ಸಂಕೋಚದಿಂದ ಮೈಮನ ಮುದುಡಿಹೋಗಿತ್ತು. ಆತನ ಮುಖ ನೋಡಲು ಸಾಧ್ಯವಾಗದೆ ಹಾಗೆಯೇ ತಲೆ ತಗ್ಗಿಸಿ ನಿಂತುಬಿಟ್ಟೆ. ನಿಮಿಷಗಳು ಕಳೆದರೂ ಆತನಿಂದ ಯಾವುದೇ ಮಾತು ಕೇಳಿ ಬರದಾಗ ಮೆಲ್ಲ ಕಣ್ಣೆತ್ತಿ ನೋಡಿದೆ. ಆತ ಕುರ್ಚಿಗೊರಗಿ ಬಿಟ್ಟ ಕಣ್ಣಿನಿಂದ ನನ್ನನ್ನೇ ನೋಡುತ್ತಿದ್ದ. ಆ ನೋಟದಲ್ಲಿ ಆಶ್ಚರ್ಯ, ಮೆಚ್ಚುಗೆ ಎದ್ದು ಕಾಣುತ್ತಿತ್ತು.

ದಿನ ಕಳೆಯುತ್ತಿತ್ತು. ನಾನು ಬಹಳ ಮುತುವರ್ಜಿಯಿಂದ ಕೆಲಸ ನಿರ್ವಹಿಸುತ್ತಿದ್ದೆ. ಆತನ ನೋಟದಲ್ಲಿ ಮಾತಿನಲ್ಲಿ ಮೆಚ್ಚುಗೆ, ತೃಪ್ತಿ ಗಮನಿಸುತ್ತಿದ್ದೆ. ಯಾಕೋ ಇತ್ತೀಚೆಗೆ ಆತ ನನಗೆ ಬಹಳ ಇಷ್ಟವಾಗತೊಡಗಿದ್ದ. ಆತನ ಸುಂದರ ಮುಖ ಆಗಾಗ ನನ್ನ ಮುಂದೆ ಸುಳಿಯತೊಡಗಿತ್ತು. ನಾನೀಗ ಅಲಂಕಾರಕ್ಕೆ ಹೆಚ್ಚು ಗಮನ ಕೊಡತೊಡಗಿದ್ದೆ. ಆತನೇ ಕೊಟ್ಟ ಬಟ್ಟೆಯಲ್ಲಿ, ಸಿಂಗರಿಸಿಕೊಂಡು ಆತನ ಮುಂದೆ ಹೋಗಿ ನಿಂತು ಆತನಿಂದ ಮೆಚ್ಚುಗೆ ಗಳಿಸುವುದು ನನಗೀಗ ಬಹಳ ಸಂತೋಷದ ವಿಷಯವಾಗಿತ್ತು. ಮತ್ತೆ ಆತ ನನ್ನನ್ನು ಎಲ್ಲಿಗಾದರೂ ಕಾರಿನಲ್ಲಿ ಕರೆದೊಯ್ಯಬಾರದೇ?



ಎಂದು ಮನಸ್ಸು ಹಾತೊರೆಯುತ್ತಿತ್ತು.

ಹೀಗೆ ಮೂರು ವಾರಗಳು ಮೂರು ದಿನಗಳಂತೆ ಕಳೆದುಹೋದವು. ಇಲ್ಲಿ ನನಗೆ ಸೋಜಿಗ ತಂದ ವಿಷಯವೆಂದರೆ ನನ್ನ ಹುದ್ದೆಗೆ ಈ ತನಕ ಯಾರೂ ಬಾರದೇ ಇದ್ದುದು. ಈ ಹುದ್ದೆಗೆ ಯಾರು ಆಯ್ಕೆಯಾಗಿರಬಹುದು ಎಂಬ ಕುತೂಹಲ ನನ್ನಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿತ್ತು. ಜೊತೆಗೆ ಇನ್ನು ಒಂದು ವಾರ ಮಾತ್ರ ಈ ಕೆಲಸ. ಮತ್ತೆ ಮನೆಯಲ್ಲಿ ಬಿದ್ದಿರಬೇಕು ಎಂಬ ಚಿಂತೆ ನನ್ನ ನಿದ್ದೆ ಕೆಡಿಸಿತ್ತು.

ಒಂದು ತಿಂಗಳಿಗೆ ಇನ್ನು ಎರಡು ದಿನ. ಬರೇ ಎರಡು ದಿನ ಮಾತ್ರ ಬಾಕಿ ಇದ್ದವು. ಈ ಹುದ್ದೆಗೆ ಆಯ್ಕೆಯಾದವರ ಬಗ್ಗೆ ಆತನಿಂದಲೂ ಯಾವುದೇ ಸುಳಿವು ಸಿಕ್ಕಿರಲಿಲ್ಲ. ನಾನು ಹುಚ್ಚಿಯಂತಾಗಿಬಿಟ್ಟಿದ್ದೆ. ಅಂದು ಆತನಿಲ್ಲದ ಸಮಯ ನೋಡಿ ಚೇಂಬರಿನೊಳಗೆ ಹೋಗಿ ಫೈಲ್ ತೆಗೆದು ಕೆಲಸಕ್ಕೆ ಅರ್ಜಿ ಸಲ್ಲಿಸಿದವರ ಅರ್ಜಿಗಳನ್ನೆಲ್ಲಾ ತೆಗೆದು ನೋಡಿದೆ. ಒಟ್ಟು ಹತ್ತೊಂಭತ್ತು ಅರ್ಜಿಗಳಿದ್ದವು. ಎಲ್ಲರಿಗೂ ಎರಡು ಮೂರು ವರ್ಷಗಳ ಅನುಭವವಿತ್ತು. ಮೂರರಿಂದ ಐದು ಸಾವಿರದವರೆಗೆ ಸಂಬಳ ನಿರೀಕ್ಷಿಸಿದವರೂ ಇದ್ದರು. ಆದರೆ ಆಯ್ಕೆಯಾದವರ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ.

ಆಗಲೇ ನನಗೊಂದು ಯೋಚನೆ ಹೊಳೆಯಿತು. ಫೈಲ್‌ನಲ್ಲಿದ್ದ ಒಬ್ಬಳು ಅರ್ಜಿದಾರಳ ಹೆಸರು ವಿಳಾಸ ತೆಗೆದು ಗೆಳತಿಯೊಬ್ಬಳಿಗೆ ಫೋನ್ ಮಾಡಿದೆ. ಈ ಹೆಸರು, ವಿಳಾಸ ಹೇಳಿ ನನ್ನ ಬಾಸ್‌ಗೆ ಫೋನ್ ಮಾಡಬೇಕೆಂದೂ, ನನ್ನ ಈ ಹುದ್ದೆಗೆ ಆಯ್ಕೆ ಆಗಿದೆಯೇ ಎಂದು ವಿಚಾರಿಸಬೇಕೆಂದೂ ಸಂಜೆ ಮನೆಗೆ ಬರುವುದಾಗಿಯೂ ಹೇಳಿ ಬಾಸ್‌ನ ಫೋನ್ ನಂಬರ್ ಕೊಟ್ಟೆ.

ಸಂಜೆ ಗೆಳತಿಯ ಮನೆಗೆ ಹೋದ ನಾನು ಮತ್ತಷ್ಟು ಗೊಂದಲಕ್ಕೆ ಒಳಗಾಗಿಬಿಟ್ಟೆ. 'ಆ ಸ್ಥಾನಕ್ಕೆ ಈಗಾಗಲೇ ಆಯ್ಕೆ ಆಗಿದೆ' ಎಂದು ಬಾಸ್ ಹೇಳಿದರಂತೆ. ಯಾರಿರಬಹುದು? ಇದೇ ತೊಳಲಾಟದಲ್ಲಿ ರಾತ್ರಿಯೆಲ್ಲಾ ಹೊರಳಾಡಿದೆ.

ಅಂದು ಕೊನೆಯ ದಿನ. ಆಫೀಸಿಗೆ ಹೋದ ನನಗೆ ಮನಸ್ಸೇ ಹಿಡಿತದಲ್ಲಿರಲಿಲ್ಲ. ಯಾವುದರಲ್ಲೂ ಆಸಕ್ತಿ ಇರಲಿಲ್ಲ. ಮನ ತುಂಬಾ ಚಿಂತೆ ಮಡುಗಟ್ಟಿಹೋಗಿತ್ತು. ಆದರೆ ಆತ ಅದೇ ಹುರುಪಿನಲ್ಲಿದ್ದ. ಅದೇ ನಗು, ಅದೇ ಮಾತು, ಅದೇ ಮಂದಹಾಸ. ನನ್ನ ಕೆಲಸದ ಕೊನೆಯ ದಿನದ ಬಗ್ಗೆ ಆತನ ಮುಖದಲ್ಲಿ ಯಾವುದೇ ನೋವು ಗೋಚರಿಸಲಿಲ್ಲ. ಯಾವುದೇ ಭಾವನೆಗಳು ಕಂಡುಬರಲಿಲ್ಲ. ನಾನು ಹೋದರೆ ಇವನಿಗೇನು? ನನಗಿಂತ ಸುಂದರಿಯಾದವಳು ಇವನಿಗೆ ಸಿಗುತ್ತಾಳೆ. ಈತ ಮಾಡಿದ್ದೆಲ್ಲವೂ ನನ್ನ ಮೇಲಿನ ಅನುಕಂಪದಿಂದ, ಬಡವಳು ಎಂಬ ಅನುಕಂಪದಿಂದ...

ಇದರಲ್ಲಿ ಇವನದ್ದೇನು ತಪ್ಪು? ಈತ ಮೊದಲೇ ಹೇಳಿದ್ದಾನಲ್ಲ. ಒಂದು ತಿಂಗಳು ಮಾತ್ರ ಎಂದು. ಹೌದು, ತಪ್ಪು ನನ್ನದೇ. ನಾನು ಆಸೆ ಪಡಬಾರದಿತ್ತು. ಇಷ್ಟೊಂದು ಆಸೆ ಪಡಬಾರದಿತ್ತು. ಇಷ್ಟಪಡಬಾರದಿತ್ತು... ಹೃದಯದಲ್ಲಿ ಸಣ್ಣಗೆ ನೋವು ಕಾಣಿಸಿಕೊಂಡಿತು... ಕಣ್ಣು ಮಂಜಾಯಿತು... ಈತನನ್ನು ಎಷ್ಟೊಂದು ಇಷ್ಟಪಟ್ಟೆ ನಾನು... ಆಕಾಶಕ್ಕೆ ಏಣಿ ಇಟ್ಟೆ... ತಪ್ಪು ನನ್ನದೇ... ಆತನೆಲ್ಲಿ... ನಾನೆಲ್ಲಿ... ಸಹಿಸಲಾರದ ನೋವು... ಹೃದಯ ಒಡೆದುಬಿಡುತ್ತದೋ ಎನ್ನುವಂತಹ ನೋವು... ಕಣ್ಣು ಮುಚ್ಚಿ ತುಟಿ ಕಚ್ಚಿ ಹಾಗೆಯೇ ಕುರ್ಚಿಗೊರಗಿ ಕುಳಿತುಬಿಟ್ಟೆ.

ಸಂಜೆ ಆತನೇ ನನ್ನನ್ನು ತನ್ನ ಚೇಂಬರಿಗೆ ಕರೆಸಿದ. ಒಂದು ಚೀಟಿ ಬರೆದು ನನಗೆ ನೀಡುತ್ತಾ ''ಇದನ್ನು ಎಕೌಂಟ್ ಸೆಕ್ಷನ್‌ನಲ್ಲಿ ಕೊಡಿ ನಿಮ್ಮ ಸಂಬಳ ಕೊಡ್ತಾರೆ'' ಎಂದ. ಚೀಟಿ ನೋಡಿದೆ. ನಾಲ್ಕು ಸಾವಿರ ರೂಪಾಯಿ ಎಂದು ಬರೆದು ಕೆಳಗೆ ಆತನ ಸಹಿ ಇತ್ತು.

''ನಾನು ಹೋಗ್ತೇನೆ ಸಾರ್, ನನ್ನಿಂದೇನಾದರೂ ತಪ್ಪಾಗಿದ್ದರೆ ಕ್ಷಮಿಸಿ'' ಎನ್ನುವಾಗ ನನಗೆ ದುಃಖ ಉಮ್ಮಳಿಸಿ ಬಂತು.

''ಯಾಕೆ? ಹೋಗ್ಲಿಕ್ಕೆ ನಿಮಗೆ ಇಷ್ಟಾನಾ?'' ಆತ ಕೇಳಿದ.

ನಾನು ಕಣ್ಣೊರೆಸಿಕೊಂಡೆ.

''ಬೇಡ, ನೀವು ಹೋಗುವುದು ಬೇಡ, ಈ ಹುದ್ದೆಗೆ ನಿಮ್ಮನ್ನೇ ಆಯ್ಕೆ ಮಾಡಿದ್ದೇನೆ. ನಿಮ್ಮ ಕೆಲಸ, ಶಿಸ್ತು ನನಗೆ ತುಂಬಾ ಇಷ್ಟವಾಗಿದೆ...'' ಆತ ಇನ್ನೂ ಅದೇನೋ ಹೇಳುತ್ತಲೇ ಇದ್ದ. ನಾನಾಗಲೇ ಅವನ ಕಾಲಬುಡದಲ್ಲಿಕುಸಿದು ಬಿಟ್ಟಿದ್ದೆ...

ಅದೆಷ್ಟು ಹೊತ್ತು ಹಾಗೆ ಬಿದ್ದಿದ್ದೆನೋ ಗೊತ್ತಿಲ್ಲ... ಮೈಮೇಲೆ ಏನೋ ಹರಿದಾಡಿದಂತಾಯಿತು... ಯಾರೋ ಭುಜವನ್ನು ಹಿಡಿದು ಕುಲುಕಿದಂತೆ... ದೇಹವನ್ನು ಸವರಿದಂತೆ... ಬೆಚ್ಚಿ ದಡಕ್ಕನೆದ್ದು ಕುಳಿತೆ...! ದೊಡ್ಡ ತಂಗಿ ನನ್ನ ಪಕ್ಕ ಕುಳಿತು ಭುಜ ಹಿಡಿದು ಹೇಳುತ್ತಿದ್ದಳು ಅಕ್ಕಾ... ಏಳಕ್ಕಾ.... ಹೊತ್ತಾಯಿತು.. ಈವತ್ತು ಇಂಟರ್‌ವ್ಯೂ ಇದೇಂತ ಹೇಳಿದ್ದಿಯಲ್ಲಕ್ಕಾ... ಹೋಗೋಲ್ವಾ... ಏಳಕ್ಕಾ... ಕಣ್ಣುಬಿಟ್ಟು ಒಮ್ಮೆ ಸುತ್ತಲೂ ನೋಡಿದೆ... ಕಾಲೇಜಿಗೆ ಹೊರಟು ನಿಂತ ದೊಡ್ಡ ತಂಗಿ... ಹರಿದ ತನ್ನ ಶಾಲಾ ಸಮವಸ್ತ್ರವನ್ನು ಹೊಲಿಯುತ್ತಿರುವ ಮತ್ತೊಬ್ಬಳು ತಂಗಿ... ಮೂಲೆಯಲ್ಲಿ ಕುಳಿತು ಮೌನವಾಗಿ ಕಪ್ಪು ಚಾ ಹೀರುತ್ತಿರುವ ಚಿಕ್ಕ ತಂಗಿ... ಜಗಲಿಯಲ್ಲಿ ಕುಳಿತು ಉಸಿರಿಗೊಮ್ಮೆ ಕೆಮ್ಮುತ್ತಾ ಬೀಡಿ ಸುರುಟುತ್ತಿರುವ ಅಮ್ಮ... ಕಣ್ಣು ಮಂಜಾಗತೊಡಗಿತು.

**ಸವಿತಾವಾಣಿ – ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ**



## ಮುನ್ನುಡಿ

ಆತ ಹಾಡಿ ಮುಗಿಸಿದಾಗ ಶ್ರೋತೃಗಳ ಕರತಾಡನ ಮುಗಿಲು ಮುಟ್ಟಿತು. ಆತ ರೋಮಾಂಚನಗೊಂಡು ಬೊಂಬೆಯಂತೆ ನಿಂತುಬಿಟ್ಟ. ಒನ್ಸ್‌ಮೋರ್... ಒನ್ಸ್‌ಮೋರ್ ಎಂದು ಕೆಲವರು ಕೂಗತೊಡಗಿದರು. ಆತನಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ನಿರೂಪಕರು ಆತನ ಬೆನ್ನು ತಟ್ಟಿ ಕೈಕುಲುಕಿ ''ಸುಶ್ರಾವ್ಯವಾಗಿ ಹಾಡಿದ್ದೀರಿ, ಧನ್ಯವಾದಗಳು'' ಎಂದು ಕೆಳಗಿಳಿಸಿದರು. ಆತ ಪುಟ್ಟ ಮಗುವಿನಂತೆ ಹೆಜ್ಜೆ ಬದಲಿಸುತ್ತಾ ಬಂದು ಒಂದು ಕಡೆ ಕುಳಿತ.

''ತುಂಬಾ ಚೆನ್ನಾಗಿ ಹಾಡಿದಿರಿ. ನನಗೆ ತುಂಬಾ ಇಷ್ಟವಾಯಿತು'' ಮಧುರ ಕಂಠವೊಂದು ಆತನ ಕಿವಿಯ ಪಕ್ಕ ಉಲಿಯಿತು.

''ಥ್ಯಾಂಕ್ಸ್... ಯಾರು? ಯಾರು ತಾವು...?'' ಆತ ಸಂಕೋಚದ ಮುದ್ದೆಯಾದ.

''ಚಂದ್ರಮುಖೀಂತ, ನಿಮಗೆ ಖಂಡಿತ ಪ್ರಥಮ ಬಹುಮಾನ ಬರುತ್ತೆ.''

ಆತ ಮಾತನಾಡಲಿಲ್ಲ.

''ಎಲ್ಲಿ ಕಲಿತಿರಿ ಹಾಡುವುದನ್ನು...?''

''ತಾಯಿ ಹೊಟ್ಟೆಯಲ್ಲಿ''

''ಅದಲ್ಲ, ನಿಮ್ಮ ಗುರುಗಳು ಯಾರೂಂತ...?''

''ದೇವರು'' ಎಂದು ಹೇಳಿ ಆತ ನಕ್ಕ.

ಅವಳು ಗಲಿಬಿಲಿಗೊಂಡಳು.

ಅವಳು ಮೌನವಾಗಿರುವುದನ್ನು ಕಂಡು ಆತನೇ ಮತ್ತೆ ಹೇಳಿದ

''ಯಾವುದೇ ಗುರುಗಳಿಂದ ನಾನು ಹೇಳಿಸಿಕೊಂಡಿಲ್ಲ. ಚಿಕ್ಕಂದಿನಿಂದಲೇ ಹಾಡು ಎಂದರೆ ನನಗೆ ಇಷ್ಟ. ಹಾಗೆ ನನ್ನಷ್ಟಕ್ಕೇ ಕಲಿತೆ.''

''ಇದೇ ಊರಾ?''

''ಹೌದು, ನಿಮ್ಮೂರು?''

''ಮೈಸೂರು... ನನ್ನ ತಾಯಿಗೆ ಎರಡು ತಿಂಗಳ ಹಿಂದೆ ಇಲ್ಲಿಗೆ ವರ್ಗ ವಾಯಿತು''

''ಏನು ತೊಂದರೆ ನಿಮಗೆ?''

''ಪೋಲಿಯೊ... ಕಾಲಿಗೆ...''

''ಎರಡೂ ಕಾಲಾ?''

''ಹೌದು, ಗಾಲಿ ಕುರ್ಚಿಯೇ ಆಧಾರ. ಅದಿಲ್ಲದೆ ಎಲ್ಲಿಗೂ ಹೋಗುವಂತಿಲ್ಲ...''

''ಎಷ್ಟು ವರ್ಷವಾಯಿತು?''

''ಹತ್ತು ವರ್ಷ ಪ್ರಾಯದವರೆಗೆ ಸರಿಯಾಗಿಯೇ ಇದ್ದೆ. ಆಮೇಲೆ ಜ್ವರ ಬಂದು ಹೀಗಾಯಿತು. ನಿಮ್ಮದು ಹೇಗಾಯಿತು?''

''ಹುಟ್ಟು ಕುರುಡ ನಾನು''

''ನೋಡಿದರೆ ಗೊತ್ತೇ ಆಗೋಲ್ಲ'' ಅವಳ ಧ್ವನಿಯಲ್ಲಿ ನೋವು ತುಂಬಿತ್ತು.

ಆಮೇಲೆ ಅಲ್ಲಿದ್ದ ಎರಡು ಗಂಟೆಗೂ ಹೆಚ್ಚು ಅವರು ಮಾತನಾಡುತ್ತಲೇ ಆತ್ಮೀಯರಾಗಿ ಬಿಟ್ಟಿದ್ದರು.

ಅಂಗವಿಕಲರ ದಿನಾಚರಣೆಯ ಆ ಕಾರ್ಯಕ್ರಮ ಮುಕ್ತಾಯದ ಹಂತ ತಲುಪಿದಾಗ ಅವಳು ತನ್ನ ವಿಳಾಸ ಕೊಡುತ್ತಾ ''ಒಮ್ಮೆ ಮನೆಗೆ ಬನ್ನಿ'' ಎಂದಳು.

''ಬರುತ್ತೇನೆ... ಖಂಡಿತಾ ಬರುತ್ತೇನೆ'' ಎಂದ ಆತ.

ಮತ್ತೆ ವಾರ ಕಳೆಯುವುದರಲ್ಲಿ ಆತ ಅವಳ ಮನೆಯ ಕದ ತಟ್ಟಿದ್ದ. ಬಾಗಿಲು ತೆರೆದುಕೊಂಡಿತು.

''ಹೇಗಿದ್ದೀರಿ ಚಂದ್ರಮುಖಿಯವರೇ?''

''ನಾನೇ ಬಾಗಿಲು ತೆರೆದದ್ದೆಂದು ನಿಮಗೆ ಹೇಗೆ ತಿಳಿಯಿತು?'' ಎನ್ನುತ್ತಾ ಅವಳು ಅವನನ್ನು ಸ್ವಾಗತಿಸಿ ಕುರ್ಚಿ ಕೊಟ್ಟು ಕುಳ್ಳಿರಿಸಿದಳು.

''ಕಣ್ಣಿಲ್ಲದಿದ್ದರೂ ನಾನು ಜನರನ್ನು ಗುರುತಿಸಬಲ್ಲೆ''

''ಅದ್ಹೇಗೆ?'' ಅವಳು ಆಶ್ಚರ್ಯದಿಂದ ಕೇಳಿದಳು.

''ವಾಸನೆಯಿಂದ''

''ಮನುಷ್ಯರಿಗೆ ವಾಸನೆಯಿದೆಯೇ? ಸುಳ್ಳು ಹೇಳುತ್ತಿದ್ದೀರಪ್ಪಾ ನೀವು'' ಅವಳು



ನಕ್ಕಳು.

''ನಿಜ ಹೇಳ್ತಿದ್ದೇನೆ. ಬೇಕಾದರೆ ನೀವೇ ಒಮ್ಮೆ ಪರೀಕ್ಷೆ ಮಾಡಿನೋಡಿ''.

''ಹಾಗಾದರೆ ನನ್ನ ವಾಸನೆ ಯಾವ ತರ ಇದೆ?''

''ಸೊರಗೆ ಹೂವಿನ ಸುವಾಸನೆ'' ಅವಳು ಮತ್ತೆ ನಕ್ಕಳು.

''ಮನೆಯಲ್ಲಿ ಯಾರೆಲ್ಲ ಇದ್ದೀರಿ?''

''ಅಮ್ಮ ಇದ್ದಾರೆ, ಟೀಚರ್. ಶಾಲೆಗೆ ಹೋಗಿದ್ದಾರೆ''.

''ತಂದೆ?''

''ತೀರಿಕೊಂಡು ಹತ್ತು ವರ್ಷ ಆಯಿತು''

''ನಿಮಗೆ ಒಡಹುಟ್ಟಿದವರು ಯಾರೂ ಇಲ್ಲವೇ?''

''ಇಲ್ಲ, ಒಬ್ಬರಾದ್ರೂ ಇದ್ದಿದ್ದರೆ... ಎಂದು ತುಂಬಾ ಆಸೆ ಆಗ್ತಾ ಇದೆ. ಏನು ಮಾಡುವುದು ಹೇಳಿ.. ಮನೆಯಲ್ಲಿಯೇ ಇದ್ದು ಬೇಸರ ಬಂದುಬಿಟ್ಟಿದೆ. ಓದುವ ಹವ್ಯಾಸವೊಂದಲ್ಲದಿದ್ದರೆ ನನಗೆಂದೋ ಹುಚ್ಚು ಹಿಡಿಯುತ್ತಿತ್ತು''

''ನೀವು ತುಂಬಾ ಓದುತ್ತೀರಾ?''

''ಹೂಂ... ಓದುತ್ತೇನೆ. ಓದಿ ಬೇಸರವಾದಾಗ ಬರೆಯುತ್ತೇನೆ''

''ಏನು ಬರೆಯುತ್ತೀರಿ?''

''ಕಥೆ... ಕವನ''

''ಹೌದಾ! ಯಾವುದಾದರೂ ಪತ್ರಿಕೆಯಲ್ಲಿ ಪ್ರಕಟವಾಗಿದೆಯಾ?''

''ಇಲ್ಲ, ಪತ್ರಿಕೆಗಳಿಗೆ ಕಳಿಸಿಲ್ಲ''

''ಬರೆದದ್ದನ್ನೆಲ್ಲ ಒಮ್ಮೆ ನನಗೆ ಕೊಡಿ... ನಾನು ನೋಡಿ ಕೊಡುತ್ತೇನೆ''

ಅವಳೊಮ್ಮೆ ಜೋರಾಗಿ ನಕ್ಕಳು.

''ಯಾಕೆ ನಗುತ್ತಿದ್ದೀರಿ?''

''ನೀವು ಹೇಗೆ ಓದುತ್ತೀರಿ?''

''ಅಮ್ಮ ಓದಿ ಹೇಳುತ್ತಾರೆ... ನಾನು ಸುಮ್ಮನೆ ಕುಳಿತು ಕೇಳುತ್ತೇನೆ''

''ನಿಮ್ಮ ಮನೆಯಲ್ಲಿ ಯಾರೆಲ್ಲ ಇದ್ದೀರಿ?''

''ಅಮ್ಮ, ಅಪ್ಪ, ತಂಗಿ, ನಾನು. ಎಲ್ಲರೂ ನನ್ನನ್ನು ತುಂಬಾ ಪ್ರೀತಿಸುತ್ತಾರೆ. ಪುಟ್ಟ ಮಗುವಿನಂತೆ ನೋಡಿಕೊಳ್ಳುತ್ತಾರೆ.''

''ಏನು ತಗೊಳ್ತೀರಿ... ಕಾಫಿ, ಟೀ...?''

''ಏನೂ ಬೇಡ - ಈಗ ಕುಡಿದು ಬಂದೆ''

''ಆದರೂ ಸ್ವಲ್ಪ... ಮೊದಲ ಸಲ ಬಂದಿದ್ದೀರಿ?''

''ಸರಿ... ಕಾಫಿ ನೀವೇ ಮಾಡ್ತೀರಾ? ನಾನು ಫಸ್ಟ್‌ಕ್ಲಾಸಾಗಿ ಕಾಫಿ ಮಾಡುತ್ತೇನೆ''.

''ಏನೋ ಅಪ್ಪಾ... ವಿಚಿತ್ರವಾಗಿ ಮಾತನಾಡುತ್ತೀರಿ'' ಎಂದು ನಗುತ್ತಾ ಅವಳು ಗಾಲಿಕುರ್ಚಿಯನ್ನು ಅಡುಗೆ ಮನೆಯತ್ತ ತಿರುಗಿಸಿದಳು. ಆತ ತಳ್ಳುತ್ತಾ ನಡೆದ. ಇಬ್ಬರೂ ಸೇರಿ ಕಾಫಿ ಬೆರೆಸಿದರು.

ಅವಳು ಬಿಸ್ಕಿತ್ತು ತೆಗೆದು ಅವನ ಕೈಗಿತ್ತಳು.

''ನಮ್ಮ ಮನೆ ಅಕ್ಕ - ಪಕ್ಕ ಇರುತ್ತಿದ್ದರೆ ತುಂಬಾ ಚೆನ್ನಾಗಿತ್ತು ಅಲ್ಲವಾ?''

''ಯಾಕೆ?'' ಆತ ಕಾಫಿ ಹೀರುತ್ತಾ ಕೇಳಿದ.

''ದಿನಾ ಹೀಗೇ ಮಾತನಾಡುತ್ತಾ ದಿನ ಕಳೆಯಬಹುದಿತ್ತು''

''ಹೂಂ... ನನಗೂ ಹಾಗೇ ಅನಿಸುತ್ತೆ''

ಹೀಗೆ ಪುಟ್ಟ ಮಕ್ಕಳಂತೆ ಅದೆಷ್ಟೋ ಹೊತ್ತು ಮಾತನಾಡುತ್ತಾ ಕುಳಿತವರಿಗೆ ಸಮಯ ಸರಿದದ್ದೇ ತಿಳಿಯಲಿಲ್ಲ. ''ನಾನಿನ್ನು ಹೊರಡುತ್ತೇನೆ.... ತಡವಾದರೆ ಅಮ್ಮ ಭಯಪಡ್ತಾರೆ...'' ಆತ ಎದ್ದು ನಿಂತ.

''ಇನ್ಯಾವಾಗ ಬರ್ತೀರಿ?''

''ಬರ್ತೇನೆ''

''ಯಾವಾಗ ಬರ್ತೀರಿ ಹೇಳಿ''

''ಯಾವಾಗ ಬರ್ಬೇಕು... ನೀವೇ ಹೇಳಿ...''

''ನನಗಂತೂ ನೀವು ಹೀಗೇ ದಿನಾ ಬಂದರೆ ಸಂತೋಷ''

''ಬರ್ಲಿಕ್ಕೆ ನನಗೂ ಇಷ್ಟ. ಆದರೆ ಹಾಗೆ ಬಂದರೆ ನಿಮ್ತಾಯಿ ಏನೂ ಅನ್ನೋಲ್ವಾ...?''

''ಯಾಕೆ?''

''ನಾನೊಬ್ಬ ಗಂಡು. ನೀವು ಹೀಗೆ ಒಂಟಿಯಾಗಿರುವಾಗ ದಿನಾ ಬರುವುದು?''

ಅವಳ ಮುಸಿನಗು ಅವನಿಗೆ ಕೇಳಿಸಿತು.

''ನನ್ನ ತಾಯಿ ಅಂತಹವರಲ್ಲ. ಬಹಳ ಒಳ್ಳೆಯವರು. ನನ್ನನ್ನು ತುಂಬಾ ಪ್ರೀತಿಸ್ತಾರೆ. ಮಗುವಿನಂತೆ ನೋಡಿಕೊಳ್ತಾರೆ... ಅವರು ನನ್ನನ್ನು 'ಮಗು' ಎಂದೇ ಕರೆಯುವುದು. ನಾನಿನ್ನೂ ಅವರಿಗೆ ಪುಟ್ಟ ಮಗುವಂತೆ''.

''ಸರಿ, ಎರಡು ದಿನ ಬಿಟ್ಟು ಬರುತ್ತೇನೆ... ನಿಮ್ಮ ಕಥೆ, ಕವನಗಳನ್ನು ಕೊಡಿ. ಒಮ್ಮೆ ನೋಡಿ ತರುತ್ತೇನೆ''. ಅವಳು ತಾನು ಬರೆದದ್ದನ್ನು ತಂದು ಅವನ ಕೈಗಿತ್ತಳು. ಅವನು ಹೊರಟಾಗ ಅವಳು ಬಾಗಿಲವರೆಗೂ ಬಂದಳು. ''ಮೆಲ್ಲ... ನಿಧಾನವಾಗಿ ಹೋಗಿ... ಜಾಗ್ರತೆಯಾಗಿ ಹೋಗಿ...'' ಅವಳು ಪುಟ್ಟ ಮಗುವಿಗೆ ಹೇಳುವಂತೆ



ಹೇಳಿದಳು. ಆ ಧ್ವನಿಯಲ್ಲಿ ಆತಂಕವಿತ್ತು.

ಆತ ತಿರುಗಿ ನಗುತ್ತಾ ಹೇಳಿದ ''ನಾನು ಒಂಟಿಯಾಗಿ ವಿದೇಶಕ್ಕೂ ಹೋಗಿ ಬರಬಲ್ಲೆ... ಹೆದರಬೇಡಿ'' ಎಂದು ಕೈ ಬೀಸುತ್ತಾ ನಡೆದ. ಅವಳು ಅವನು ಕಣ್ಮರೆಯಾಗುವವರೆಗೂ ನೋಡುತ್ತಲೇ ಇದ್ದಳು.

ಎರಡು ದಿನ ಕಳೆದು ಆತ ಮತ್ತೆ ಬಂದಿದ್ದ.

''ನಿಮ್ಮ ನಿರೀಕ್ಷೆಯಲ್ಲಿ ಎರಡು ದಿನ ಎರಡು ವರ್ಷವಾದಂತಾಯಿತು''

''ಯಾಕೆ ಚಂದ್ರಮುಖಿಯವರೇ, ಇಂದು ನಿಮ್ಮ ಮಾತು, ಧ್ವನಿಯಲ್ಲಿ ಏನೋ ನೋವು, ದುಃಖ ತುಂಬಿರುವಂತಿದೆ?''

''ಇಲ್ಲ... ಏನೂ ಇಲ್ಲ''

''ಸುಳ್ಳು, ಏನೋ ಇದೆ... ನನ್ನಿಂದ ಮುಚ್ಚಿಡ್ತಾ ಇದ್ದೀರಾ? ನಾನು ಕುರುಡನಾಗಿರಬಹುದು... ನನಗೆಲ್ಲ ತಿಳಿಯುತ್ತೆ... ಹೇಳಿ ಏನು ವಿಷಯ...? ನಾನು ಬರುವುದಕ್ಕೆ ನಿಮ್ಮಮ್ಮ ಏನಾದ್ರೂ ಅಂದರಾ?''

''ಇಲ್ಲಾ''

''ಮತ್ತೇನು ಹೇಳಿ... ಹೇಳದಿದ್ದರೆ ಈಗಲೇ ನಾನು ಹೊರಟುಹೋಗುತ್ತೇನೆ''

ಮತ್ತೆ ಕ್ಷಣಕಾಲ ಅಲ್ಲಿ ಮೌನ ಆವರಿಸಿತು. ಆ ಘೋರ ಮೌನದಲ್ಲಿ ಅವಳು ಅಳುವ ಸದ್ದು ಅಲೆ ಅಲೆಯಾಗಿ ಬಂದು ಅವನ ಕಿವಿ ಸೇರಿತು.

''ಅಯ್ಯೋ... ಅಳುತ್ತಿದ್ದೀರಾ? ಚಂದ್ರಮುಖಿಯವರೇ, ಅಳುತ್ತಿದ್ದೀರಾ? ಯಾಕೆ ಅಳುತ್ತಿದ್ದೀರಿ? ಏನಾಯಿತು? ಅಳಬೇಡಿ... ದಯವಿಟ್ಟು ಅಳಬೇಡಿ... ಏನು ನಡೆಯಿತು ಹೇಳಿ'' ಆತ ಗಾಬರಿಗೊಂಡು ತನ್ನ ಕುರ್ಚಿಯನ್ನು ಅವಳ ಕುರ್ಚಿಯ ಬಳಿ ಸರಿಸಿ ಸಮಾಧಾನಪಡಿಸತೊಡಗಿದ. ಅವಳು ಕಣ್ಣೊರೆಸುತ್ತಾ ''ನಾನು ಬದುಕಿರಬಾರದು... ನನಗೆ ಅಮ್ಮನ ಕಣ್ಣೀರು ನೋಡಲು ಸಾಧ್ಯವಾಗ್ತಾ ಇಲ್ಲ...'' ಎಂದಳು.

''ಏನಾಯಿತು... ಏನು ವಿಷಯಾಂತ ಹೇಳಿ''

''ನಿನ್ನೆ ನನ್ನ ಚಿಕ್ಕಮ್ಮ ಬಂದಿದ್ರು. ಅಮ್ಮ ಚಿಕ್ಕಮ್ಮನ ಹತ್ರ ಹೇಳ್ತಾ ಇದ್ರು 'ಅವರು ಸತ್ತ ಮೇಲೆ' ನನ್ನನ್ನು ನೋಡಿಕೊಳ್ಳುವವರು ಯಾರೂ ಇಲ್ಲವಂತೆ. ನಾನು ಅನಾಥಳಾಗುತ್ತೇನಂತೆ. ನನ್ನ ಸ್ಥಿತಿಯನ್ನು ನೆನೆದೇ ಅವರಿಗೆ ದುಃಖವಾಗುತ್ತದಂತೆ. ನನಗಿಂತ ಒಂದು ಗಂಟೆಯ ಆಯುಷ್ಯವಾದರೂ ಅವರಿಗೆ ಜಾಸ್ತಿ ಕೊಡಬೇಕೂಂತ ಅವರು ದಿನಾ ದೇವರಲ್ಲಿ ಬೇಡಿಕೊಳ್ಳುತ್ತಿದ್ದಾರಂತೆ...'' ಹೀಗೆ ಅಮ್ಮ ಹೇಳಿ ಹೇಳಿ ಅಳುತ್ತಿದ್ದುದನ್ನು ನಾನು ಕೇಳಿಸಿಕೊಂಡೆ. ಹೆತ್ತಮ್ಮನನ್ನೇ ದುಃಖದ ಕಡಲಲ್ಲಿ

ಮುಳುಗಿಸುವ ನಾನು ಯಾಕೆ ಬದುಕಿರಬೇಕು ಹೇಳಿ... ಯಾರ ಸುಖಕ್ಕಾಗಿ ಬದುಕಬೇಕು?'' ಅವಳು ಮತ್ತೆ ಅಳುತ್ತಾ ಕಣ್ಣೊರಸಿಕೊಂಡಳು.

ಮತ್ತೆ ಆ ಮನೆ ತುಂಬಾ ಮೌನ ತುಂಬಿತು.

''ಹೆತ್ತ ಕರುಳಲ್ವಾ... ಏನೆಲ್ಲಾ ಯೋಚಿಸುತ್ತೆ.. ಅದಕ್ಕೆ ಬೇಜಾರು ಮಾಡಿಕೊಂಡರಾಗುತ್ತಾ? ಚಂದ್ರಮುಖಿಯವರೇ... ನಿಮ್ಗೆ ನನ್ನ ತಾಯಿ ಬಗ್ಗೆ ಹೇಳ್ತೇನೆ.. ಅವರು ಎಷ್ಟೊಂದು ನೋವು ಅನುಭವಿಸುತ್ತಿದ್ದಾರೆ ಗೊತ್ತಾ...? ಅವರಿಗೆ ಏನೆಲ್ಲಾ ಆಸೆಗಳು.. ಏನೆಲ್ಲಾ ಕನಸುಗಳು... ಪ್ರೀತಿಯ ಸಾಗರದಂತಿರುವ ಅವರ ಅತಿ ದೊಡ್ಡ ಆಸೆ ಏನು ಗೊತ್ತಾ ನಿಮಗೆ...? ಹೇಳಿದರೆ ನೀವು ನಗುತ್ತೀರಿ...''

''ನಗೋಲ್ಲ ಹೇಳಿ''

''ನನಗೆ ಇಪ್ಪತ್ತೆಂಟು ವರ್ಷ ಆಯಿತಂತೆ. ಮದುವೆಯ ಪ್ರಾಯ ಕಳೆಯುತ್ತಾ ಬಂತಂತೆ. ನನಗೊಂದು ಮದುವೆ ಮಾಡಬೇಕಂತೆ... ಅವರು ಸತ್ತರೆ ಮತ್ತೆ ನನ್ನನ್ನು ನೋಡಿಕೊಳ್ಳುವವರು ಯಾರೂ ಇಲ್ಲವಂತೆ. ಅದಕ್ಕಾಗಿ ಅವರು ಎಷ್ಟು ಕಡೆ ಹೆಣ್ಣು ಹುಡುಕಿದರು ಗೊತ್ತಾ? ಈ ಕುರುಡನಿಗೆ ಯಾರು ಹೆಣ್ಣು ಕೊಡುತ್ತಾರೆ ಹೇಳಿ... ಅವರಿಗೆ ಅಷ್ಟೂ ಗೊತ್ತಾಗೋದಿಲ್ಲ... ಪಾಪ ದಿನಾ ನೊಂದುಕೊಳ್ತಾರೆ... ಮೊನ್ನೆ ಏನಾಯಿತು ಗೊತ್ತಾ...? ಯಾವುದೋ ಒಂದು ಅನಾಥಾಶ್ರಮದಲ್ಲಿ ಒಂದು ಹುಡುಗಿ ಇದ್ದಾಳೇಂತ ತಿಳಿದು ಅಲ್ಲಿಗೆ ಓಡಿದರು. ನಿನ್ನನ್ನು ಮಗಳಂತೆ ನೋಡಿಕೊಳ್ಳುತ್ತೇನೆ. ನನಗೆ ಅಷ್ಟು ಆಸ್ತಿ ಇದೆ. ಇಷ್ಟು ಒಡವೆ ಇದೆ. ಬ್ಯಾಂಕಿನಲ್ಲಿ ಅವನ ಹೆಸರಿನಲ್ಲಿ ಅದೆಷ್ಟೋ ದುಡ್ಡಿದೆ.. ಹಾಗೆ ಹೀಗೆ ಎಂದು ಅವಳನ್ನು ಒಪ್ಪಿಸಿಬಿಟ್ಟರಂತೆ... ಅಮ್ಮನಿಗೆ ಖುಷಿಯೋ ಖುಷಿ. ಅವರು ತಂದೆ, ತಂಗಿಯ ಹತ್ರ ಹೇಳುವುದನ್ನೆಲ್ಲಾ ನಾನು ಕೇಳಿಸಿಕೊಂಡೆ. ಅವರು ಎಷ್ಟೊಂದು ಸಂಭ್ರಮಿಸಿದರು ಗೊತ್ತಾ... ಆದರೆ ಮರುದಿನ ಆ ಹುಡುಗಿ ಹೇಳಿದ ಳಂತೆ... 'ಕಣ್ಣೇ ಇಲ್ಲದ ಮೇಲೆ ಎಷ್ಟು ಸಂಪತ್ತಿದ್ದರೂ ಏನು ಪ್ರಯೋಜನ. ಜೀವನ ಪೂರ್ತಿ ಕುರುಡನ ಜೊತೆ ಏಗಲು ನನ್ನಿಂದ ಸಾಧ್ಯವಿಲ್ಲಪ್ಪಾ' ಎಂದು. ಕುರುಡನಾದರೂ ನನ್ನ ಕಿವಿ ಬಹಳ ಚುರುಕು. ಅಪ್ಪನ ಜೊತೆ ಅಮ್ಮ ಗುಟ್ಟಿನಲ್ಲಿ ಹೇಳಿ ಹೇಳಿ ಅಳುತ್ತಿದ್ದುದನ್ನು ನಾನು ಕೇಳಿಸಿಕೊಂಡೆ. ಅಂದು ರಾತ್ರಿ ಇಡೀ ನನಗೆ ನಿದ್ದೆ ಬರಲಿಲ್ಲ. ಮಧ್ಯರಾತ್ರಿಯಾಗಿರಬಹುದು. ಅಮ್ಮ ನನಗೆ ನಿದ್ದೆ ಬಂದಿದೆ ಎಂದು ಭಾವಿಸಿರಬೇಕು. ಅವರು ಬಂದು ನನ್ನ ಪಕ್ಕ ಕುಳಿತರು. ಮೈಯೆಲ್ಲ ತಡವಿದರು. ತಲೆ ಸವರಿದರು. ಬಗ್ಗಿ ಬಗ್ಗಿ ನನ್ನ ಗಲ್ಲಕ್ಕೆ, ಹಣೆಗೆ ಮುತ್ತಿಕ್ಕಿದರು. ಅವರ ಕಣ್ಣೀರು ನನ್ನ ಮುಖವನ್ನು ತೊಯ್ದುದು ಅವರಿಗೆ ತಿಳಿಯಲೇ ಇಲ್ಲ... ನನ್ನಮ್ಮ ಅಳುತ್ತಿದ್ದರು. ಚಂದ್ರಮುಖಿ ಯವರೇ ನನ್ನಮ್ಮ ಅಳುತ್ತಿದ್ದರು.. ಈಗಲೂ ಅಳುತ್ತಾರೆ... ದಿನಾ ಅಳುತ್ತಾರೆ. ಹೆತ್ತ



ಕರುಳೇ ಹಾಗೆ... ಅದರ ಆಸೆ ನೆರವೇರದಿದ್ದರೆ ಅದು ಅಳುತ್ತೆ.. ಅಳುವುದಲ್ಲದೆ ಅದಕ್ಕೆ ಬೇರೇನು ಮಾಡಲಿಕ್ಕಾಗುತ್ತೆ ಹೇಳಿ... ಅದೆಲ್ಲ ಬಿಡಿ... ಅದಕ್ಕೆಲ್ಲ ಬೇಜಾರು ಮಾಡಿಕೊಳ್ಳಬಾರದು''

''ಚಂದ್ರಮುಖಿಯವರೇ, ನಿಮ್ಮ ಕಥೆ, ಕವನಗಳನ್ನೆಲ್ಲ ಓದಿಸಿ ಕೇಳಿಸಿಕೊಂಡೆ'' ಎನ್ನುತ್ತಾ ಆತ ತನ್ನ ಕೈಚೀಲದಿಂದ ಹಸ್ತಪ್ರತಿಗಳನ್ನು ತೆಗೆದು ಅವಳ ಕೈಗಿತ್ತ.

ಅವಳು ಉತ್ಸಾಹದ ಬುಗ್ಗೆಯಂತಾಗಿ ಕೇಳಿದಳು ''ಹೇಗಿವೆ?''

''ಚೆನ್ನಾಗಿವೆ... ತುಂಬಾ ಚೆನ್ನಾಗಿವೆ. ಆದರೆ ಬರಹಗಳ ತುಂಬಾ ನೋವುಗಳೇ ತುಂಬಿಕೊಂಡಿವೆ.''

''ನನಗಿರುವ ಅನುಭವ ಅದೊಂದೇ ಅಲ್ಲವಾ''

''ಆದರೂ ಸ್ವಲ್ಪ ಡಿಫರೆಂಟಾಗಿ ಬರೆಯಬೇಕಿತ್ತು ಅನಿಸಿತು. ನಾವೇನೋ ಬರೀ ನೋವನ್ನೇ ಉಂಡಿದ್ದೇವೆ. ಆದರೆ ಓದುಗರು ಹಾಗಿಲ್ವಲ್ಲಾ... ಅವರು ನೋವಿನ ಜೊತೆ ಸುಖ, ಸಂತೋಷ, ಸ್ವಾತಂತ್ರ್ಯ ಎಲ್ಲವನ್ನೂ ಅನುಭವಿಸಿರ್ತಾರಲ್ಲಾ... ಓದಿದವರು 'ಏನಪ್ಪಾ ಇದು ಇವಳ ಗೋಳೂ'ಂತ ಅನ್ನೋ ಹಾಗೆ ಬಾರದಲ್ವಾ''

''ನಾನು ಓದುಗರಿಗಾಗಿ ಬರೆಯುತ್ತಿಲ್ಲ... ಯಾರಲ್ಲೂ ಹೇಳಲಾಗದ ನನ್ನ ಅಂತರಾಳದ ನೋವನ್ನು ಬರೆದಿಟ್ಟಿದ್ದೇನೆ ಅಷ್ಟೇ...''

''ನಿಮ್ಮ ಒಂದು ಕವನಕ್ಕೆ ನಾನು ರಾಗ ಹಾಕಿದ್ದೇನೆ. ನಿನ್ನೆ ಮನೆಯಲ್ಲಿ ಹಾಡಿದೆ. ಅಮ್ಮನಿಗೆ ತುಂಬಾ ಖುಷಿಯಾಯಿತು''

''ಹೌದಾ...? ಒಮ್ಮೆ ಹಾಡ್ತೀರಾ ಪ್ಲೀಸ್... ನನಗೂ ಕೇಳಬೇಕೂಂತ ಆಸೆ...'' ಅವಳು ಅಂಗಲಾಚಿದಳು.

ಆತ ಹಾಡಿದ. ಅವಳ ಕವನಕ್ಕೆ ಭಾವ, ಜೀವ ತುಂಬಿ ಹಾಡಿದ. ಅದು ಮುಗಿದಾಗ ಅವಳ ಕಣ್ಣು ತುಂಬಿಕೊಂಡಿತ್ತು.

''ಹೇಗಿದೆ ಹಾಡು?''

ಅವಳು ಮಾತನಾಡಲಿಲ್ಲ

''ಚೆನ್ನಾಗಿಲ್ವ? ಬಿಡಿ''

''ಇಲ್ಲ... ಚೆನ್ನಾಗಿದೆ... ತುಂಬಾ ಚೆನ್ನಾಗಿ ಹಾಡಿದ್ದೀರಿ... ಇದು ಬರೀ ಹಾಡಲ್ಲ... ನನ್ನ ಜೀವನದ ಪಾಡು... ಈ ಹಾಡು ಕೇಳಿದ ಮೇಲೂ ನನ್ನ ಹೃದಯ ಒಡೆದು ಹೋಗಲಿಲ್ಲವಲ್ಲಾಂತ ಯೋಚಿಸುತ್ತಿದ್ದೇನೆ''

''ಯಾಕೆ ಹೀಗೆಲ್ಲಾ ಯೋಚಿಸುತ್ತೀರಿ ನೀವು? ಬದುಕನ್ನು ಅಷ್ಟೊಂದು ಸೀರಿಯಸ್ಸಾಗಿ ಯಾಕೆ ತಗೊಳ್ತೀರಿ?''

‘‘ಇದೂ ಒಂದು ಬದುಕಾ ಹೇಳಿ... ಇನ್ನೊಬ್ಬರಿಗೆ ಭಾರವಾಗಿ ಬದುಕುವ ಈ ಬದುಕು ಬೇಕಾ? ಜನ ನಡೆಯುವುದನ್ನು, ಓಡಾಡುವುದನ್ನೂ, ಮಕ್ಕಳು ಆಡುವುದನ್ನೂ, ಕುಣಿಯುವುದನ್ನೂ ನೋಡುವಾಗ ನನಗೆಷ್ಟು ಆಸೆಯಾಗುತ್ತೆ ಗೊತ್ತಾ? ದೇವರು ನನಗೆ ಯಾಕೆ ಈ ಶಿಕ್ಷೆ ಕೊಟ್ಟ... ನಾನೇನು ತಪ್ಪು ಮಾಡಿದ್ದೇನೆ? ಜೀವನಪೂರ್ತಿ ಒಂಟಿಯಾಗಿ ಈ ಕುರ್ಚಿಗೇ ಅಂಟಿಕೊಂಡಿರಬೇಕಲ್ಲಾಂತ ಭಯವಾಗ್ತಿದೆ’’.

‘‘ನಿಮಗೆ ಕಾಲಿಲ್ಲ... ನಡೆದಾಡಲು ಆಗ್ತಿಲ್ಲ. ಅಷ್ಟೇ... ಆದರೆ ನೀವು ಎಲ್ಲವನ್ನೂ ಕಾಣುತ್ತೀರಿ. ಜನ ಓಡಾಡುವುದನ್ನೂ, ನಡೆಯುವುದನ್ನೂ, ಮಕ್ಕಳನ್ನೂ, ನಿಮ್ಮ ಅಮ್ಮನನ್ನೂ, ನನ್ನನ್ನೂ ಇಡೀ ಜಗತ್ತನ್ನೇ ನೀವು ನೋಡುತ್ತೀರಿ. ಆದರೆ ನಾನು... ನಾನು ನನ್ನ ಮುಖವನ್ನೇ ನೋಡಿಲ್ಲ. ಚಂದ್ರಮುಖಿಯವರೇ ನಿಮಗೆ ಗೊತ್ತಾ? ಇಡೀ ಲೋಕವೇ ನನಗೆ ಕತ್ತಲೆ.. ಕಣ್ಣು ಕುಕ್ಕುವ ಕತ್ತಲೆ... ಬೆಳಕು ಎಂಬುದು ನನ್ನ ಜೀವಮಾನ ದಲ್ಲೇ ಇಲ್ಲ.. ಕತ್ತಲೆ ಎಂದರೆ ಎಷ್ಟು ಘೋರ... ಎಷ್ಟೊಂದು ಭಯಂಕರ ಎಂಬುದು ನಿಮಗೆ ಗೊತ್ತಿಲ್ಲವೇ? ಕರೆಂಟು ಹೋದಾಗ ಕತ್ತಲೆಗೆ ನೀವೆಷ್ಟು ಹೆದರುತ್ತೀರಿ...! ಒಂದು ಬೆಂಕಿ ಕಡ್ಡಿಗಾಗಿ ನೀವೆಷ್ಟು ತಡಕಾಡುತ್ತೀರಿ...!! ಆದರೆ ನಾನು ನೋಡಿ... ಎಷ್ಟೊಂದು ಖುಷಿಯಾಗಿದ್ದೇನೆ...! ಯಾವುದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಎಷ್ಟೊಂದು ನೆಮ್ಮದಿ ಯಾಗಿದ್ದೇನೆ...!! ಆದರೆ ದೇವರು ನನ್ನನ್ನು ಒಂದರಲ್ಲಿ ವಂಚಿಸಿಬಿಟ್ಟ ಚಂದ್ರಮುಖಿ ಯವರೇ... ಅದೇನು ಗೊತ್ತಾ? ನನ್ನ ಕಣ್ಣಿನ ಜೊತೆ ಈ ಕಿವಿಯನ್ನೂ ಕಿತ್ತುಕೊಂಡು ಬಿಟ್ಟಿದ್ದರೆ ನನ್ನಮ್ಮನ ನೋವು, ಅಳು, ಮಾತು, ಪ್ರೀತಿ ಇದ್ಯಾವುದೂ ನನಗೆ ತಿಳಿಯುತ್ತಿರಲಿಲ್ಲ... ನಾನು ಇನ್ನೂ ಸುಖವಾಗಿರುತ್ತಿದ್ದೆ’’ ಅಷ್ಟು ಹೇಳುವಾಗ ಅವನ ಧ್ವನಿ ಕಂಪಿಸತೊಡಗಿತ್ತು. ಅವನು ತನ್ನ ಕಣ್ಣೀರು ಅವಳಿಗೆ ಕಾಣದಿರಲೆಂದು ಮುಖವನ್ನು ಪಕ್ಕಕ್ಕೆ ತಿರುಗಿಸಿದ.

‘‘ಅಳುತ್ತಿದ್ದೀರಾ? ಅಳಬೇಡಿ... ನೀವು ಗಂಡಸು, ಅಳಬಾರದು... ನನ್ನಂತಹ ವರಿಗೆ ಸಮಾಧಾನ ಹೇಳಬೇಕಾದ ನೀವೇ ಅತ್ತರೆ ಹೇಗೆ...?’’ ಅವನನ್ನು ಸಮಾಧಾನ ಪಡಿಸುತ್ತಾ ಅವಳೂ ಅಳತೊಡಗಿದಳು. ಮೌನ ತುಂಬಿದ ಆ ಮನೆಯಲ್ಲಿ ಈಗ ಅವರ ಅಳುವಿನ ಸದ್ದು ಮಾತ್ರ ಕೇಳುತ್ತಿತ್ತು.

‘‘ನಾನು ಹೋಗುತ್ತೇನೆ... ತುಂಬಾ ಹೊತ್ತಾಯಿತು’’ ಆತ ಕಣ್ಣೀರೊರೆಸುತ್ತಾ ಎದ್ದುನಿಂತ.

ಅವಳು ಮಾತನಾಡಲಿಲ್ಲ.

‘‘ಚಿಂತಿಸಬೇಡಿ, ಎಲ್ಲದಕ್ಕೂ ಒಂದು ಕೊನೆಯಿದೆ.. ಈ ಜೀವನಕ್ಕೂ... ಅಲ್ಲಿಯವರೆಗೂ ಕಾಯೋಣ’’ ಎನ್ನುತ್ತಾ ಆತ ಹೊರಟುಹೋದ.



ದಿನ, ತಿಂಗಳು ಕಳೆಯುತ್ತಿತ್ತು. ಆತ ಅವಳ ಮನೆಗೆ ಬರುತ್ತಲೇ ಇದ್ದ. ಒಬ್ಬರನ್ನೊಬ್ಬರು ಬಿಟ್ಟಿರಲಾರದಂತಹ ಹಂತಕ್ಕೆ ಅವರಿಬ್ಬರೂ ತಲುಪಿಬಿಟ್ಟಿದ್ದರು. ತಮ್ಮ ಭವಿಷ್ಯ, ನೋವುಗಳನ್ನೆಲ್ಲ ನೆನೆದು ಅಳುವುದು, ಎಲ್ಲವನ್ನೂ ಮರೆತು ಸಂತೋಷವನ್ನು ಹಂಚಿಕೊಂಡು ನಗುವುದು ಅವರ ಜೀವನವಾಗಿಬಿಟ್ಟಿತು.

ಅದೊಂದು ದಿನ ಆತ ಎಂದಿನಂತೆ ಬಂದಿದ್ದ. ಬಾಗಿಲು ತೆರೆದವಳು ಅವಳೇ.

‘‘ಏನು ಬಹಳ ಖುಷಿಯಾಗಿದ್ದೀರಿ...’’ ಅವಳು ಕೇಳಿದಳು.

‘‘ಇಲ್ಲಿಗೆ ಬರುವುದು... ನಿಮ್ಮನ್ನು ನೋಡುವುದು ಎಂದರೆ ನನಗೆ ತುಂಬಾ ಖುಷಿ’’

‘‘ತುಂಬಾ ಅಲಂಕಾರ ಮಾಡಿಕೊಂಡಂತಿದೆ’’

‘‘ಈಗೀಗ ಇಲ್ಲಿಗೆ ಬರುವಾಗ ಹಾಗೆ ಮಾಡಿಕೊಳ್ಳಬೇಕು ಅನಿಸುತ್ತೆ.... ಚಂದ್ರಮುಖಿಯವರೇ ನೀವು ಈ ದಿನ ತುಂಬಾ ಸುಂದರವಾಗಿ ಕಾಣುತ್ತಿದ್ದೀರಿ’’

ಅವಳು ನಕ್ಕಳು. ಕಣ್ಣುಮುಚ್ಚಿ ಜೋರಾಗಿ ನಕ್ಕಳು.

‘‘ಯಾಕೆ ನಗುತ್ತಿದ್ದೀರಿ...? ನನಗೆ ಕಾಣಿಸೋಲ್ಲ, ನಾನು ಸುಳ್ಳು ಹೇಳುತ್ತಿದ್ದೇನೇಂತ್ಲಾ?’’

‘‘ಸುಳ್ಳಲ್ಲದೆ ಮತ್ತೇನು?’’ ಅವಳು ನಗುತ್ತಲೇ ಕೇಳಿದಳು.

‘‘ನೀವು ಹೇಗಿದ್ದೀರೀಂತ ನಾನು ಹೇಳ್ತೇನೆ ಕೇಳಿ...ಸುಳ್ಳಾದರೆ ಆಮೇಲೆ ಹೇಳಿ.. ಚಂದ್ರನಂತೆ ಉರುಟಾದ ಮುಖ, ತುಂಬಿದ ಕೆನ್ನೆಗಳು, ಬೊಗಸೆ ಕಣ್ಣುಗಳು, ತೀಡಿದಂತಹ ಹುಬ್ಬು, ಅಗಲವಾದ ಹಣೆ, ನೀಳ ಕೇಶ, ಸುಂದರವಾದ ಮೂಗು, ತೆಳುವಾದ ತುಟಿಗಳು, ಮುತ್ತು ಪೋಣಿಸಿದಂತಹ ಹಲ್ಲುಗಳು, ಶ್ರೀಗಂಧದ ಬಣ್ಣ, ಸುಮಾರು 22ರ ಪ್ರಾಯ’’

ನಾಚಿ ಕೆಂಪಾದ ಅವಳ ಮುಖ ಆ ಕತ್ತಲೆಯಲ್ಲೂ ಅವನ ಕಲ್ಪನೆಗೆ ಕಾಣುತ್ತಿತ್ತು.

‘‘ನಾನು ಹೇಳಿದ್ದು ಸರಿ ತಾನೆ... ಯಾಕೆ ಮೌನವಾಗಿದ್ದೀರಿ?’’

‘‘ಹೋಗಿಪ್ಪಾ.. ಸುಮ್ಮನೆ ಏನೇನೋ ಹೇಳ್ತೀರಿ... ನಂಗೆ ನಾಚಿಕೆಯಾಗುತ್ತೆ..’’ ಅವಳ ಮಾತಿನಲ್ಲಿ ಜೇನಿನ ಸವಿಯಿತ್ತು.

‘‘ಈ ಬಟ್ಟೆಯಲ್ಲಿ ನಾನು ಹೇಗೆ ಕಾಣಿಸುತ್ತೇನೆ..? ಹೊಸತು... ನಿನ್ನೆ ಅಮ್ಮನನ್ನು ಕರೆದುಕೊಂಡು ಹೋಗಿ ಮೂರು ಜೊತೆ ಬಟ್ಟೆ ಖರೀದಿಸಿದೆ’’.

‘‘ಏನು ವಿಶೇಷ?’’

‘‘ವಿಶೇಷ ಏನೂ ಇಲ್ಲ. ಇಲ್ಲಿಗೆ ಬರುವಾಗ ಹಾಕಿಕೊಂಡು ಬರಲು ಬೇಕಲ್ಲಾಂತ’’

''ನೀವು ಇಲ್ಲಿಗೆ ಬರುತ್ತಿರುವುದು ನಿಮ್ಮಮ್ಮನಿಗೆ ಗೊತ್ತಾ?''

''ಹೂಂ.. ನಾನು ನಿಮ್ಮ ಬಗ್ಗೆ ಅಮ್ಮನಿಗೆ ಎಲ್ಲ ಹೇಳಿದ್ದೇನೆ''

''ಏನು ಹೇಳಿದ್ದೀರಿ?''

''ನೀವು ತುಂಬಾ ಒಳ್ಳೆಯವರು, ತುಂಬಾ ಸುಂದರವಾಗಿದ್ದೀರಿ. ತುಂಬಾ ಚೆನ್ನಾಗಿ ಮಾತನಾಡುತ್ತೀರಿ. ನೀವೆಂದರೆ ನನಗೆ ತುಂಬಾ ಇಷ್ಟ.. ನಿಮಗೂ ನನ್ನಲ್ಲಿ ತುಂಬಾ ಆತ್ಮೀಯತೆ''.

''ನಿಮ್ಮಮ್ಮ ಏನೂ ಅನ್ನಲಿಲ್ಲವಾ?''

''ಏನನ್ನಾರೆ? ತನಗೂ ಒಮ್ಮೆ ಅವಳನ್ನು ನೋಡಬೇಕು. ಒಮ್ಮೆ ಹೋಗೋಣ'' ಎಂದರು.

''ನನಗೂ ನಿಮ್ಮ ಮನೆಗೊಮ್ಮೆ ಬರಬೇಕು. ಎಲ್ಲರನ್ನೂ ನೋಡಬೇಕು ಎಂದು ಆಸೆ... ಆದರೆ ಹೇಗೆ ಬರುವುದು ಹೇಳಿ? ನನ್ನ ಜೊತೆ ಈ ಕುರ್ಚಿಯನ್ನೂ ಹೊತ್ತು ಕೊಂಡು ಬರಬೇಕಲ್ಲ''

''ಅದಕ್ಕೇನಂತೆ ಒಮ್ಮೆ ನಾನೇ ಕರೆದುಕೊಂಡು ಹೋಗುತ್ತೇನೆ.. ಚಂದ್ರಮುಖಿ ಯವರೇ ನಾನಿಲ್ಲಿಗೆ ಬರುವುದು ನಿಮ್ಮಮ್ಮನಿಗೆ ಗೊತ್ತಿದೆಯಾ?''

''ಹೂಂ... ನಾನೆಲ್ಲ ಹೇಳಿದ್ದೇನೆ''

''ಯಾರೂಂತ ಹೇಳಿದ್ದೀರಿ...?

''ನನ್ನ ಆತ್ಮೀಯರು. ನನಗೆ ತುಂಬಾ ಬೇಕಾದವರೂಂತ''

''ಅವರು ಏನೆಂದರು?''

''ನಿನ್ನಿಷ್ಟವೇ ನನ್ನಿಷ್ಟ ಮಗು... ನೀನು ಸಂತೋಷವಾಗಿರಬೇಕು. ನನಗೆ ಅಷ್ಟೇ ಸಾಕು. ಒಮ್ಮೆ ರಜಾದಿನದಂದು ಬರ ಹೇಳು. ನನಗೂ ಒಮ್ಮೆ ಅವನನ್ನು ನೋಡಬೇಕು.'' ಇನ್ನೂ ಬಹಳ ವಿಷಯ ಹೇಳಿದರು.. ಅದನ್ನೆಲ್ಲ ನಿಮ್ಮಲ್ಲಿ ಹೇಳೋಕಾಗೊಲ್ಲಪ್ಪಾ... ಅದೆಲ್ಲಾ ಹೆಂಗಸರ ವಿಷಯ'' ಎಂದಳು ನಗುತ್ತಾ.

''ಅಮ್ಮ ಇನ್ನೂ ಒಂದು ವಿಷಯ ಕೇಳಿದರು?''

''ಏನದು?''

''ನೀವು ತಪ್ಪು ತಿಳಿಯುವುದಿಲ್ಲ ಎಂದರೆ ಹೇಳುತ್ತೇನೆ''

''ನಮ್ಮ ನಮ್ಮಲ್ಲಿ ತಪ್ಪು - ಒಪ್ಪಿನ ಪ್ರಶ್ನೆಯೇ ಇಲ್ಲ.. ಏನದು ಹೇಳಿ?''

''ನಿಮ್ಮ ಜಾತಿ ಯಾವುದು?''

ಆತ ಗೊಳ್ಳನೆ ನಕ್ಕ.

''ಯಾಕೆ ನಗುತ್ತೀರಿ...?''



''ನನ್ನ ಜಾತಿ ನಿಮಗೆ ಗೊತ್ತೇ ಇದೆಯಲ್ಲಾ?''

''ಯಾವುದು?''

''ಕುರುಡ ಜಾತಿ''

''ಅದಲ್ಲ, ನಾನು ಕೇಳಿದ್ದು.. ಮತ''

''ಮತ...? ವಿಕಲಾಂಗ ಮತ. ನಿಮ್ಮ ಜಾತಿ ಯಾವುದು?'' ಆತ ನಗುತ್ತಲೇ ಕೇಳಿದ.

''ನನ್ನದು ಕುಂಟಿ ಜಾತಿ''

''ಮತ...?''

''ನಿಮ್ಮದೇ ಮತ''

ಇಬ್ಬರೂ ಜೋರಾಗಿ ನಗಹತ್ತಿದರು.

''ಚಂದ್ರಮುಖಿಯವರೇ ನಾನು ನಿಮಗೊಂದು ಉಡುಗೊರೆ ತಂದಿದ್ದೇನೆ''

''ಏನದು?''

ಆತ ತನ್ನ ಚೀಲದಿಂದ ಒಂದು ಪೊಟ್ಟಣ ಹೊರತೆಗೆದು ''ಅಮ್ಮ ಕೊಡಿಸಿದ್ದು'' ಎಂದು ಅಭಿಮಾನದಿಂದ ಅವಳ ಕೈಗಿತ್ತ.

ಅವಳು ಪೊಟ್ಟಣ ಬಿಡಿಸಿ ನೋಡಿದಳು. ಬಟ್ಟೆ! ಅವಳ ಹೃದಯ ತುಂಬಿ ಬಂತು.

''ಚೆನ್ನಾಗಿದೆಯಾ?''

''ಸುಂದರವಾಗಿದೆ... ತುಂಬಾ ದುಬಾರಿ ಇರಬಹುದು''

''ಅಮ್ಮ ಸುಂದರವಾದದ್ದನ್ನೇ ಆರಿಸುತ್ತಾರೆ''

''ಚಂದ್ರಮುಖಿಯವರೇ ನಿಮ್ಮಲ್ಲಿ ಒಂದು ಮಾತು ಕೇಳಲಾ?''

''ಕೇಳಿ''

''ನೀವು ಬೇಸರ ಮಾಡಬಾರದು''

''ನೀವು ಏನು ಕೇಳಿದರೂ ಬೇಸರ ಮಾಡೋಲ್ಲ''

''ನಿಮ್ತಾಯಿ ನಿಮಗೆ ಮದುವೆ ಮಾಡೋಲ್ವಾ?''

''..............''

''ಯಾಕೆ ಮಾತನಾಡೋಲ್ಲ? ನಾನು ಕೇಳಬಾರದಿತ್ತು ಅಲ್ವಾ?''

'' ...........''

''ತಪ್ಪಾಯಿತು, ಕ್ಷಮಿಸಿ''

''ಇಲ್ಲ.... ನೀವು ತಪ್ಪು ಮಾಡಿಲ್ಲ... ನಿಮ್ಮ ಪ್ರಶ್ನೆಗೆ ಏನು ಉತ್ತರ ಹೇಳಲಿ ಎಂದು ಯೋಚಿಸುತ್ತಿದ್ದೇನೆ... ಅಮ್ಮನಿಗೇನೋ ಮದುವೆ ಮಾಡಬೇಕೂಂತ ಬೆಟ್ಟದಷ್ಟು

ಆಸೆಯಿದೆ. ಆದರೆ ನನ್ನನ್ನು ಯಾರು ಮದುವೆಯಾಗ್ತಾರೆ ಹೇಳಿ?''

''ನಿಮಗೆ ಮದುವೆಯಾಗಬೇಕೂಂತ ಆಸೆ ಇಲ್ವಾ?''

ಅವಳು ಅವನ ಮುಖವನ್ನೇ ದಿಟ್ಟಿಸಿ ನೋಡಿದಳು.

''ಹೇಳಿ ಆಸೆ ಇಲ್ವಾ?''

''ನೀವು ಹೀಗೆಲ್ಲ ಪ್ರಶ್ನೆ ಕೇಳಿದರೆ ನಾನು ಏನೆಂದು ಉತ್ತರಿಸಲಿ?''

''ಆಸೆ ಇದೆಯಾ... ಇಲ್ಲವಾ... ಎರಡರಲ್ಲಿ ಒಂದನ್ನು ಹೇಳಿ... ಅಷ್ಟು ಸಾಕು''

''ಆಸೆಯೇನೋ ಇದೆ... ಆಸೆ ಕಟ್ಕೊಂಡು ಏನು ಮಾಡೋಕಾಗುತ್ತೆ ಹೇಳಿ'' ಅವಳು ಮೆಲುದನಿಯಲ್ಲಿ ಉಲಿದಳು.

''ನನ್ನನ್ನು ಮದುವೆಯಾಗುತ್ತೀರಾ?''

ಅವಳು ಒಮ್ಮೆಲೇ ಬೆಚ್ಚಿದಳು. ''ಏನು ಹೇಳುತ್ತಿದ್ದೀರಾ ನೀವು?''

''ನಾನು ನಿಜವಾಗಿಯೂ ಕೇಳುತ್ತಿದ್ದೇನೆ... ನನ್ನನ್ನು ಮದುವೆಯಾಗುತ್ತೀರಾ?''

''ಮದುವೆಯಾಗಿ ನಾನು ನಿಮಗೆ ಏನು ಸುಖ ಕೊಡಬಲ್ಲೆ ಹೇಳಿ? ನಿಮ್ಮಿಂದ ಸೇವೆ ಮಾಡಿಸಿಕೊಂಡು ನಾನ್ಯಾವ ನರಕಕ್ಕೆ ಹೋಗಲಿ?''

''ಸೇವೆಯ ಮಾತೆಲ್ಲ ಬಿಡಿ... ನಿಮ್ಮ ಒಂದು ಕಣ್ಣು ನನಗೆ ಕೊಡಿ... ನನ್ನ ಕಾಲು ನಿಮಗೆ ಕೊಡುತ್ತೇನೆ.''

''ಏನು! ನಾನು ಕಣ್ಣು ಕೊಟ್ಟರೆ ನಿಮಗೆ ಕಾಣಿಸ್ತದಾ? ಒಂದೇಕೆ ಎರಡೂ ತಗೊಳ್ಳಿ. ನೀವಾದ್ರೂ ಸುಖವಾಗಿ ಬಾಳಿ... ನಾನದಕ್ಕೆ ಸಿದ್ಧವಾಗಿದ್ದೇನೆ... ಹೇಳಿ ನಾನು ಕಣ್ಣು ಕೊಟ್ಟರೆ ನಿಮಗೆ ಕಾಣಿಸ್ತದಾ?'' ಅವಳು ಉದ್ವೇಗಗೊಂಡಿದ್ದಳು.

''ಚಂದ್ರಮುಖಿಯವರೇ, ನಾನು ಹಾಗೆ ಹೇಳಿದ್ದಲ್ಲ. ನೀವು ನನಗೆ ಕಣ್ಣಾಗಿ... ನಾನು ನಿಮಗೆ ಕಾಲಾಗುತ್ತೇನೆ ಎಂದೆ. ಈಗ ಹೇಳಿ ನಿಮ್ಮ ಇಷ್ಟ ಏನೂಂತ?''

ಅವಳು ಉತ್ತರಿಸಲಿಲ್ಲ.

''ಯಾಕೆ ಸಂಕೋಚಾನಾ.. ನಾಚಿಕೇನಾ?''

''ಹೋಗಿಪ್ಪಾ, ಹೆಣ್ಣು ಮಕ್ಕಳು ಹಾಗೆಲ್ಲಾ ಎಲ್ಲವನ್ನೂ ಬಾಯಿ ಬಿಟ್ಟು ಹೇಳೋಲ್ಲ''

''ಹಾಗಾದರೆ ನಿಮ್ಮ ಒಪ್ಪಿಗೇಂತ ಭಾವಿಸುತ್ತೇನೆ...''

''ಹೂಂ...''

''ಚಂದ್ರಮುಖಿಯವರೇ, ನನಗೆ ಈಗ ಎಷ್ಟು ಸಂತೋಷವಾಗ್ತಿದೆಯೆಂದರೆ ಅದನ್ನು ಹೇಳಲು ಶಬ್ದಗಳೇ ಸಿಗುತ್ತಿಲ್ಲ.. ನಾನು ಅದೃಷ್ಟವಂತ... ನನ್ನಷ್ಟು ಅದೃಷ್ಟವಂತ ಈ ಜಗತ್ತಿನಲ್ಲಿ ಯಾರೂ ಇರಲಿಕ್ಕಿಲ್ಲ... ಚಂದ್ರಮುಖಿಯವರೇ ನಾಳೆ



ಭಾನುವಾರ. ನಿಮ್ಮಮ್ಮ ಮನೆಯಲ್ಲಿಯೇ ಇರುತ್ತಾರಲ್ವಾ... ನಾನು ನನ್ನ ಅಮ್ಮನನ್ನು ಇಲ್ಲಿಗೆ ಕಳುಹಿಸುತ್ತೇನೆ... ಮದುವೆ ವಿಷಯ ಮಾತನಾಡಲು.. ಸರೀನಾ?''

''ನನಗೇಕೋ ಭಯವಾಗುತ್ತೆ''

''ಭಯಪಡಬೇಡಿ. ನಾನಿದ್ದೇನೆ. ನಿಮ್ಮನ್ನು ಹೂವಿನಂತೆ - ಮಗುವಿನಂತೆ ನೋಡಿಕೊಳ್ಳುತ್ತೇನೆ. ನಾನು ಹೋಗುತ್ತೇನೆ'' ಎಂದು ಆತ ಸೀಟಿ ಹಾಕುತ್ತಾ ಹೊರಟುಹೋದ.

**ಉದಯವಾಣಿ**

# ಪ್ರೀತಿ

ಸಂಜೆ ಬರಿ ಕೈಯಲ್ಲಿ ಬಂದ ಬಾಪಾನನ್ನು ನೋಡಿ ಉಮ್ಮಾ ಮತ್ತೆ ಬೆಂಕಿಯಾಗಿದ್ದಳು.

''ಏನು ರಾಜಕುಮಾರ, ರಾತ್ರಿ ಸಾರಿಗೆ ಅರೇಬಿಯಾದಿಂದ ಒಂಟೆಯ ಮಾಂಸ ತಂದಿಯಾ? ಊಟಕ್ಕೆ ಬಾಸ್ಮತಿ ಅಕ್ಕಿ ತಂದಿಯಾ?''

ಬಾಪಾ ಮಾತನಾಡದ್ದು ಕಂಡು ಮತ್ತೂ ವ್ಯಂಗ್ಯದಿಂದ ಕೇಳಿದಳು ಉಮ್ಮಾ

''ಚಹಾಕ್ಕೆ ಏನು? ಒಣ ಖರ್ಜೂರ ತಂದಿಯಾ?''

''ಸುಮ್ಮನಿರಬಾರದೇ ಉಮ್ಮಾ... ಬಾಪಾ ಇನ್ನೂ ಒಳಗೆ ಕಾಲಿಟ್ಟಿಲ್ಲ. ಆಗಲೇ ಶುರು ಮಾಡಿಬಿಟ್ಟಿಯಾ?'' ರುಕಿಯಾ ತಡೆಯಲಾರದೆ ಕೇಳಿದಳು.

''ಸುಮ್ಮನಿರದೆ ಇನ್ನೇನು ಮಾಡ್ಲಿಯೇ? ಹೊಟ್ಟೆಗೇನು ಮಣ್ಣು ತುಂಬಿಸ್ತಿಯಾ? ಅಯ್ಯೋ ಈ ಗಂಡನನ್ನು ಕಟ್ಟಿಕೊಂಡು ನಾನು ಸೋತೆನಲ್ಲಾ. ನನ್ನ ಬಾಳು ನಾಯಿ ಪಾಡಾಯಿತಲ್ಲಾ'' ಕಾಲು ನೀಡಿ ಕುಳಿತು ಉಮ್ಮ ಒಂದೇ ಸವನೆ ಗೋಳೋ ಎಂದು ಅಳತೊಡಗಿದಳು.

ಹೆಂಡತಿ ಎಷ್ಟು ಚುಚ್ಚಿ ಅವಮಾನಿಸಿದರೂ ಅಬ್ಬು ಕಾಕಾ ತುಟಿ ತೆರೆಯಲಿಲ್ಲ.

''ಬಾ ಬಾಪಾ ನೀರು ಕಾಯಿಸಿಟ್ಟಿದ್ದೇನೆ. ಸ್ನಾನ ಮಾಡು'' ರುಕಿಯಾ ಕರೆದಾಗ ಅವರು ಸ್ನಾನಕ್ಕೆ ನಡೆದರು.

''ಇಡೀ ಒಂದು ಊರಿನ ಯಜಮಾನಿಯಾಗಬೇಕಿದ್ದವಳು ಇಂದು ಭಿಕಾರಿಯಾಗಿ ಬಿಟ್ಟೆನಲ್ಲಾ, ದೇವರೇ ನನ್ನನ್ನು ಇನ್ನೂ ಇಲ್ಲಿ



ಯಾಕೆ ಉಳಿಸಿದ್ದೀ? ಒಮ್ಮೆ ಕರೆಯಬಾರದೇ, ಸುಖವೇ ಇಲ್ಲದ ಈ ಗಂಡನಿಂದ ನನ್ನನ್ನು ಮೇಲಕ್ಕೆತ್ತಬಾರದೇ?'' ಉಮ್ಮಾನ ಕೂಗು ಬಚ್ಚಲು ಮನೆಯ ಒಳಗೂ ಕೇಳುತ್ತಿತ್ತು.

ಬಾಪಾನ ಬೆನ್ನುಜ್ಜುತ್ತಿದ್ದ ರುಕಿಯಾ ''ಆ ಉಮ್ಮನಿಗೆ ಹುಚ್ಚು, ನೀನು ಬೇಸರ ಮಾಡಬೇಡ ಬಾಪಾ...'' ಎಂದಳು.

ಆಗಲೂ ಬಾಪಾ ಮಾತನಾಡಲಿಲ್ಲ.

ಅದಕ್ಕೇ ಅವಳಿಗೆ ಉಮ್ಮಾನಿಗಿಂತಲೂ ಬಾಪಾನನ್ನು ಕಂಡರೆ ಹೆಚ್ಚು ಇಷ್ಟವಾಗುವುದು. ಉಮ್ಮ ಎಷ್ಟೇ ಗದರಿದರೂ, ಹೀಯಾಳಿಸಿದರೂ, ಹಂಗಿಸಿದರೂ ಬಾಪಾ ಮಾತನಾಡುವುದಿಲ್ಲ. ಬಹುಷಃ ಮಾತನಾಡಿದ್ದರೆ ಉಮ್ಮ ಸುಮ್ಮನಿರುತ್ತಿದ್ದಳೋ ಏನೋ? ಬಂಡಸಾಲೆ ಅಂಗಡಿಯ ಮಾಲಕನಾಗಿ, ಊರಿಗೇ ರಾಜನಂತಿದ್ದ ಬಾಪಾ ಇಂದು ಯಾರಿಗೂ ಬೇಡದವರಾಗಿರುವುದು ಅವಳಿಗೂ ನೋವು ತಂದಿತ್ತು. ಆದರೆ ಏನು ಮಾಡುವುದು. ಸುಖ - ಕಷ್ಟ ಕೊಡುವುದು ದೇವರಲ್ಲವಾ? ಬಂದದ್ದನ್ನು ಸ್ವೀಕರಿಸಬೇಕು. ಅವಳು ತನ್ನಷ್ಟಕ್ಕೇ ಹೇಳಿಕೊಂಡು ಸಮಾಧಾನಪಡುವಳು.

'ಮಗಳೇ, ಆ ವೀಳ್ಯದ ಹರಿವಾಣ ಇಲ್ಲಿ ತಾ' ... ಅಳುವಿನ ಮಧ್ಯೆ ಒಂದು ಬ್ರೇಕ್ ಕೊಟ್ಟು ಮಗಳನ್ನು ಕರೆದಳು ಪಾತುಮ್ಮ.

ದಿನಕ್ಕೆ ಒಂದು ನೂರು ವೀಳ್ಯದೆಲೆ, ಒಂದು ಎಸಳು ಹೊಗೆಸೊಪ್ಪು ಆದರೂ ಬೇಕು ಈ ಉಮ್ಮನಿಗೆ. ಊಟ ಮಾಡುವಾಗ, ಚಾ ಕುಡಿಯುವಾಗ, ನಿದ್ದೆ ಮಾಡುವಾಗ ಬಿಟ್ಟರೆ ಮತ್ತೆಲ್ಲಾ ಸಮಯದಲ್ಲೂ ಉಮ್ಮನ ಬಾಯಲ್ಲಿ ಒಂದುಂಡೆ ವೀಳ್ಯ ಓಡಾಡುತ್ತಾ ಇರಲೇಬೇಕು. ಊಟವನ್ನಾದರೂ ಬಿಟ್ಟಾಳು ಉಮ್ಮಾ, ಈ ವೀಳ್ಯವನ್ನು ಮಾತ್ರ ಬಿಡಲಾರಳು.

ಮಗಳು ತಂದು ಕೊಟ್ಟ ಹರಿವಾಣದಲ್ಲಿ ವೀಳ್ಯದೆಲೆಯೇ ಇಲ್ಲದ್ದು ಕಂಡು ಕೆಂಡವಾದಳು ಪಾತುಮ್ಮ. ಹರಿವಾಣವನ್ನು ಮೂಲೆಗೆಸೆದು

''ಓ ಕೆಟ್ಟ ಜನ್ಮದವಳೇ, ಇದರಲ್ಲಿ ಎಲೆ ಎಲ್ಲಿದೆಯೇ? ಇನ್ನೇನು ರಾತ್ರಿ ನಾನು ಮಣ್ಣು ತಿನ್ನುವುದೇ? ಓ ದೇವರೇ ಮಾಳಿಗೆ ಮನೆಯ ಸಂತಾನ ನಾನು. ತಿನ್ನಲು ಒಂದು ವೀಳ್ಯಕ್ಕೂ ಗತಿ ಇಲ್ಲದಂತಹ ಸ್ಥಿತಿ ಬಂದು ಹೋಯಿತಲ್ಲಾ?''

''ಉಮ್ಮಾ, ಸ್ವಲ್ಪ ಮೆತ್ತಗೆ ಮಾತನಾಡು...''

''ಮೆತ್ತಗೆ ಯಾಕೆ? ಜೋರಾಗಿಯೇ ಮಾತನಾಡುತ್ತೇನೆ, ಗಟ್ಟಿಯಾಗಿಯೇ ಮಾತನಾಡುತ್ತೇನೆ. ನನ್ನನ್ನು ಯಾವನು ತಡೆಯುತ್ತಾನೋ ನೋಡಿಯೇ ಬಿಡುತ್ತೇನೆ''

''ಉಮ್ಮಾ, ದಮ್ಮಯ್ಯ ಉಮ್ಮಾ... ಸ್ವಲ್ಪ ಮೆಲ್ಲ ಮಾತನಾಡಮ್ಮಾ... ಎಲ್ಲಾ

ಕೇಳಿಸಿಕೊಳ್ತಾ ಇದ್ದಾರೆ''

''ಉಮ್ಮಾಂತೆ ಉಮ್ಮಾ... ನನ್ನ ಬಾಯಿ ಮುಚ್ಚಿಸೋಕೆ ಬರ್ತಿಯೇನೇ... ನಿನ್ನ ಬಾಪಾ ಇದ್ದಾನಲ್ಲಾ, ಅವನಲ್ಲಿ ಹೋಗಿ ಕೇಳೇ. ಇಪ್ಪತ್ತು ವರ್ಷ ಆಯಿತು ನಿನಗೆ. ಯಾವಾಗ ಮದುವೆ ಮಾಡ್ತಿಯಾಂತ... ತಿನ್ನೋಕೆ ಒಂದು ಪಾವು ಅಕ್ಕಿ ಇಲ್ಲ ಮನೆಯಲ್ಲಿ, ಒಂದು ಮಂಜೊಟ್ಟಿ ತೂಕ ಚಿನ್ನ ಇಲ್ಲ... ಅವನೆಲ್ಲಿ ಮದುವೆ ಮಾಡ್ತಾನೆ... ಕೆರೆಗೋ ಬಾವಿಗೋ ಬಿದ್ದು ಸಾಯಬೇಕು ನೀನು ಅಷ್ಟೇ...''

ಇದನ್ನೆಲ್ಲ ಕೇಳುತ್ತಿದ್ದ ಬಾಪಾ ಮೊದಲ ಬಾರಿಗೆ

''ಓ ಹರಕು ಬಾಯಿಯವಳೇ ಒಮ್ಮೆ ಸುಮ್ಮನಿರ್ತಿಯಾ...?'' ಎಂದರು.

ಉಮ್ಮ ಗಣ್ಯ ಮಾಡಲಿಲ್ಲ

ಬಾಪಾ ಬಗೆ ಬಗೆಯಾಗಿ ಹೇಳಿ ನೋಡಿದರು, ಕಣ್ಣು ಕೆಂಪು ಮಾಡಿ ಹೇಳಿದರು.

ಆಗ ಉಮ್ಮ ಅವರನ್ನು ಅಣಕಿಸುವಂತೆ ಹೇಳಿದಳು,

''ಏನೋ ಹೆದರಿಸ್ತಿಯಾ...? ನೀನು ಭಂಡಸಾಲೆಯ ಸಾಹುಕಾರನಾಗಿರುವಾಗಲೇ ನಾನು ಹೆದರಲಿಲ್ಲ. ಈಗ ಹೆದರ್ತೇನಾ...?''

ಇದ್ದಕ್ಕಿದ್ದಂತೆ ಬಾಪಾನ ಕೈ ಉಮ್ಮನ ಕೆನ್ನೆಯನ್ನು ಅಪ್ಪಳಿಸಿತು. ಉಮ್ಮ ಕಣ್ಣು ತಿರುಗಿಸುತ್ತಾ ಬಾಯಿ ಅಗಲ ಮಾಡಿ ಕುಸಿದುಬಿದ್ದಳು. ಉಮ್ಮನ ದೇಹದ ಮೇಲೆ ಕುಳಿತ ಬಾಪಾನ ಕೈ ಅವಳ ಕುತ್ತಿಗೆಯನ್ನು ಬಲವಾಗಿ ಅದುಮಿ ಹಿಡಿಯಿತು. ಉಮ್ಮ ಕಣ್ಣು ಬಿಟ್ಟು ನೋಡುತ್ತಿದ್ದಂತೆಯೇ ನಡುಗುತ್ತಿದ್ದ ಬಾಪಾ ಹಲ್ಲುಕಚ್ಚಿ ಮೆಲ್ಲ ಹೇಳಿದರು,

''ನೀನು ಸಾಯಬೇಕು, ಹೆಣ್ಣೇ, ನೀನು ಸಾಯಬೇಕು''

ಬಾಪಾ ಇಷ್ಟೊಂದು ಕೋಪಗೊಂಡದ್ದು ರುಕಿಯಾ ಎಂದೂ ಕಂಡಿರಲಿಲ್ಲ. ಆಕೆಗೆ ಕಾಡಿ ಬೇಡಿ ಬಾಪಾನ ಕೈಯಿಂದ ಉಮ್ಮನನ್ನು ಬಿಡಿಸಬೇಕಾದರೆ ಸಾಕು ಸಾಕಾಗಿತ್ತು. ಅವಳು ಬಿಡಿಸದಿರುತ್ತಿದ್ದರೆ ಉಮ್ಮ ಸತ್ತೇ ಹೋಗುತ್ತಿದ್ದಳು. ಇಷ್ಟೆಲ್ಲಾ ಒಂದು ಕ್ಷಣದಲ್ಲಿ ನಡೆದುಹೋಗಿತ್ತು. ಉಮ್ಮ ಒಂದು ಮೂಲೆಯಲ್ಲಿ ಬಿದ್ದು ನರಳತೊಡಗಿದಳು. ಬಾಪಾ ಅಲ್ಲೇ ಶತಪಥ ತಿರುಗತೊಡಗಿದರು....

ರುಕಿಯಾ ಸ್ತಂಭಿತಳಾಗಿ ನಿಂತಿದ್ದಳು. ಅವಳಿಗೆ ಲೋಕವೇ ಕತ್ತಲಾದಂತೆ ಅನಿಸಿತು. ಅವಳಿಗೆ ಮಾತನಾಡಲು ನಾಲಗೆಯೇ ಬರಲಿಲ್ಲ. ಅವಳು ಮೌನವಾಗಿ ಮರುಗಿದಳು. ''ದೇವರೇ, ಲೋಕದಲ್ಲಿ ಎಲ್ಲಾ ಗಂಡ - ಹೆಂಡತಿ ಹೀಗೇ ದಿನಾ ಜಗಳ ಆಡ್ತಾರಾ...?''

ಮರುದಿನ ಬೆಳಗ್ಗೆ ಅಬ್ಬು ಕಾಕಾ ಹೊರಟುನಿಂತಾಗ ಪಾತುಮ್ಮ ಮಲಗಿದಲ್ಲಿಂದಲೇ ಕೂಗಿ ಹೇಳಿದಳು,



''ಭಂಡಸಾಲೆಯ ಮಹಾರಾಜರೇ, ಏನು ಮುತ್ತು ರತ್ನಗಳ ವ್ಯಾಪಾರಕ್ಕೆ ಹೊರಟದ್ದೋ? ನಾನಿನ್ನೂ ಸತ್ತಿಲ್ಲ. ಸಂಜೆ ಬರುವಾಗ ಹೆಣದ ಬಟ್ಟೆ, ಊದುಬತ್ತಿ, ಕರ್ಪೂರ, ಸೆಂಟು ಎಲ್ಲಾ ತೆಗೆದುಕೊಂಡು ಬಾ. ಇಂದು ನನ್ನನ್ನು ನೀನು ಕೊಲ್ಲುವಿಯಂತೆ...''

ಅಂಗಳಕ್ಕಿಳಿದ ಅಬ್ಬು ಕಾಕಾ ಹಿಂತಿರುಗಿ ನೋಡಿ ಒಮ್ಮೆ 'ಥೂ' ಎಂದು ಉಗುಳಿ ಮುಂದೆ ನಡೆದರು.

ಮಾಳಿಗೆ ಮನೆಯಲ್ಲಿ ಬೆಳ್ಳಿ ಬಟ್ಟಲಲ್ಲೇ ಉಣ್ಣುತ್ತಿದ್ದ ಪಾತುಮ್ಮ ಮನಸ್ಸು ಮಾಡಿದ್ದರೆ ರಾಜಕುಮಾರನನ್ನೇ ವರಿಸಬಹುದಾಗಿತ್ತು. ಆದರೆ ಅವಳು ಇಷ್ಟಪಟ್ಟದ್ದು ತನ್ನ ತಂದೆಯ ಜೊತೆ ಕೆಲಸಕ್ಕಿದ್ದ ಅಬ್ಬು ಕಾಕಾನನ್ನು. ಅಬ್ಬುವಿನ ಸೌಂದರ್ಯ, ಮಾತು, ಮುಗ್ಧತೆ ಅವಳನ್ನು ಪ್ರೇಮದ ಸುಳಿಯಲ್ಲಿ ಸಿಲುಕಿಸಿತ್ತು. ತಂದೆ, ತಾಯಿ ಎಷ್ಟು ಹೇಳಿದರೂ ಪಾತುಮ್ಮಳದ್ದು ಒಂದೇ ಮಾತು ''ನಾನು ಮದುವೆಯಾಗುವುದಾದರೆ ಅಬ್ಬುನನ್ನೇ, ಅದಲ್ಲದಿದ್ದರೆ ನನಗೆ ಮದುವೆಯೇ ಬೇಡ'' ಎಂದು. ಕೊನೆಗೂ ಅವಳ ಹಠವೇ ಗೆದ್ದಿತ್ತು.

''ಏನು ಹಾಜಿ, ಮಂಗನ ಕೈಗೆ ಮಾಣಿಕ್ಯವನ್ನೇ ಕೊಟ್ಟುಬಿಟ್ಟಿರಲ್ಲ'' ಎಂದು ಗೆಳೆಯರು ಛೇಡಿಸಿದಾಗಲೂ ಹಮ್ಮಬ್ಬ ಹಾಜಿ ತಲೆಕೆಡಿಸಿಕೊಳ್ಳಲಿಲ್ಲ. ಯಾವ ಕಾರಣಕ್ಕೂ ತನ್ನ ಮಗಳನ್ನೂ, ಅಳಿಯನನ್ನೂ ಜನ ಆಡಿಕೊಳ್ಳುವಂತಾಗಬಾರದು. ಹುಡುಗ ಒಳ್ಳೆಯವ, ಸ್ವಲ್ಪ ವ್ಯವಸ್ಥೆ ಮಾಡಿಕೊಟ್ಟರೆ ಖಂಡಿತ ಮೇಲೆ ಬಂದಾನು. ಇವರೆಲ್ಲರ ಬಾಯಿ ಮುಚ್ಚಿಸಿಯಾನು. ತನ್ನ ಮಗಳನ್ನು ಚೆನ್ನಾಗಿ ನೋಡಿಕೊಂಡಾನು ಎಂಬ ವಿಶ್ವಾಸ ಅವರಲ್ಲಿತ್ತು.

ಪಕ್ಕದ ಊರಿನಲ್ಲಿ ಹಮ್ಮಬ್ಬ ಹಾಜಿಗೆ ಸ್ವಲ್ಪ ಜಮೀನಿತ್ತು. ಅದರಲ್ಲಿ ಮಗಳಿಗೊಂದು ಮನೆಯನ್ನು ಕಟ್ಟಿಸಿ ಬೇಕಾದ ಗೃಹ ವಸ್ತುಗಳನ್ನು ತುಂಬಿಸಿ, ಝೂಮ್ - ಝೂಮ್ ಎಂದು ಗೃಹಪ್ರವೇಶವನ್ನು ಮಾಡಿಸಿದರು. ಮನೆಯೆದುರು ಒಂದು ಅಂಗಡಿಯನ್ನು ಜೋಡಿಸಿ ಎಲ್ಲ ವ್ಯವಸ್ಥೆ ಮಾಡಿ, ಅಳಿಯನಿಗೆ ಕೈತುಂಬಾ ದುಡ್ಡು ಕೊಟ್ಟು ''ಪ್ರಾಮಾಣಿಕವಾಗಿ ವ್ಯಾಪಾರ ಮಾಡು, ದೇವರು ನಿನ್ನನ್ನು ಕೈಬಿಡೋದಿಲ್ಲ'' ಎಂದು ಹರಸಿ ಹೊರಟುಹೋದರು.

ಇದೆಲ್ಲ ನಡೆದು ಈಗ ಇಪ್ಪತ್ತು ವರ್ಷಗಳೇ ಕಳೆದುಹೋಗಿವೆ. ಮಾವನ ವಿಶ್ವಾಸವನ್ನು ಅಬ್ಬು ಸುಳ್ಳು ಮಾಡಲಿಲ್ಲ. ಅವನ ಪ್ರಾಮಾಣಿಕತೆ, ಸತ್ಯಸಂಧತೆ, ಎಲ್ಲರಿಗೂ ಇಷ್ಟವಾಗಿತ್ತು. ಅವನ ವ್ಯಾಪಾರ ದಿನದಿಂದ ದಿನಕ್ಕೆ ಕುದುರಿತು. ಆತ ಈಗ ಊರಿಗೇ ಸಾಹುಕಾರನಾಗಿದ್ದ. ಮದುವೆಯಿರಲಿ, ಮರಣ ಇರಲಿ, ಪಂಚಾಯತಿ

ಇರಲಿ, ಎಲ್ಲದಕ್ಕೂ ಅವನು ಮುಂದೆ ಬೇಕು. ಮಸೀದಿಯ ಅಧ್ಯಕ್ಷನೂ ಅವನೇ ಊರಿನ ಯಜಮಾನನೂ ಅವನೇ.

ಹಮ್ಮಬ್ಬ ಹಾಜಿಗೆ ಸಮಾಧಾನವಾಗಿತ್ತು. ತನ್ನ ಮಗಳು ಸಂತೋಷ ದಿಂದಿರುವುದನ್ನು ಕಂಡು ಅವರು ಕಣ್ಣು ಮುಚ್ಚಿದ್ದರು.

ಅಬ್ಬು ಕಾಕಾ ಹೆಂಡತಿಯ ಮಾತಿಗೆ ಎಂದೂ ಎದುರಾಡಿದವನಲ್ಲ. ಪ್ರೀತಿಯ ಹೊರತು ಅವನಲ್ಲಿ ಬೇರೇನೂ ಇರಲಿಲ್ಲ. ಅವಳು 'ಹೂ' ತಾ ಎಂದರೆ ಹೂವಿನ ಬಳ್ಳಿಯನ್ನೇ ಕಿತ್ತು ತರುತ್ತಿದ್ದ. 'ಹಣ್ಣು' ತಾ ಎಂದರೆ ಹಣ್ಣಿನ ಬುಟ್ಟಿಯನ್ನೇ ಹೊತ್ತು ತರುತ್ತಿದ್ದ. ಎಷ್ಟೆಂದರೂ ಸಾಹುಕಾರರ ಮಗಳಲ್ಲವೇ! ಮಾಳಿಗೆ ಮನೆಯಲ್ಲಿ ತಿಂದುಂಡು ಬೆಳೆದವಳು. ತನ್ನನ್ನು ಕೈಹಿಡಿದು ಮೇಲೆತ್ತಿದವಳು. ಅವಳಿಗಿಲ್ಲಿ ಏನೂ ಕಡಿಮೆಯಾಗ ಬಾರದು. ಅವಳಿಲ್ಲಿ ಸುಖವಾಗಿರಬೇಕೆಂಬುದೇ ಅವನ ಆಸೆ.

ಪಾತುಮ್ಮ ಒಮ್ಮೊಮ್ಮೆ ಗಂಡನನ್ನು ಗದರಿಸುವಳು. ಒಮ್ಮೊಮ್ಮೆ ಪ್ರೀತಿಯಿಂದ ಮಾತನಾಡಿಸುವಳು. ಎಷ್ಟೆಂದರೂ ತಾನು ಪ್ರೀತಿಸಿ ಮದುವೆಯಾದ ಹುಡುಗ ಇವನು. ಇವನು ತನ್ನವನು. ತನ್ನವನು ಮಾತ್ರ. ತಾನು ಹೇಳಿದಂತೆ ಕೇಳಿಯಾನು ಎಂಬ ಗತ್ತು ಅವಳಿಗೆ. ಹರಿವಾಣ ತುಂಬಾ ವೀಳ್ಯ ಇಟ್ಟುಕೊಂಡು, ಬಾಯಿ ತುಂಬಾ ತಾಂಬೂಲ ತುಂಬಿಕೊಂಡು ತನ್ನ ಕೆಂಪು ತುಟಿಯನ್ನು ಆಗಾಗ ತನ್ನ ಬಲಭುಜಕ್ಕೆ ಒರೆಸಿಕೊಳ್ಳುತ್ತಾ, ಉಯ್ಯಾಲೆಯಲ್ಲಿ ಕಾಲು ನೀಟಿ ಕುಳಿತು ತನ್ನ ಕಾರುಬಾರು ನಡೆಸುವಳು.

ಮೂರು ವರ್ಷದ ಹಿಂದೆ ಅಬ್ಬು ಕಾಕಾರ ಅಂಗಡಿಯ ಎದುರು ಇರುವ ಖಾಲಿ ಜಮೀನಿನಲ್ಲಿ ಸಿಮೆಂಟು - ಕಬ್ಬಿಣದ ದೊಡ್ಡ ಕಟ್ಟಡವೊಂದು ತಲೆ ಎತ್ತತೊಡಗಿತ್ತು. ಹಂಚು - ಇಟ್ಟಿಗೆಯ ಮನೆಗಳಿಂದಲೇ ತುಂಬಿರುವ ಆ ಊರು ತಾರಸಿ ಕಟ್ಟಡ ಕಂಡುದು ಇದೇ ಮೊದಲು. ಎಲ್ಲರೂ ದಿನಾ ಬಂದು ನೋಡುವವರೇ, ಜನ ನೋಡುತ್ತಿದ್ದಂತೆಯೇ ಕಟ್ಟಡ ಪೂರ್ಣಗೊಂಡಿತ್ತು.

ರುಕಿಯಾ ದಿನಾ ಆ ಕಟ್ಟಡವನ್ನು ನೋಡುವಳು. ಏನು ಕಟ್ಟುತ್ತಿದ್ದಾರೆ ಇಲ್ಲಿ? ಯಾರು ಕಟ್ಟುತ್ತಿದ್ದಾರೆ? ಯಾಕೆ ಇದು? ಅವಳಿಗೊಂದೂ ಅರ್ಥವಾಗುತ್ತಿರಲಿಲ್ಲ.

ಅವಳು ಒಂದು ದಿನ ಬಾಪಾನಲ್ಲಿ ಕೇಳಿದಳು

''ಬಾಪಾ, ಇದನ್ನು ಯಾರು ಕಟ್ಟುತ್ತಿದ್ದಾರೆ?''

''ಯಾರೋ ಕೇರಳದವರಂತೆ''

''ಯಾಕೆ ಕಟ್ಟುತ್ತಿದ್ದಾರೆ?''

''ಗೊತ್ತಿಲ್ಲಮ್ಮಾ, ದೊಡ್ಡ ಬಂಡಸಾಲೆಯಂತೆ ಕಾಣುತ್ತಿದೆ'' ಎಂದರು.

ಇದಾಗಿ ತಿಂಗಳೊಳಗೆ ಅದರಲ್ಲಿ ದೊಡ್ಡದೊಂದು ಅಂಗಡಿ ತೆರೆದುಕೊಂಡಿತ್ತು.



ಆ ಅಂಗಡಿ ಎಷ್ಟೊಂದು ಆಕರ್ಷಕವಾಗಿತ್ತೆಂದರೆ, ಸುತ್ತಲೂ ಗಾಜಿನ ಬಾಗಿಲಿನಿಂದ ಕೂಡಿದ್ದು ಅದನ್ನು ನೋಡುವುದೇ ಒಂದು ಸಂಭ್ರಮ. ದೂರದೂರಿನಿಂದಲೂ ಜನ ಅದನ್ನು ನೋಡಲೆಂದೇ ಬರುತ್ತಿದ್ದರು. ಆ ಅಂಗಡಿಯಲ್ಲಿ ಸಿಗದ ವಸ್ತುಗಳಿಲ್ಲ. ಅಕ್ಕಿಯಿಂದ ಹಿಡಿದು ಸಾಬೂನಿನವರೆಗೆ, ಒಣ ಮೀನಿನಿಂದ ಹಿಡಿದು ಖರ್ಜೂರದವರೆಗೆ ಎಲ್ಲವೂ ಸಿಗುತ್ತಿತ್ತು.

ಆ ಅಂಗಡಿ ತೆರೆದದ್ದೇ ತಡ ಅಬ್ಬು ಕಾಕಾರ ವ್ಯಾಪಾರ ಕುಸಿಯತೊಡಗಿತ್ತು.

ಬೆಳಕಿಗೆ ಧಾವಿಸುವ ಹಾತೆಗಳಂತೆ ಜನ ಆ ಅಂಗಡಿಗೆ ಮುತ್ತುತ್ತಿದ್ದರು. ಅಬ್ಬು ಕಾಕಾರಿಗೆ ಚಿಂತೆಗಿಟ್ಟುಕೊಂಡಿತು. ಗಿರಾಕಿಗಳನ್ನು ಆಕರ್ಷಿಸಲು ಅವರು ತನ್ನೆಲ್ಲಾ ಜಾಣ್ಮೆಯನ್ನು ಪ್ರದರ್ಶಿಸಿದರು. ಊಹೂಂ... ಏನೂ ಪ್ರಯೋಜನವಾಗಲಿಲ್ಲ. ಎರಡು ವರ್ಷಗಳಲ್ಲೇ ಅಬ್ಬು ಕಾಕಾ ಸಂಪೂರ್ಣ ದಿವಾಳಿಯಾಗಿ ಅಂಗಡಿ ಮುಚ್ಚಿಬಿಟ್ಟಿದ್ದರು.

ರುಕಿಯಾ ದಿನಾ ತಮ್ಮ ಮನೆಯ ಕಿಟಕಿಯಲ್ಲಿ ನಿಂತು ನೋಡುವಳು. ಬೆಳಗ್ಗೆ ಆ ಅಂಗಡಿಯ ಮುಂದೆ ಪುಟ್ಟ ಕಾರೊಂದು ಬಂದು ನಿಲ್ಲುತ್ತಿತ್ತು. ಅದರಿಂದ ನಾಲ್ಕು ಜನ ಇಳಿಯುತ್ತಿದ್ದರು. ಒಬ್ಬ ಕುಡಿ ಮೀಸೆಯ ಯುವಕ. ಅಂಗಡಿಯ ಮಾಲಕನಿರಬೇಕು. ಸುಂದರವಾಗಿದ್ದ. ಬೇರೆಲ್ಲಾ ಕೆಲಸದವರಿರಬೇಕು. ಉಕ್ಕಿನ ಬಾಗಿಲು ಮೇಲೇರುತ್ತಿದ್ದಂತೆಯೇ ಅಂಗಡಿಗೆ ಜನ ಮುತ್ತುತ್ತಿದ್ದರು. ತನ್ನ ಬಾಪಾನ ಅಂಗಡಿಗೇ ಬರುತ್ತಿದ್ದ ಜನ. ತನ್ನ ಬಾಪಾನನ್ನು ಸಾಹುಕಾರ ಎಂದು ಕರೆಯುತ್ತಿದ್ದ ಜನ. ತನ್ನ ಬಾಪಾನಲ್ಲಿ ಕಾಡಿ ಬೇಡಿ ಸಾಲ ಕೊಂಡುಹೋಗುತ್ತಿದ್ದ ಜನ. ತನ್ನ ಬಾಪಾನನ್ನು ದಿವಾಳಿ ಎಬ್ಬಿಸಿದ ಆ ಜನ, ಆ ಅಂಗಡಿಯ ಮೇಲೆ ಅವಳಿಗೆ ಈಗ ರೋಷವುಕ್ಕುತ್ತಿತ್ತು.

''ಓ ಕೆಟ್ಟ ಜನ್ಮದವಳೇ ಎಲ್ಲಿ ಹಾಳಾಗಿ ಹೋದೆ? ಬಾರೇ ಇಲ್ಲಿ''

ರುಕಿಯಾ ಬೆಚ್ಚಿದಳು.

''ಉಮ್ಮಾ, ಸ್ವಲ್ಪ ಮೆಲ್ಲ ಕೂಗಬಾರದೇ?''

ಹರಿವಾಣವನ್ನು ನೆಲಕ್ಕೆ ಜಪ್ಪಿ ''ಒಂದು ವೀಳ್ಯವೂ ಇಲ್ಲವಲ್ಲೇ, ಹೋಗೇ, ಎಲ್ಲಿಂದಲಾದರೂ ಒಂದು ನಾಲ್ಕು ವೀಳ್ಯದೆಲೆ ತೆಗೆದುಕೊಂಡು ಬಾರೇ. ಇಲ್ಲದಿದ್ದರೆ ನಾನು ಸತ್ತೇ ಹೋದೇನು, ನನಗೆ ಹುಚ್ಚೇ ಹಿಡಿದೀತು. ದೇವರೇ ಈ ಮನುಷ್ಯ ನನ್ನ ಕೈಗೆ ಗೆರಟೆ ಕೊಟ್ಟು ಬಿಟ್ಟನಲ್ಲಾ, ಮಾಳಿಗೆ ಮನೆಯ ಮಗಳಿಗೆ ಗೆರಟೆ ಕೊಟ್ಟು ಬಿಟ್ಟನಲ್ಲಾ! '' ಎಂದು ಮತ್ತೆ ಅಳುವುದಕ್ಕೆ ಶುರುಮಾಡಿದಳು ಉಮ್ಮಾ.

ರುಕಿಯಾಳಿಗೆ ಚಿಂತೆಗಿಟ್ಟುಕೊಂಡಿತು. ಎಲ್ಲಿಂದ ತರಲಿ ಎಲೆ? ಎಲೆ ತಂದು ಕೊಟ್ಟರೆ ಸ್ವಲ್ಪ ಹೊತ್ತಾದರೂ ಈ ಉಮ್ಮನ ಬಾಯಿ ಬಂದಾದೀತು. ಏನು ಮಾಡುವುದು? ಅವಳು ಕಿಟಕಿಯಿಂದ ಅಂಗಡಿಯಾಚೆ ನೋಡಿದಳು. ಅಂಗಡಿಯಲ್ಲಿ ಯಾರೂ ಇಲ್ಲ.

ಆ ಕುಡಿ ಮೀಸೆಯ ಯುವಕ ಒಬ್ಬನೇ ಕುಳಿತಿದ್ದಾನೆ. ಒಂದು ಹತ್ತು ಹೆಜ್ಜೆ ನಡೆದರೆ ಆ ಅಂಗಡಿಯಲ್ಲಿ ಎಲೆ ಸಿಕ್ಕೀತು. ಆದರೆ ಹೇಗೆ ಹೋಗುವುದು? ಮೈನೆರೆತ ಮೇಲೆ ಅವಳು ಮನೆಯಿಂದ ಹೊರಗೆ ಕಾಲಿಟ್ಟವಳಲ್ಲ. ಪರ ಪುರುಷರ ಜೊತೆ ಮಾತನಾಡಿದವಳೂ ಅಲ್ಲ...

''ತಂದಿಯೇನೇ...?''

ಉಮ್ಮಾ ಅಳು ನಿಲ್ಲಿಸಿ ಮತ್ತೆ ಕಿರುಚಿದಳು.

ರುಕಿಯಾ ಶಿರವಸ್ತ್ರವನ್ನು ತಲೆ ತುಂಬಾ ಹೊದ್ದುಕೊಂಡು ಬಾಗಿಲಿಗೆ ಬಂದು ಒಮ್ಮೆ ಎಡ - ಬಲ ನೋಡಿದಳು. ಯಾರೂ ಕಾಣುತ್ತಿಲ್ಲ. ನಡುಗುವ ಕಾಲುಗಳನ್ನು ಅಂಗಳಕ್ಕಿಟ್ಟು ಕೆಸರಿನಲ್ಲಿ ನಡೆಯುವವಳಂತೆ ನಡೆದು ಅಂಗಡಿಯ ಮುಂದೆ ನಿಂತಳು.

''ಏನೂ...?'' ಆ ಕುಡಿ ಮೀಸೆಯ ಯುವಕ ಪ್ರಶ್ನಿಸಿದ.

ರುಕಿಯಾಳ ಬಾಯಿಯಿಂದ ಮಾತೇ ಹೊರಡಲಿಲ್ಲ.

''ಏನು ಬೇಕಾಗಿತ್ತು...?''

ಅವಳು ತಲೆಯೆತ್ತಿದಳು. ಅವನ ಕಣ್ಣುಗಳು ಅವಳನ್ನೇ ನೋಡುತ್ತಿದ್ದವು. ರುಕಿಯಾ ಪೂರಾ ಬೆವತುಹೋದಳು.

''ಎಲೆ...., ವೀಳ್ಯದೆಲೆ ಬೇಕಾಗಿತ್ತು'' ಅವಳು ಕಾಸು ಕೊಟ್ಟಳು. ಮತ್ತೆ ಮೆಲ್ಲ ಅಡಿಗಣ್ಣಲ್ಲಿ ಅವನನ್ನು ನೋಡಿದಳು.

ಅವನು ಅವಳನ್ನೇ ನೋಡುತ್ತಾ ಎಲೆ ಕಟ್ಟುತ್ತಿದ್ದ.

ಕುಡಿ ಮೀಸೆ, ಹೊಳೆಯುವ ಕಣ್ಣುಗಳು, ಬೆಳ್ಳಗಿನ ಶರೀರ, ಅಂದವಾದ ಅಂಗಿ, ಪ್ಯಾಂಟು...

''ಎದುರು ಮನೆಯಲ್ಲವೇ...?''

ರುಕಿಯಾ ''ಹೌದು'' ಎಂಬಂತೆ ತಲೆಯಾಡಿಸಿದಳು.

''ಹೆಸರೇನು ಕೇಳಬಹುದೇ?''

ರುಕಿಯಾಳ ಮೈ ಒಮ್ಮೆಲೇ ಬಿಸಿಯಾಯಿತು. ಅವನು ಬೇಕೆಂದೇ ನಿಧಾನಿಸುತ್ತಿದ್ದಾನೆ ಎಂದೆನಿಸಿತವಳಿಗೆ.

''ಇಷ್ಟವಿಲ್ಲದಿದ್ದರೆ ಹೇಳುವುದು ಬೇಡ''

ಅವನು ಎಲೆಯನ್ನು ಕೈಯಲ್ಲಿರಿಸಿದ್ದೇ ತಡ, ಓಡಿ ಬಂದು ಬಾಗಿಲು ಮುಚ್ಚಿಕೊಂಡವಳು ಮತ್ತೆ ಬಾಗಿಲನ್ನು ಸ್ವಲ್ಪ ತೆರೆದು ಅಂಗಡಿಯತ್ತ ನೋಡಿದಳು. ಅವನು ಅವಳನ್ನೇ ನೋಡಿ ನಕ್ಕ.

ಅಂದು ಸಂಜೆಯೂ ಬಾಪ ಬರಿಗೈಯಲ್ಲೇ ಬಂದಿದ್ದರು. ಮನೆಯೊಳಗೆ



ಬಂದವರೇ ದೊಪ್ಪೆಂದು ಕುರ್ಚಿಯಲ್ಲಿ ಕುಸಿದು 'ರುಕಿಯಾ' ಎಂದು ಕರೆದರು.

''ಮಗಳೇ, ಇಂದೂ ಏನೂ ಸಂಪಾದನೆ ಆಗಲಿಲ್ಲ. ನಾನು ಸೋತು ಹೋದೆ ಮಗಳೇ... ಹೀಗಾದರೆ ಊಟಕ್ಕೇನು ಮಾಡುವುದು? ನಿನ್ನ ಮದುವೆ ಹೇಗೆ ಮಾಡುವುದು?''

ಅಡುಗೆ ಮನೆಯಲ್ಲಿ ಪಾತ್ರೆ ಕುಕ್ಕುವ ಶಬ್ದ.

''ದೇವರೇ, ಮಾಳಿಗೆ ಮನೆಯ ಸಂತಾನಕ್ಕೆ ಗಂಜಿಗೂ ಗತಿಯಿಲ್ಲದಂತಾಯ್ತೇ. ಈ ಗಂಡಸನ್ನು ಕಟ್ಟಿಕೊಂಡು ನಾನು ಸತ್ತೆನೇ. ರಾಜಕುಮಾರಿಯಂತೆ ಇರಬೇಕಾದವಳು ಭಿಕಾರಿಯಾಗಿ ಬಿಟ್ಟೆನಲ್ಲ!'' ಅಮ್ಮನ ಅಳು ಜೋರಾಗತೊಡಗಿತು.

ಅಬ್ಬು ಕಾಕಾ ತಟ್ಟನೆ ಎದ್ದು ಬಿರುಗಾಳಿಯಂತೆ ತನ್ನ ಕೋಣೆಗೆ ನಡೆದವರು ಹೊದಿಕೆ ಹೊದ್ದು ಮರದ ಕೊರಡಿನಂತೆ ಬಿದ್ದುಕೊಂಡರು.

''ಅಪ್ಪಾ... ಮಧ್ಯಾಹ್ನದ ಅನ್ನ ಇದೆ, ಸ್ವಲ್ಪ ಊಟ ಮಾಡಿ...''

''ಬೇಡ ಮಗಳೇ... ನೀನು ಉಣ್ಣು''

''ಸ್ವಲ್ಪ ಊಟ ಮಾಡಿ ಬಾಪಾ...''

''ಸುಮ್ಮನೆ ತೊಂದರೆ ಕೊಡಬೇಡ ಹೋಗು...'' ಧ್ವನಿಯಲ್ಲಿ ಕೋಪವಿತ್ತು.

ಅಂದು ರಾತ್ರಿ ಯಾರೂ ಊಟ ಮಾಡಲಿಲ್ಲ. ಉಮ್ಮ ಮಧ್ಯರಾತ್ರಿಯವರೆಗೂ ಅಳುತ್ತಲೇ ಇದ್ದಳು.

ಬೆಳಗ್ಗೆ ಬೇಗನೆ ಎದ್ದು ಅಬ್ಬು ಕಾಕಾ ಹೊರಟುಹೋಗಿದ್ದರು.

ರುಕಿಯಾಳ ಕೈಯಲ್ಲಿ ಸ್ವಲ್ಪ ಕಾಸಿತ್ತು. ಕಿಟಕಿಯ ಬದಿಯಲ್ಲಿ ನಿಂತು ಅಂಗಡಿ ಯಲ್ಲಿ ಜನ ಕಡಿಮೆಯಾಗುತ್ತಲೇ ಬಾಗಿಳೆಲೆದು ಅಂಗಡಿಯತ್ತ ಹೆಜ್ಜೆ ಇಟ್ಟಳು.

ರುಕಿಯಾ ಹೇಳಿದ ವಸ್ತುಗಳನ್ನು ಒಂದೊಂದಾಗಿ ಕಟ್ಟುತ್ತಾ ಆ ಯುವಕ ಕೇಳಿದ

''ರುಕಿಯಾ ಅಲ್ಲವಾ ಹೆಸರು?''

ಇವನಿಗೆ ಹೇಗೆ ಗೊತ್ತಾಯಿತು? ಅವಳು ಅವನ ಮುಖ ನೋಡಿದಳು.

ಅವನು 'ನನಗೆ ಗೊತ್ತು' ಎಂಬಂತೆ ನಕ್ಕ.

''ನನ್ನ ಹೆಸರು ರಫೀಕ್''

ಅವಳು ಮಾತನಾಡಲಿಲ್ಲ.

''ನೀನು ತುಂಬಾ ಸುಂದರವಾಗಿದ್ದೀಯಾ...''

ಅವಳು ಒಮ್ಮೆ ಬೆಚ್ಚಿ, ಆಚೆ - ಈಚೆ ನೋಡಿದಳು. ಯಾರೂ ಕೇಳಿಸಿಕೊಂಡಿಲ್ಲ ಎಂದು ಖಾತ್ರಿಪಡಿಸಿಕೊಂಡವಳು ಅಲ್ಲೇ ಇದ್ದ ಕಂಬ ಆಧರಿಸಿ ನಿಂತು 'ಬೇಗ ಕೊಡಿ' ಎಂದಳು.

ಅವಳು ಹೊರಟುನಿಂತಾಗ ಅವನು ಮತ್ತೆ ಹೇಳಿದ ''ನೀನು ನನಗೆ ತುಂಬಾ ಇಷ್ಟವಾಗಿದ್ದೀಯಾ...''

ಅವಳಿಗೆ ಆ ರಾತ್ರಿ ತುಂಬಾ ಸುಂದರವೆನಿಸಿತ್ತು.

ಅವಳ ಹೃದಯವು ಯಾವುದೋ ಸುಖದ ಒಂದು ಕಾವಿನೊಂದಿಗೆ ತುಡಿಯ ತೊಡಗಿತ್ತು. ಇಡೀ ಜಗತ್ತು ಒಂದು ಹೊಸ ಬೆಳಕಿನಲ್ಲಿ ಮುಳುಗಿ ಮಿಂದಂತೆ ಅವಳು ನರಳಿದಳು.

ಬೆಳಗ್ಗೆದ್ದು ಮತ್ತೆ ಕಿಟಕಿಯ ಬಳಿ ನಿಂತು ಅಂಗಡಿಯತ್ತ ನೋಡಿದಳು. ಅವನು ಅವಳನ್ನೇ ನೋಡಿ ನಗುತ್ತಿದ್ದ. ''ನೀನು ನನಗೆ ತುಂಬಾ ಇಷ್ಟ'',ಅವನ ಮಾತು ಅವಳಲ್ಲಿ ಮತ್ತೆ ಮಾರ್ದನಿಸಿತು.

''ಏನಿದರ ಅರ್ಥ...? ಯಾಕೆ ಅವನು ಹಾಗೆ ಹೇಳಿದ...?''

ಹೀಗೇ ಕೆಲವು ದಿನಗಳು ಉರುಳಿದವು.

ರುಕಿಯಾಳಿಗೆ ಆಮೇಲೆ ಅಂಗಡಿಗೆ ಹೋಗುವ ಸಂದರ್ಭ ಒದಗಿ ಬರಲಿಲ್ಲ. ಆದರೂ ಅವಳು ಕಿಟಕಿಯಿಂದ ಅವನನ್ನು ನೋಡುವಳು. ಅವನೂ ನೋಡಿ ನಕ್ಕಾಗ ಬಾಗಿಲು ಮುಚ್ಚುವಳು.

ಅದೊಂದು ದಿನ, ರಾತ್ರಿ ಹೊತ್ತು. ಹೊರಗೆ ಬಾಗಿಲು ತಟ್ಟಿದ ಸದ್ದು. ಯಾರಿರಬಹುದು...? ಎನ್ನುತ್ತಾ ರುಕಿಯಾ ಬಾಗಿಲು ತೆರೆದಳು. ರಫೀಕ್! ರಫೀಕ್ ಜಗಲಿಯಲ್ಲಿ ಕಂಬದಂತೆ ನಿಂತಿದ್ದ!

ರುಕಿಯಾ ಒಮ್ಮೆಲೇ ಬೆಚ್ಚಿದಳು. ಇವನು ಯಾಕೆ ಬಂದ...?

''ಬಾಪಾ ಇದ್ದಾರಾ?''

ರುಕಿಯಾ ಒಂದರೆಗಳಿಗೆ ಕಲ್ಲಾಗಿಬಿಟ್ಟಿದ್ದಳು.

''ಹೆದರಬೇಡಿ, ನಾನು ರಫೀಕ್... ಬಾಪಾ ಇದ್ದಾರಾ...?''

''ಇದ್ದಾರೆ.. ಸ್ನಾನ ಮಾಡುತ್ತಿದ್ದಾರೆ....''

ರುಕಿಯಾಳಿಗೆ ಏನು ಮಾಡಬೇಕೆಂದೇ ತಿಳಿಯಲಿಲ್ಲ. ಒಳಗೆ ಕರೆಯುವುದೋ ಬೇಡವೋ ಎಂದು ಯೋಚಿಸುವಷ್ಟರಲ್ಲೇ ಅಬ್ಬು ಕಾಕಾ ಬಂದುಬಿಟ್ಟಿದ್ದರು.

''ನಾಳೆ ಬೆಳಗ್ಗೆ ನನ್ನ ಬಾಪಾ ಇಲ್ಲಿಗೆ ಬರುತ್ತಾರೆ. ನೀವು ಸ್ವಲ್ಪ ಮಾತನಾಡಲು ಸಿಗಬೇಕಂತೆ. ನೀವು ಬೆಳಗ್ಗೆ ಬೇಗ ಎದ್ದು ಹೋಗಿಬಿಡುತ್ತೀರೋ ಏನೋ ಎಂದು ಹೇಳಲು ಬಂದೆ'' ಎಂದ ರಫೀಕ್.

''ಬನ್ನಿ, ಒಳಗೆ ಬನ್ನಿ''

''ಇಲ್ಲ, ಅಂಗಡಿಯಲ್ಲಿ ಯಾರೂ ಇಲ್ಲ...'' ಎನ್ನುತ್ತಾ ಆತ ಹೊರಟು



ಹೋದ.

ಇವನ ಬಾಪಾ ಯಾಕೆ ಬರುತ್ತಾರೆ? ನನ್ನ ಮದುವೆಯ ವಿಷಯ ಮಾತನಾಡಲು ಇರಬಹುದೇ?

ಅವಳ ಅಭಿಪ್ರಾಯದಲ್ಲಿ ಹಾಗೆ ಯಾರೂ ಬರಲೂ ಸಾಧ್ಯವೇ ಇಲ್ಲ... ಬರುವುದಾದರೂ ಯಾವುದನ್ನು ನೋಡಿ...?

ತಮ್ಮಲ್ಲಿ ಎಂತದ್ದೂ ಇಲ್ಲ. ಸ್ತ್ರೀಧನ ಕೊಡಲಿಕ್ಕೆ ಏನಾದರೂ ಉಂಟಾ? ಅದೂ ಇಲ್ಲ. ಚಿನ್ನಾಭರಣಗಳಾದರೂ ಉಂಟಾ? ಅದೂ ಇಲ್ಲ.

ಹಾಗಾದರೆ ಅಂದು ಆತ ''ನನಗೆ ನೀನು ತುಂಬಾ ಇಷ್ಟ'' ಎಂದು ಹೇಳಿದ್ದು!

ಈ ಮನೆಯ ವಿಷಯ ಯಾರಿಗೆ ಗೊತ್ತಿಲ್ಲ? ಎಲ್ಲರೂ ನಗುವವರೇ, ಹಾಸ್ಯ ಮಾಡುವವರೇ; ಒಂದು ದಿನವೂ ಇಲ್ಲಿ ಸುಖವಿಲ್ಲ. ಯಾವಾಗ ನೋಡಿದರೂ ಉಮ್ಮನ ಗಲಾಟೆ! ಒಂದು ಶಾಪದಂತೆ! ಉಮ್ಮನಿಗೆ ಯಾವಾಗಲೂ ಜಗಳ ಮಾಡಿಯೇ ಅಭ್ಯಾಸ. ರುಕಿಯಾಳಿಗೆ ತನ್ನ ಹೃದಯವನ್ನೇ ದ್ರವಿಸುತ್ತಿರುವ ದೊಡ್ಡ ಚಿಂತೆ ಇದು.

ಮರುದಿನ ಬೆಳಗ್ಗೆ ರಫೀಕ್‌ನ ಬಾಪಾ ಬಂದು ''ನನ್ನ ಮಗ ನಿಮ್ಮ ಮಗಳನ್ನು ಇಷ್ಟಪಟ್ಟಿದ್ದಾನೆ. ಮದುವೆ ಮಾಡಿ ಕೊಡುತ್ತೀರಾ?'' ಎಂದು ಕೇಳಿದಾಗ ಯಾರಿಗೂ ನಂಬಲಾಗಲಿಲ್ಲ.

ಅಂದು ರಾತ್ರಿ ಉಮ್ಮನಿಗೂ ಬಾಪನಿಗೂ ದೊಡ್ಡ ಜಗಳವೇ ನಡೆದು ಹೋಯಿತು.

''ಮಾಳಿಗೆ ಮನೆಯ ರಾಜಕುಮಾರ, ಮಗಳ ಮದುವೆ ಮಾಡಲು ಹೊರಟಿದ್ದೀಯಾ? ಏನು ಕೊಡುತ್ತೀಯಾ ಮಗಳಿಗೆ? ಒಂದು ಕೈಯಲ್ಲಿ ಕೋಲು ಇನ್ನೊಂದು ಕೈಯಲ್ಲಿ ಗೆರಟೆ ಕೊಟ್ಟು ಕಳುಹಿಸುತ್ತೀಯಾ?''

''ಪಾತುಮ್ಮ ಸುಮ್ಮನಿರುತ್ತೀಯಾ?'' ಬಾಪಾ ಕಣ್ಣು ಕೆಂಪು ಮಾಡಿ ಹೇಳಿದರು.

''ಎಷ್ಟು ಚಿನ್ನ ಹಾಕುತ್ತೀಯಾ? ಎಷ್ಟು ಸೀರೆ ತೆಗೆಯುತ್ತೀಯಾ? ಎಷ್ಟು ವರದಕ್ಷಿಣೆ ಕೊಡುತ್ತೀಯಾ''

''ಉಮ್ಮ, ಸುಮ್ಮನಿರು, ಸ್ವಲ್ಪ ಸುಮ್ಮನಿರು...'' ರುಕಿಯಾಳಿಗೆ ದುಃಖ ಉಮ್ಮಳಿಸಿ ಬಂತು.

''ಕೇಳೇ... ಹಾಳು ಜನ್ಮದವಳೇ, ಕೇಳೇ... ನಿನ್ನ ಬಾಪಾ ನಿನಗೆ ಮದುವೆ ಮಾಡುತ್ತಾನಂತೆ. ಹೇಗೆ ಮಾಡುತ್ತಾನೆ ಕೇಳು. ಏನು ಕೊಡುತ್ತಾನಂತೆ? ಮಾಳಿಗೆ ಮನೆ ಮೊಮ್ಮಗಳಿಗೆ ಎಷ್ಟು ಚಿನ್ನ ಹಾಕುತ್ತಾನಂತೆ? ಎಷ್ಟು ಕುರಿ ಕೊಯಿಸ್ತಾನಂತೆ? ಎಷ್ಟು ಸಾವಿರ ಜನರಿಗೆ ಬಿರಿಯಾನಿ ಕೊಡಿಸ್ತಾನಂತೆ?''

''ಮುಚ್ಚೇ ಬಾಯಿ... ಸಿಗಿದುಬಿಟ್ಟೇನು ನಿನ್ನ... ಕೊಂದುಬಿಟ್ಟೇನು'' ಬಾಪಾನ ಸ್ವರದಲ್ಲಿ ಭೀಕರತೆ ಇತ್ತು.

ಉಮ್ಮ ಸುಮ್ಮನಿರಲಿಲ್ಲ. ಮತ್ತೂ ಹೀಯಾಳಿಸಿದಳು. ಅಣಕಿಸುವಂತೆ ನಗಾಡಿದಳು. ''ನೀನೊಂದು ಗಂಡಸಾ? ನೀನೊಬ್ಬ ಮನುಷ್ಯನಾ? ಹೆಂಡತಿ ಮಕ್ಕಳನ್ನು ಸಾಕಲಾರದವನು, ನನಗೆ ಹೊಡೆಯುತ್ತೀಯಾ? ಮಾಳಿಗೆ ಮನೆಯ ಮಗಳಿಗೆ ಹೊಡೀಲಿಕ್ಕೆ ಬರ್ತೀಯಾ? ಬಾ ಹೊಡಿ, ನನ್ನನ್ನು ಕೊಲ್ಲು... ಬಾ ನನ್ನನ್ನು ಕೊಲ್ಲು. ನಿನ್ನೊಡನೆ ಬದುಕುವುದಕ್ಕಿಂತ, ಹೀಗೆ ಮಾನ ಕೆಟ್ಟು ಜೀವಿಸುವುದಕ್ಕಿಂತ ಸಾಯುವುದೇ ಮೇಲು. ಬಾ ಕೊಲ್ಲು ನನ್ನ. ಆಮೇಲೆ ನಿನಗೆ ಎಷ್ಟು ಹೆಣ್ಣು ಬೇಕಾದರೂ ಸಿಗಬಹುದು. ನಿನಗೆ ಬೇರೆ ಮದುವೆ ಮಾಡಿಕೊಳ್ಳಬಹುದು''.

ಎಲ್ಲವನ್ನು ಕೇಳಿಸಿಕೊಂಡು ಸುಮ್ಮನೆ ಕುಳಿತಿದ್ದ ಬಾಪಾ ಒಮ್ಮೆಲೇ ಬಿರುಗಾಳಿಯಂತೆ ಉಮ್ಮನ ಎದುರು ಬಂದು ನಿಂತರು. ಯುದ್ಧಕ್ಕೆ ನಿಂತಂತೆ, ಒಂದು ಸಂಪೂರ್ಣ ಯುದ್ಧಕ್ಕೆ ನಿಂತಂತಿತ್ತು ಆ ನಿಲುವು. ಬಾಪಾನ ಕೈ ಉಮ್ಮನ ಕುತ್ತಿಗೆಯ ಬಳಿ ಹೋಯಿತು. ಇದ್ದಕ್ಕಿದ್ದಂತೆ ಆ ಕೈ ಉಮ್ಮನ ಗಂಟಲನ್ನು ಬಲವಾಗಿ ಅದುಮಿ ಹಿಡಿಯಿತು.

ಉಮ್ಮನ ಬಾಯಿ ನಿಂತಿತು. ಕಣ್ಣು ತಿರುಗಿತು. ದೇಹ ಸಡಿಲವಾಯಿತು.

ಬಾಪಾ ಹಲ್ಲು ಕಚ್ಚುತ್ತಾ ''ನೀನು ಸಾಯಿ... ನೀನು ಸಾಯಿ...'' ಎನ್ನುತ್ತಾ ಉಮ್ಮನ ಕುತ್ತಿಗೆ ಹಿಡಿದು ಒಂದು ಕೈಯಿಂದ ಮೇಲಕ್ಕೆತ್ತಿ ಹಾಗೆಯೇ ಕೆಳಗೆ ಎಸೆದರು.

''ಉಮ್ಮಾ... ನನ್ನ ಉಮ್ಮಾ... ನನ್ನ ಉಮ್ಮಾ ಸತ್ತೇ ಹೋದಳು.... ಅಯ್ಯೋ!'' ರುಕಿಯಾಳಿಗೆ ಎಲ್ಲಿಲ್ಲದ ದುಃಖವೆಲ್ಲ ಒಮ್ಮೆಲೇ ಬಂದಂತಾಯಿತು. ಅವಳು ಜೋರಾಗಿ ಅತ್ತಳು, ಅವಳ ಹೃದಯ ಗೋಳೋ ಎಂದು ಮರುಗಿತು.

ಬಾಪಾ ಹೇಳಿದರು

''ಮಗಳೇ, ಅಳಬೇಡ.''

''ಬಾಪಾ, ನನ್ನ ಉಮ್ಮ ಸತ್ತೇ ಹೋದಳು''

''ಇಲ್ಲ, ಅವಳು ಸತ್ತಿಲ್ಲ, ಅವಳು ಅಷ್ಟು ಬೇಗ ಸಾಯೋದಿಲ್ಲ...''

ರುಕಿಯಾ ಓಡಿಹೋಗಿ ಒಂದು ತಂಬಿಗೆಯಲ್ಲಿ ನೀರು ತಂದಳು. ಉಮ್ಮನ ಮುಖಕ್ಕೆ ಸಿಂಪಡಿಸಿದಳು. ಪಾತುಮ್ಮ ನರಳಿದಳು. ರುಕಿಯಾ ಉಮ್ಮನಿಗೆ ಸ್ವಲ್ಪ ನೀರು ಕುಡಿಸಿ, ಮುಖ ತೊಳೆದಳು. ಉಮ್ಮ ಮತ್ತೆ ನರಳಿದಳು. ಉಮ್ಮನ ಪಕ್ಕದಲ್ಲೇ ಕುಳಿತಿದ್ದ ರುಕಿಯಾಳಿಗೆ ಅದ್ಯಾವಾಗ ನಿದ್ರೆ ಹತ್ತಿತೋ ಅರ್ಧ ರಾತ್ರಿಗೆ ಎಚ್ಚರವಾದಾಗ, ವರಾಂಡದಲ್ಲಿ ಬಾಪಾ ಶತಪಥ ತಿರುಗುತ್ತಿದ್ದರು.



''ಬಾಪಾ, ಇನ್ನೂ ನಿದ್ದೆ ಮಾಡಿಲ್ಲವೇ?''

ಬಾಪಾ ಮಾತನಾಡಲಿಲ್ಲ.

''ಬಾಪಾ...; ಯಾಕೆ ನೀವು ಇನ್ನೂ ಮಲಗಿಲ್ಲ. ಹೋಗಿ ಮಲಗಿ''

''ನನಗೆ ನಿದ್ದೆ ಬರೋಲ್ಲ, ನೀನು ಹೋಗಿ ಮಲಗು'' ಬಾಪಾನ ಸ್ವರದಲ್ಲಿ ಇನ್ನೂ ಕೋಪವಿತ್ತು.

ನರಳುತ್ತಿದ್ದ ಉಮ್ಮಾನ ಬಳಿ ಹೋಗಿ ಮತ್ತೆ ಕುಳಿತಳು ರುಕಿಯಾ.

ಬೆಳಗಾದಾಗ ಪಾತುಮ್ಮಳಿಗೆ ಎಚ್ಚರವಾಯಿತು. ದೇಹವೆಲ್ಲಾ ಬೆಂಕಿಯ ಜ್ವಾಲೆ. ತಲೆ ಎತ್ತಲಾರದಷ್ಟು ಭಾರವಾದಾಗ ಅವಳಿಗೆ ಕಳೆದ ರಾತ್ರಿ ನಡೆದ ಘಟನೆ ನೆನಪಾಗಿ ಮಲಗಿದಲ್ಲಿಂದಲೇ ನರಳುತ್ತಾ ''ಮಗಳೇ'' ಎಂದು ಕರೆದಳು.

ರುಕಿಯಾಳಿಗೆ ಎಚ್ಚರವಾಯಿತು.

''ಏನಮ್ಮಾ...''

''ಒಂದು ಗ್ಲಾಸು ಕಪ್ಪು ಚಾ ಮಾಡಿಕೊಂಡು ಬಾ, ಅದಕ್ಕೆ ಸ್ವಲ್ಪ ಲಿಂಬೆ ಹಿಂಡು''

''ಆಯಿತಮ್ಮಾ...''

ರುಕಿಯಾಳಿಗೆ ತಕ್ಷಣ ಬಾಪಾನ ನೆನಪಾಯಿತು.

ಅತ್ತಿತ್ತ ನೋಡಿದಳು. ಬಾಪಾ ಕಾಣಲಿಲ್ಲ.

''ಬಾಪಾ'' ಎಂದು ಕರೆದಳು.

ಉತ್ತರವಿಲ್ಲ.

ಬಾಪಾನ ಕೋಣೆಗೆ ಹೋಗಿ ನೋಡಿದರೆ, ಬಾಪಾ ಹಾಸಿಗೆಯಲ್ಲಿ ಹಣೆಗೆ ಕೈ ಅಡ್ಡ ಇಟ್ಟು ಅಂಗಾತ ಮಲಗಿದ್ದರು.

''ಯಾವತ್ತೂ ಬೇಗ ಎದ್ದು ಹೋಗುವ ಬಾಪಾ ಇನ್ನೂ ಯಾಕೆ ಮಲಗಿದ್ದಾರೆ?''

ರಾತ್ರಿ ನಿದ್ರೆ ಬರಲಿಲ್ಲವೋ ಏನೋ?'' ಎನ್ನುತ್ತಾ ಬಾಪಾನ ಬಳಿ ಬಂದವಳು

''ಬಾಪಾ'' ಎಂದು ಕರೆದಳು.

ಉತ್ತರವಿಲ್ಲ.

''ಬಾಪಾ...''

ಮತ್ತೆ ಭುಜ ತಟ್ಟಿ ಕರೆದಳು.

ಬಾಪಾ ಎಚ್ಚರವಾಗಲಿಲ್ಲ; ಅವಳಿಗೆ ಭಯವಾಯಿತು.

ಹಣೆಯಲ್ಲಿದ್ದ ಕೈಯನ್ನು ಜಾರಿಸಿ ಎರಡು ಕೈಗಳಿಂದಲೂ ದೇಹವನ್ನು ಅಲುಗಿಸಿ ಮತ್ತೆ ''ಬಾಪಾ..'' ಎಂದು ಕರೆದಳು.

ಬಾಪಾ ಮಾತನಾಡುತ್ತಿಲ್ಲ!

ಅವಳು ನಡುಗಿದಳು. ಬಾಪಾನ ಎದೆಗೆ ಕಿವಿಯಿಟ್ಟು ಆಲಿಸಿದಳು. ಎದೆ ಬಡಿದು ಕೊಳ್ಳುತ್ತಿದೆ. ಮೂಗಿನ ಬಳಿ ಬೆರಳಿಟ್ಟು ನೋಡಿದಳು. ಉಸಿರಾಟವಿದೆ, ಮೈಬಿಸಿಯಿದೆ, ಕಣ್ಣು ಬೊಂಬೆ ತಿರುಗುತ್ತಿದೆ. ಬಾಪಾನಿಗೆ ಏನೂ ಆಗಿಲ್ಲ. ಆದರೆ ಬಾಪಾ ಯಾಕೆ ಮಾತನಾಡುತ್ತಿಲ್ಲ...!

ಅವಳು ಒಂದೇ ಬಾಯಿಗೆ ''ಉಮ್ಮಾ...'' ಎಂದು ಕಿರುಚಿದಳು.

''ಏನೇ...'' ಉಮ್ಮ ಮಲಗಿದ್ದಲ್ಲಿಂದಲೇ ದನಿ ಕೊಟ್ಟಳು.

''ಬಾಪಾ ಮಾತನಾಡುತ್ತಿಲ್ಲ..., ಬಾಪಾ ಏಳುತ್ತಿಲ್ಲ... ಬೇಗ ಬಾ...''

ಪಾತುಮ್ಮ ಒಂದೇ ನೆಗೆತಕ್ಕೆ ಬಂದು ಗಂಡನ ಪಕ್ಕ ಕುಳಿತಳು.

''ಏನೂಂದ್ರೆ... ಏನಾಯಿತು... ಏನಾಯಿತು ನಿಮಗೆ... ಏಳಿ... ಏಳಿ...''

ಗಂಡನ ತಲೆಯನ್ನು ಎತ್ತಿ ತನ್ನ ಮಡಿಲಲ್ಲಿ ಇಟ್ಟುಕೊಂಡಳು ಪಾತುಮ್ಮ.

''ಸ್ವಲ್ಪ ನೀರು ತಾ. ಹೋಗು ಬೇಗ...''

''ಏನೂಂದ್ರೆ... ಏನಾಗುತ್ತಿದೆ ನಿಮಗೆ? ಯಾಕೆ ಹಾಗೆ ನನ್ನನ್ನು ನೋಡುತ್ತಿದ್ದೀರಾ...? ಏನಾಗುತ್ತಿದೆ ಹೇಳಿ...''

ಮುಖಕ್ಕೆ ನೀರು ಚಿಮುಕಿಸಿ ತನ್ನ ಸೆರಗಿನ ತುದಿಯಿಂದ ಒರೆಸುತ್ತಾ ಮತ್ತೆ ಕೇಳಿದಳು ಪಾತುಮ್ಮ...

''ತಲೆ ನೋವಿದೆಯಾ? ಎದೆ ನೋವಾಗ್ತದಾ...? ಏನಾಗ್ತಿದೆ ನಿಮಗೆ? ನನ್ನ ರಾಜನಿಗೆ ಏನಾಗ್ತಿದೆ ಹೇಳಿ.. ಹೇಳೀಂದ್ರೆ...''

ಗಂಡನ ದೇಹದಲ್ಲಿ ಚಲನೆಯೇ ಇಲ್ಲದ್ದು ಕಂಡು ಅವಳಿಗೆ ಭಯ, ದುಃಖ ಉಮ್ಮಳಿಸಿ ಬಂತು. ಅವಳು ಬಗ್ಗಿ ಗಂಡನ ಕೆನ್ನೆಗೆ ತನ್ನ ಕೆನ್ನೆ ತಾಗಿಸಿ ಮತ್ತೆ ಹೇಳಿದಳು

''ನನ್ನದು ತಪ್ಪಾಯಿತು; ನಾನು ತಪ್ಪು ಮಾಡಿದ್ದೇನೆ, ನನ್ನನ್ನು ಕ್ಷಮಿಸಿ. ನಾನು ಇನ್ನು ನಿಮ್ಮೊಡನೆ ಜಗಳ ಮಾಡುವುದಿಲ್ಲ, ಹಂಗಿಸೋದಿಲ್ಲ, ನನಗೆ ನಿಮ್ಮ ಮೇಲೆ ಪ್ರೀತಿ ಇದೆ - ಪ್ರೀತಿ ಇದೆ... ಕ್ಷಮಿಸಿ''

ಅಮ್ಮ ಹುಚ್ಚಿಯಂತೆ ಕಿರುಚುತ್ತಾ ಅತ್ತಾಗ, ರುಕಿಯಾ ಬಾಪಾನ ಮೇಲೆ ಬಿದ್ದು ಅಳತೊಡಗಿದಳು.

ರಫೀಕ್‌ಗೆ ಸುದ್ದಿ ತಲುಪಿತು. ಆತ ಅಬ್ಬು ಕಾಕಾರನ್ನು ಆಸ್ಪತ್ರೆಗೆ ಸಾಗಿಸಿದ. ಮೂರು ದಿನ ಆಸ್ಪತ್ರೆಯಲ್ಲಿದ್ದ ಅಬು ಕಾಕಾ ಸ್ವಲ್ಪ ಚೇತರಿಸಿಕೊಂಡರು. ಆದರೂ ಮಾತನಾಡುತ್ತಿರಲಿಲ್ಲ. ಮೆದುಳಿಗೆ ತೊಂದೆಯಾದುದರಿಂದ ಗುಣವಾಗಲು ಹಲವು ದಿನಗಳು ಬೇಕಾಗಬಹುದೆಂದು ಡಾಕ್ಟರರು ತಿಳಿಸಿದರು.



ದಿನಗಳುರುಳುತ್ತಿದ್ದವು.

ಪಾತುಮ್ಮ ಈಗ ಗಂಡನ ಪಕ್ಕದಲ್ಲೇ ಕುಳಿತಿರುತ್ತಿದ್ದಳು. ಅವಳಿಗೀಗ ಊಟ, ತಿಂಡಿ ಯಾವುದರ ನೆನಪೂ ಇಲ್ಲ. ಗಂಡ ಮಲಗಿದ ಮೇಲೆ ಒಂದು ವೀಳ್ಯವನ್ನೂ ಅವಳು ಬಾಯಿಗಿಟ್ಟವಳಲ್ಲ. ಸದಾ ಗಂಡನ ಚಾಕರಿ, ಅವರಿಗೆ ಗಂಜಿ ಕುಡಿಸುವುದು, ಮೂತ್ರ ತೆಗೆಯುವುದು, ಪಾಯಿಖಾನೆ ತೆಗೆಯುವುದು, ದೇಹ ಒರೆಸುವುದು...

ದಿನಕ್ಕೆ ಹತ್ತು ಸಲವಾದರೂ ಗಂಡನ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಅವಳು ಹೇಳುವಳು...

''ನೋಡಿ, ನನ್ನದು ತಪ್ಪಾಯಿತು... ನಾನು ತೌಬಾ ಮಾಡಿದ್ದೇನೆ. ನಾನು ಇನ್ನು ನಿಮ್ಮೊಡನೆ ಜಗಳ ಮಾಡೋದಿಲ್ಲ... ನಿಮ್ಮನ್ನು ಹಂಗಿಸೋದಿಲ್ಲ... ಪಿರಿಪಿರಿ ಮಾಡೋದಿಲ್ಲ... ನೀವು ಬೇಗ ಗುಣವಾಗಬೇಕು... ನೀವು ನನಗೆ ಬೇಕು... ನನ್ನ ಅಬ್ಬು ನನಗೆ ಬೇಕು... ಸುಖವೋ ಕಷ್ಟವೋ ನಾನು ನಿಮ್ಮೊಡನಿರುತ್ತೇನೆ.. ನಿಮ್ಮ ಜೊತೆ ಕೂಡಿ ಬಾಳುತ್ತೇನೆ... ನೀವು ಹೇಳಿದಂತೆ ಕೇಳುತ್ತೇನೆ... ನನ್ನನ್ನು ನಂಬಿ... ಇದು ನಮ್ಮ ಮಗಳಾಣೆ ಸತ್ಯ... ಮುತ್ತು ನೆಬಿಯಾಣೆ ಸತ್ಯ.. ನಾನಿನ್ನು ನಿಮ್ಮ ಜೊತೆ ಜಗಳ ಆಡೋದಿಲ್ಲ...

ಹೀಗೆ ಹೇಳುತ್ತಾ ಪಾತುಮ್ಮ ಅಳುವಳು. ಪಶ್ಚಾತ್ತಾಪದಿಂದ ನರಳುವಳು. ಇದನ್ನು ಮರೆಯಲ್ಲೇ ನಿಂತು ನೋಡುತ್ತಾ ರುಕಿಯಾ ಬಾಯಿಗೆ ಸೆರಗು ತುರುಕುವಳು.

ಅದೊಂದು ದಿನ!

ಅಂದಿಗೆ ಅಬ್ಬು ಕಾಕಾ ಮಲಗಿ ಇಪ್ಪತ್ತು ದಿನಗಳೇ ಕಳೆದು ಹೋಗಿದ್ದವು. ತನ್ನ ತೊಡೆಯ ಮೇಲೆ ಮಗುವಿನಂತೆ ಮಲಗಿದ್ದ ಗಂಡನ ಮುಖವನ್ನೇ ನೋಡುತ್ತಾ ಪ್ರತಿಮೆಯಂತೆ ಕುಳಿತಿದ್ದಳು ಪಾತುಮ್ಮ. ಅವಳ ಕಣ್ಣಿಂದ ಕೋಡಿಯಾಗಿ ಹರಿಯುತ್ತಿತ್ತು ಕಣ್ಣೀರು..

ಇದ್ದಕ್ಕಿದ್ದಂತೆ ಗಂಡನ ತುಟಿ ಅದುರುವುದನ್ನು ಕಂಡು ಪಾತುಮ್ಮ ಕಣ್ಣೊರಸಿ ಕೊಂಡಳು. ಗಂಡನ ದೇಹವನ್ನೆತ್ತಿ ತಲೆಯನ್ನು ಎದೆಗೊತ್ತಿಕೊಂಡು, ''ಮಾತಾಡಿ... ಮಾತಾಡಿ... ನನ್ನ ಜೀವವೇ ಒಮ್ಮೆ ಮಾತಾಡಿ...'' ಎಂದು ಅಂಗಲಾಚಿದಳು.

ಅಬ್ಬು ಕಾಕಾರ ಬಾಯಿ ಮತ್ತೆ ತೆರೆಯಿತು. ನಾಲಗೆ ಹೊರಳಾಡಿತು. ತುಟಿ ನಡುಗಿತು.

''ಪಾತುಮ್ಮಾ...''

''ಅಯ್ಯೋ ದೇವರೇ..''

''ಮಾತಾಡಿ, ನಾನು ಪಾತುಮ್ಮಾ... ನಿಮ್ಮ ಪಾತುಮ್ಮಾ... ನೋಡಿ ರುಕಿಯಾ

ಇಲ್ಲಿದ್ದಾಳೆ... ನಮ್ಮ ಮಗಳು ರುಕಿಯಾ... ರುಕಿಯಾ ಎಲ್ಲಿದ್ದೀಯೇ, ಬೇಗ ಬಾರೇ, ನಿನ್ನ ಬಾಪಾ ಕರೆಯುತ್ತಿದ್ದಾರೆ''

ರುಕಿಯಾ ಬಂದಳು. ಬಾಪಾನ ಕೈಹಿಡಿದು ಎದೆಗೊತ್ತಿಕೊಂಡಳು... ''ಬಾಪಾ'' ಎಂದು ರೋದಿಸಿದಳು.

''ಮಾತಾಡೀಂದ್ರೆ... ಮಾತಾಡಿ.. ಏನಾಗ್ತಿದೆ ನಿಮಗೆ... ಏನು ಬೇಕು ನಿಮಗೆ... ನನ್ನನ್ನು ಕ್ಷಮಿಸುತ್ತೀರಾ? ನಾನು ತೌಬಾ ಮಾಡಿದ್ದೇನೆ. ನನ್ನನ್ನು ಕ್ಷಮಿಸುತ್ತೀರಾ... ನಾನು ಇನ್ನು ನಿಮ್ಮೊಡನೆ ಜಗಳ ಆಡೋದಿಲ್ಲ.. ಮಾತಾಡಿ...'' ಪಾತುಮ್ಮ ತನ್ನ ಕೆನ್ನೆಯನ್ನು ಗಂಡನ ಕೆನ್ನೆಗೆ ಒತ್ತಿ ಹಿಡಿದು 'ಅಯ್ಯೋ' ಎಂದು ಕಣ್ಣೀರು ಮಿಡಿದಳು.

ಅಬ್ಬು ಕಾಕಾರ ದೇಹದಲ್ಲಿ ಈಗ ಸ್ವಲ್ಪ ಚಲನೆ ಕಂಡಿತು. ಅವರು ತನ್ನ ಬಲಗೈಯಿಂದ ಹೆಂಡತಿಯ ಕೈಯನ್ನು ಒತ್ತಿ ಹಿಡಿದುಕೊಂಡು ಮತ್ತೆ 'ಪಾತುಮ್ಮಾ' ಎಂದು ಕರೆದರು.

''ಏನು ಹೇಳಿ... ಮಾತಾಡಿ''

''ನಾನು ನಿನ್ನನ್ನು ತುಂಬಾ ಪ್ರೀತಿಸ್ತೇನೆ ಪಾತುಮ್ಮಾ''

''ಅಯ್ಯೋ ದೇವರೇ.. ಅದು ನನಗೆ ಗೊತ್ತುರೀ... ನನಗೆ ಗೊತ್ತು'

''ತುಂಬಾ ಅಂದರೆ... ತುಂಬಾ ಪ್ರೀತಿಸ್ತೇನೆ... ಪಾತುಮ್ಮಾ... '' ಅಬ್ಬು ಕಾಕಾರ ಕಣ್ಣಿಂದ ನೀರು ಹರಿಯತೊಡಗಿತು.

ಪಾತುಮ್ಮ ಗಂಡನ ಕೆನ್ನೆ, ಗಲ್ಲ, ಕಣ್ಣುಗಳಿಗೆ ಮುತ್ತಿನ ಮಳೆಗರೆದಳು.

''ನನ್ನ ಜೀವವೇ... ನನ್ನ ಪ್ರೀತಿಯೇ.. ನೀನು ನನಗೆ ಬೇಕು... ನೀನು ನನಗೆ ಬೇಕು... ನಿನ್ನನ್ನು ನಾನು ಯಾರಿಗೂ ಬಿಟ್ಟು ಕೊಡಲಾರೆ. ಯಾರಿಗೂ... ದೇವರಿಗೂ ಬಿಟ್ಟು ಕೊಡಲಾರೆ...'' ಮತ್ತೆ ಗಂಡನ ಮುಖದ ತುಂಬಾ ಚುಂಬಿಸಿದಳು ಪಾತುಮ್ಮಾ. ನಾಲ್ಕು ಕಣ್ಣುಗಳಲ್ಲೂ ನೀರು ಧಾರೆಯಂತೆ ಹರಿಯುತ್ತಿತ್ತು.

ಇದ್ದಕ್ಕಿದ್ದಂತೆ ಗಂಡನ ದೇಹ ಸಡಿಲವಾದಂತಾಯಿತು.

''ಏನಾಗ್ತಾ ಇದೆ ನಿಮಗೆ? ಮಾತಾಡಿ... ಯಾಕೆ ಮಾತಾಡ್ತಾ ಇಲ್ಲ... '' ಅವಳು ಗಂಡನ ಮುಖ ನೋಡಿದಳು.

ಒಮ್ಮೆಲೇ ಅಬ್ಬು ಕಾಕಾರ ಕಣ್ಣು ನಿಸ್ತೇಜವಾಯಿತು. ತಲೆ ವಾಲಿತು. ತನಗೆ ಒತ್ತಿ ಕುಳಿತ ದೇಹ ಮತ್ತಷ್ಟು ಭಾರವಾಯಿತು. ಪಾತುಮ್ಮಳಿಗೆ ಎಲ್ಲವೂ ಅರ್ಥವಾಯಿತು. ಅವಳು ಕಿಟಾರನೆ ಕಿರುಚಿಕೊಂಡಳು.

ಅಬ್ಬು ಕಾಕಾರ ಶವ ಸಂಸ್ಕಾರಕ್ಕೆ ಇಡೀ ಊರೇ ಬಂದಿತ್ತು. ರಫೀಕ್ ಮುಂದೆ ನಿಂತು ತಾನೇ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದ. ರಫೀಕ್‌ನ ತಂದೆ, ತಾಯಿ,



ತಂಗಿ ಎಲ್ಲರೂ ಬಂದಿದ್ದರು. ರುಕಿಯಾ ರಫೀಕ್‌ನ ತಾಯಿಯ ಮಡಿಲಲ್ಲಿ ಮುಖವಿಟ್ಟು ಗೋಳೋ ಎಂದು ಅಳುತ್ತಿದ್ದಳು. ಅವರು ತನ್ನ ಭಾವಿ ಸೊಸೆಯನ್ನು ಸಮಾಧಾನ ಪಡಿಸುತ್ತಿದ್ದರು.

ತನ್ನ ಪತಿ ಇನ್ನಿಲ್ಲ ಎಂದು ತಿಳಿದ ಕ್ಷಣದಿಂದ ಪಾತುಮ್ಮ ಗುಂಡುಕಲ್ಲಿನಂತೆ ಕುಳಿತುಬಿಟ್ಟಿದ್ದಳು. ಅವಳ ಕಣ್ಣಿಂದ ಒಂದು ತೊಟ್ಟು ಕಣ್ಣೀರೂ ಬರಲಿಲ್ಲ. ಅವಳು ಅಳಲೂ ಇಲ್ಲ. ಕಿರುಚಲೂ ಇಲ್ಲ. ಕೊನೆಯ ಬಾರಿ ಒಮ್ಮೆ ಶವ ದರ್ಶನಕ್ಕೆಂದು ಅವಳನ್ನು ಕರೆತಂದಾಗಲೂ ಅವಳು ಗಂಡನ ಮುಖ ನೋಡಿದಳು ಅಷ್ಟೇ! ಯಾವ ಪ್ರತಿಕ್ರಿಯೆಯೂ ಇಲ್ಲ. ಮತ್ತೆ ಅಕೆಯನ್ನು ಒಂದು ಕೋಣೆಗೆ ಕರೆತಂದು ಮಲಗಿಸಿದ್ದರು.

ಶವ ಸಂಸ್ಕಾರವೆಲ್ಲ ಮುಗಿದು ಜನ ಚದುರಿದರು. ರುಕಿಯಾ ಒಬ್ಬಳನ್ನೇ ಹೇಗೆ ಬಿಟ್ಟು ಹೋಗುವುದು ಎಂಬ ಚಿಂತೆ ರಫೀಕ್‌ನ ತಾಯಿಗೆ. ಅವರು ತನ್ನ ಮಗಳನ್ನು ಅಲ್ಲಿಯೇ ಬಿಟ್ಟು ಹೋಗುವುದೆಂದೂ ತೀರ್ಮಾನಿಸಿದರು. ರುಕಿಯಾಳಿಗೂ ಸಮಾಧಾನವಾಯಿತು.

ಹೊರಟು ನಿಂತ ರಫೀಕ್‌ನ ತಾಯಿ ಪಾತುಮ್ಮಳಲ್ಲಿ ಹೇಳಿ ಹೋಗೋಣ ಎಂದು ಕೋಣೆಗೆ ನಡೆದರು. ಪಾತುಮ್ಮ ಹಾಸಿಗೆಯಲ್ಲಿ ಅಂಗಾತ ಬಿದ್ದುಕೊಂಡಿದ್ದಳು. ಅವಳಿಗೆ ತನ್ನ ಬಟ್ಟೆಯ ಪರಿವೆಯೂ ಇರಲಿಲ್ಲ. ಅವರ ಪಕ್ಕ ಕುಳಿತು ''ಪಾತುಮ್ಮಾ'' ಎಂದು ಕರೆದರು.

ಪಾತಮ್ಮ ಪ್ರತಿಕ್ರಿಯಿಸಲಿಲ್ಲ.

ಮತ್ತೆ ಕೆನ್ನೆ ತಟ್ಟಿ ''ಪಾತುಮ್ಮಾ ನಾವು ಬರುತ್ತೇವೆ. ನನ್ನ ಮಗಳು ಇಲ್ಲಿಯೇ ಇರುತ್ತಾಳೆ. ಸಮಾಧಾನ ಮಾಡಿಕೋ'' ಎಂದರು.

ಆಗಲೂ ಉತ್ತರವಿಲ್ಲ.

ಅವರು ಪಾತುಮ್ಮನ ದೇಹವನ್ನು ಅಲುಗಾಡಿಸಿ ಮತ್ತೆ ''ಪಾತುಮ್ಮಾ'' ಎಂದು ಕೂಗಿದರು.

ಪಾತುಮ್ಮ ಮಿಸುಕಾಡಲಿಲ್ಲ.

ಅವರಿಗೆ ಭಯವಾಯಿತು. ಅವರು ಅವಳ ದೇಹವನ್ನು ಮುಟ್ಟಿ ಮುಟ್ಟಿ ನೋಡಿದರು. ತಣ್ಣಗಿದೆ! ಮೂಗಿನತ್ತ ಬೆರಳು ಹಿಡಿದು ನೋಡಿದರು ಇಲ್ಲ ಉಸಿರಾಟವಿಲ್ಲ!

ಅದಾಗಲೇ ಪಾತುಮ್ಮ ಉಸಿರು ನಿಲ್ಲಿಸಿ ಗಂಡನ ಜೊತೆ ಹೋಗಿಯಾಗಿತ್ತು.

**ವಾರ್ತಾಭಾರತಿ**

# ಐದು ಪವನ್ ಚಿನ್ನ

ನನ್ನ ಭಾವ ಮೈದುನ ರಫೀಕ್‌ನ ಮದುವೆಗೆ ನಾನು ಹೋಗಲಿಲ್ಲ. ಇದರಿಂದ ನನ್ನ ಹೆಂಡತಿ ರುಕಿಯಾಳಿಗೆ ತುಂಬಾ ಅಸಮಾಧಾನ. ಆದರೆ ಏನು ಮಾಡುವುದು? ನನಗೆ ಅವನನ್ನು ಕಂಡರೆ ಆಗುವುದಿಲ್ಲ. ಅವನೊಂಥರಾ ಹುಡುಗಾಟಿಕೆಯ ಜನ. ಯಾರ ಜೊತೆ ಹೇಗೆ ಮಾತನಾಡಬೇಕು, ಹೇಗೆ ಮರ್ಯಾದೆ ಕೊಡಬೇಕು ಎನ್ನುವುದೂ ಅವನಿಗೆ ತಿಳಿಯದು. ಅಷ್ಟೊಂದು ಕೀಳು ಮಟ್ಟದ ವ್ಯಕ್ತಿ.

ನನ್ನ ತಂದೆ ಅಲ್ಲಿಂದ ಒಂದು ಹೆಣ್ಣನ್ನು ತಂದು ನನಗೆ ವಿವಾಹ ಮಾಡಿದ್ದರು. ಹಾಗಾಗಿ ನಾನು ರುಕಿಯಾಳ ಕೈ ಹಿಡಿದಿದ್ದೆ.

ಡಿಗ್ರಿ ಕಲಿತ ನನಗೂ ಏಳನೇ ಕ್ಲಾಸ್ ಓದಿದ ಅವಳಿಗೂ ಎಲ್ಲಿಯ ತಾಳ ಎಲ್ಲಿಯ ಮೇಳ! ಇದು ಆಶ್ಚರ್ಯಕರ ಸಂಗತಿಯೇ ಸರಿ. ವಿಧಿ ಹೇಗೋ ನಮ್ಮ ಕಣ್ಣಿಗೆ ಮಂಕನ್ನು ತೂರಿಬಿಡುತ್ತದೆ.

ನನ್ನ ತಂದೆಗೂ ಇವಳ ತಂದೆಗೂ ಹಳೆಯ ಗೆಳೆತನ. ಅದರ ಫಲ ಈ ಸಂಬಂಧ. ನಾನು ತಂದೆಯ ಮಾತು ಮೀರಿ ನಡೆದವನಲ್ಲ. ತಂದೆ ನೆಟ್ಟ ಆಲದ ಮರಕ್ಕೆ ಉರುಳು ಹಾಕಿಕೊಂಡಿದ್ದೆ.

ಮೊದ ಮೊದಲು ಪೆದ್ದಿಯಂತಿದ್ದರೂ ನನ್ನ ರುಕಿಯಾ ಈಗ ಜಾಣೆಯಾಗಿದ್ದಳು. ನನ್ನ ಎರಡು ಮಕ್ಕಳ ತಾಯಿಯಾಗಿ, ನನ್ನ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ನನ್ನನ್ನು ಅನುಸರಿಸುತ್ತಿದ್ದಳು. ಇದು ನನಗೆ ಬಹಳ ತೃಪ್ತಿ ತಂದಿತ್ತು. ಪುಸ್ತಕಗಳನ್ನು ಓದುವುದು, ಮಕ್ಕಳ ಚಾಕರಿ ಮಾಡುವುದು, ನನ್ನನ್ನು ಸಂತೋಷದಲ್ಲಿ ಇಡುವುದೆಂದರೆ ಇವಳಿಗೆ ಖುಷಿ.



ಮದುವೆಯಲ್ಲಿ ಇಪ್ಪತ್ತು ಪವನು ಚಿನ್ನ ಹಾಕುತ್ತೇವೆ ಎಂದವರು ಹದಿನೈದು ಪವನು ಮಾತ್ರ ಹಾಕಿದಾಗ ನಾನು ಸುಮ್ಮನಿರಲಿಲ್ಲ. ಐದು ಪವನ್ ಎಂದರೆ ತಮಾಷೆಯಾ? ಅತ್ತೆ ಮಾವನ ಜೊತೆ ಜಗಳ ಮಾಡಿದ್ದೆ.

''ಚಿನ್ನ ಅನ್ನ ಕೊಡ್ತದಾ ಮಾರಾಯ! ಬಡವರು... ತುಂಬಾ ಕಷ್ಟದಲ್ಲಿದ್ದಾರೆ. ಇಂದಲ್ಲ ನಾಳೆ ಹಾಕಬಹುದು'' ಎಂದು ತಂದೆ ಅವರ ಪರ ವಹಿಸಿ ಮಾತನಾಡಿದಾಗ ನಾನು ಸುಮ್ಮನಿರಬೇಕಾಯಿತು.

ಆಮೇಲೆ ನಾನು ಆ ಮನೆಗೆ ಹೋಗಲಿಲ್ಲ. ರುಕಿಯಾಳೂ ಹೋಗಲಿಲ್ಲ. ಅವಳು ಹೋಗಲಿಲ್ಲ ಅಂದರೆ ನಾನು ಕಳುಹಿಸಲಿಲ್ಲ.

ನಿಶ್ಚಿತಾರ್ಥಕ್ಕೆ ಕರೆಯಲು ರಫೀಕ್ ಬಂದಿದ್ದ. ಅವನ ತಮಾಷೆಯ ಮಾತುಗಳು ಅಸಹ್ಯ ಹುಟ್ಟಿಸುವಂತಿದ್ದವು.

''ಬರಬೇಕು ಬಾವಾ, ನೀವು ಬರದಿದ್ದರೆ ಸರಿಯಾಗ್ತದಾ? ಅಕ್ಕ, ಮಕ್ಕಳನ್ನು ಕರೆದುಕೊಂಡು ಬನ್ನಿ'' ಎಂದು ಒತ್ತಾಯಿಸಿದ್ದ. ಆದರೆ ನನಗೆ ಬರಬೇಕಾಗಿದ್ದ ಐದು ಪವನಿನ ಬಗ್ಗೆ ಮಾತೇ ಇಲ್ಲ.

ನಿಜ ಹೇಳಬೇಕೆಂದರೆ ರುಕಿಯಾ ''ನಾನು ನಿಶ್ಚಿತಾರ್ಥಕ್ಕೆ ಹೋಗುತ್ತೇನೆ' ಎಂದು ಹೇಳಿದ್ದರೆ ನಾನು ಕಳುಹಿಸುತ್ತಿದ್ದೆ. ಅವಳು ಈ ಬಗ್ಗೆ ನನ್ನಲ್ಲಿ ಒಂದು ಮಾತೂ ಆಡಲಿಲ್ಲ. ನಾನೂ ಕೇಳಲಿಲ್ಲ. ಅವಳ ಮೌನ ನನ್ನಲ್ಲಿ ಆಶ್ಚರ್ಯ ಉಂಟುಮಾಡಿತ್ತು.

ಆಮೇಲೆ ಮದುವೆಗೆ ಕರೆಯಲು ಅತ್ತೆ ಮತ್ತು ರಫೀಕ್ ಒಟ್ಟಿಗೆ ಬಂದಿದ್ದರು. ಬಹಳ ದಿನಗಳನಂತರ ಈ ಮನೆಗೆ ಅತ್ತೆ ಬಂದದ್ದು. ಮಾವ ತೀರಿದ ಮೇಲೆ ಅವರು ಎಲ್ಲಿಗೂ ಹೋಗುತ್ತಿರಲಿಲ್ಲವಂತೆ. ಬಹಳ ಸೊರಗಿದಂತಿದ್ದರು.

''ಹತ್ತು ದಿನ ಮೊದಲೇ ಬರಬೇಕಪ್ಪಾ, ಮನೆಯ ಅಳಿಯ ನೀನು. ನೀನೇ ಮುಂದೆ ನಿಂತು ಎಲ್ಲಾ ಕಾರ್ಯವನ್ನೂ ಚಂದದಲ್ಲಿ ಮಾಡಿಸಿಕೊಡಬೇಕು'' ಎಂದು ಒತ್ತಾಯಿಸಿದ್ದರು. ಇವರೂ ಐದು ಪವನಿನ ನೆನಪೇ ಇಲ್ಲದಂತಿದ್ದರು.

ಮದುವೆಯ ಕುರಿತು ರುಕಿಯಾ ಒಂದು ಮಾತೂ ಆಡಲಿಲ್ಲ. ''ರಫೀಕ್‌ಗೆ ತಕ್ಕ ಹಾಗೆ ಒಂದು ಒರಟು ಹುಡುಗಿ ಸಿಗಬೇಕು. ಅವನೂ ನನ್ನ ಹಾಗೆ ವಂಚಿತನಾಗಬೇಕು'' ಎಂದು ನನ್ನೊಳಗೇ ನಾನು ಹೇಳಿಕೊಂಡೆ.

ಈಗ ರಫೀಕ್‌ನಲ್ಲಿ ಹಣವಿಲ್ಲವೆಂದೇನೂ ಇಲ್ಲ. ಮೂರು ಸಲ ಗಲ್ಫ್‌ಗೆ ಹೋಗಿ ಬಂದಿದ್ದಾನೆ.

ಮದುವೆಯಾದ ಒಂದು ವರ್ಷದಲ್ಲೇ ಮಾವ ತೀರಿಕೊಂಡರು. ಅಷ್ಟರ ತನಕವೂ ನನಗೆ ಬರಬೇಕಾಗಿದ್ದ ಐದು ಪವನನ್ನು ನಾನು ಕೇಳುತ್ತಲೇ ಇದ್ದೆ. ಅವರು ತೀರಿಹೋದ

ಮೇಲೆ ನಾನು ಯಾರಲ್ಲಿ ಕೇಳುವುದು? ಅತ್ತೆ ಹೆಣ್ಣು ಹೆಂಗಸು. ಏನು ಮಾಡಲು ಸಾಧ್ಯ! ಇವನೋ ಸಂಸ್ಕಾರವೇ ಇಲ್ಲದವನು. ಎಂಥದ್ದು ಕೇಳುವುದು? ಆಮೇಲೆ ಇವನಲ್ಲಿ ನಾನು ಮಾತನಾಡುವುದನ್ನೇ ಬಿಟ್ಟುಬಿಟ್ಟಿದ್ದೆ.

ಮಾವ ತೀರಿದ ಮೇಲೆ ಒಮ್ಮೆ ಅತ್ತೆ ನನಗೆ ಹೇಳಿ ಕಳುಹಿಸಿದ್ದರು. ಬಹುಶಃ ಐದು ಪವನ್ ಕೊಡಲಿಕ್ಕೆ ಇರಬಹುದು ಎಂದು ನಾನು ಹೋಗಿದ್ದೆ.

ಅವರು ಬಾಯಿಗೆ ಸೆರಗು ಹಿಡಿದು ಕಣ್ಣೀರಿಡುತ್ತಾ ನನ್ನೆದುರು ನಿಂತು, ''ಮಗಾ, ನಿನ್ನ ಮಾವ ತೀರಿದ ಮೇಲೆ ದಿನ ಕಳೆಯುವುದೇ ಕಷ್ಟವಾಗಿದೆ. ರಫೀಕ್‌ನಿಗೆ ಕೆಲಸ ಏನೂ ಇಲ್ಲ. ಅವನು ಗಲ್ಫ್‌ಗೆ ಹೋಗ್ತಾನಂತೆ. ಒಂದು ವೀಸಾ ರೆಡಿ ಇದೆ. ನೀನು ಸ್ವಲ್ಪ ಸಹಾಯ ಮಾಡಬೇಕು'' ಎಂದು ಅಳತೊಡಗಿದ್ದರು.

ನನಗೆ ಕೋಪ ನೆತ್ತಿಗೇರಿತ್ತು. ''ಐದು ಪವನ್ ಕೊಡಬಹುದು ಎಂದು ಬಂದರೆ ನನ್ನಲ್ಲಿಯೇ ಮತ್ತೆ ಕೇಳುತ್ತಾರಲ್ಲಾ! ಇಲ್ಲಿ ದುಡಿಯದ ಇವನು ಅಲ್ಲಿ ದುಡಿಯುತ್ತಾನಾ ದಡಿಯ?'' ಎಂದು ನನ್ನೊಳಗೇ ಭುಸುಗುಟ್ಟುತ್ತಾ ಹೊರಟುಬಂದಿದ್ದೆ. ಆಮೇಲೆ ನಾನು ಆ ಮನೆಗೆ ಕಾಲಿಡಲಿಲ್ಲ.

ಮತ್ತೆ ವಾರದೊಳಗೆ ಆತ ಗಲ್ಫ್‌ಗೆ ಹೋಗಿದ್ದ. ಈಗ ಎಲ್ಲಿಂದ ಬಂತು ದುಡ್ಡು! ಎಲ್ಲ ನಾಟಕ, ಸಿಕ್ಕಿದರೆ ಕಬಳಿಸುವಾ ಅಂತ.

ಆದರೆ ರುಕಿಯಾ ನನ್ನಲ್ಲಿ ಈ ಬಗ್ಗೆ ಒಂದು ಮಾತೂ ಆಡುವುದಿಲ್ಲ. ಎಂತಹ ಹೆಣ್ಣು ಇವಳು. ಇವಳೊಡನೆ ಜಗಳ ಆಡಲೂ ಆಗುತ್ತಿಲ್ಲವಲ್ಲಾ! ಎಂದು ಒಮ್ಮೊಮ್ಮೆ ನನಗೆ ನನ್ನ ಮೇಲೆಯೇ ಕೋಪ ಬರುತ್ತಿತ್ತು.

ಅವನು ಪ್ರತಿ ಸಲ ಗಲ್ಫ್‌ನಿಂದ ಬಂದಾಗಲೂ ಮನೆಗೆ ಬರುತ್ತಿದ್ದ. ಅವಳಿಗೆ, ಮಕ್ಕಳಿಗೆ ಏನಾದರೂ ತರುತ್ತಿದ್ದ. ಆದರೆ ನನಗೆ ಬರಬೇಕಾಗಿದ್ದ ಐದು ಪವನು? ಎಲ್ಲರೂ ಈಗ ಅದನ್ನು ಮರೆತಂತೆ ಮಾತನಾಡುತ್ತಿದ್ದರು. ಇವರು ಯಾರು ಮರೆತರೂ ನಾನು ಮರೆಯಲಿಕ್ಕೆ ಸಾಧ್ಯವಾ?

ಒಂದು ರಾತ್ರಿ ಬಹಳ ಹೊತ್ತಿನವರೆಗೆ ನಾನು ವರಾಂಡದಲ್ಲಿ ಓದುತ್ತಾ ಕುಳಿತಿದ್ದೆ. ಬಳಿಕ ಕೋಣೆಗೆ ಹೋಗಿ ಮಲಗಿದಾಗ ಕಣ್ಣುಗಳಲ್ಲಿ ನೀರು ತುಂಬಿಕೊಂಡು ರುಕಿಯಾ ಹಿತವಾಗಿ ನನ್ನ ಕೆನ್ನೆ ಸವರತೊಡಗಿದಳು.

''ಏನು ರುಕಿಯಾ?'' ಎಂದೆ.

ಅವಳು ನನ್ನ ಕೈಯನ್ನು ಭದ್ರವಾಗಿ ಹಿಡಿದುಕೊಂಡು ಬಿಕ್ಕಳಿಸತೊಡಗಿದಳು.

''ಯಾಕೆ ಅಳ್ತಾ ಇದ್ದೀಯಾ?''

''ಏನೂ ಇಲ್ಲ''



''ಏನು ಅಂತ ಹೇಳಬಾರದೇ? ನಿನ್ನ ಅಣ್ಣನ ಮದುವೆಗೆ ನೀನು ಹೋಗಬೇಕು ಅಲ್ಲವೇ?''

ಅವಳು ಉತ್ತರ ಕೊಡಲಿಲ್ಲ. ಮತ್ತೂ ಬಿಕ್ಕಿ ಬಿಕ್ಕಿ ಅತ್ತಳು.

''ಹುಚ್ಚಿ ಹೋಗಿ ಬಾ, ಮಕ್ಕಳನ್ನೂ ಕರೆದುಕೊಂಡು ಹೋಗು. ನಿನ್ನ ಅಣ್ಣನ ಮದುವೆ. ನೀನೊಬ್ಬಳೇ ತಂಗಿ. ನೀನಿಲ್ಲದಿದ್ದರೆ ಹೇಗೆ? ಖರ್ಚಿಗೆ ದುಡ್ಡು ತೆಗೆದುಕೊಂಡು ಹೋಗು. ನಾನು ಮಾತ್ರ ಬರಲು ಸಾಧ್ಯವಿಲ್ಲ. ತುಂಬಾ ಕೆಲಸ ಇದೆ. ನೀನು ಜುಮ್ಮಂತ ಹೋಗಿ ಬಾ''

ರುಕಿಯಾ ನಾನಿಲ್ಲದೆಯೇ ಮಕ್ಕಳೊಂದಿಗೆ ಮದುವೆಗೆ ಹೋಗಿಬಂದಿದ್ದಾಳೆ.

ಪಾಪ! ಒಂದೇ ದಿನ ಅವಳು ಅಲ್ಲಿ ಉಳಿದದ್ದು. ಅವಳ ಈ ಗುಣವೇ ನನಗೆ ಇಷ್ಟವಾಗುವುದು. ಅವಳು ಒಂದು ವಾರ ಅಲ್ಲಿ ಉಳಿದಿದ್ದರೂ ನಾನು ಬೇಡ ಅನ್ನುತ್ತಿರಲಿಲ್ಲ.

''ಮದುವೆ ಹೇಗೆ ನಡೆಯಿತು ರುಕಿಯಾ? ಹುಡುಗಿ ಹೇಗಿದ್ದಾಳೆ? ದೊಡ್ಡ ಕುಳವೋ?'' ಮದುವೆ ಮುಗಿಸಿ ಬಂದ ರುಕಿಯಾಳನ್ನು ಕೇಳಿದೆ.

''ನೀವಂತೂ ಬರಲಿಲ್ಲ. ಅಮ್ಮ ಬಹಳ ಬೇಸರ ಮಾಡಿಕೊಂಡರು. ತಮಗಿರುವುದು ಒಬ್ಬನೇ ಅಳಿಯ. ಮದುವೆಗೂ ಬಾರದಂತಹದ್ದು ತಾವೇನು ಮಾಡಿದ್ದೇವೆ ಅವನಿಗೆ?'' ಎಂದು ಅಳುತ್ತಿದ್ದರು.

''ಮದುಮಗಳು ತುಂಬಾ ಚೆನ್ನಾಗಿದ್ದಾಳೆ. ಇಷ್ಟು ಚಂದದ ಹುಡುಗಿಯನ್ನು ನಾನು ನೋಡಿಯೇ ಇಲ್ಲ. ಎಸ್.ಎಸ್.ಎಲ್.ಸಿ.ವರೆಗೆ ಓದಿದ್ದಾಳೆ. ರಫೀಕ್ ಪುಣ್ಯ ಮಾಡಿದ್ದ'' ಎಂದಳು ರುಕಿಯಾ.

''ನಿಜವಾಗಿಯೂ ರೂಪವತಿಯೇ? ಓದಿದವಳೇ?''

''ರೂಪವತಿ ಮಾತ್ರವಲ್ಲ, ಸಂಸಾರಕ್ಕೆ ಹೇಳಿ ಮಾಡಿಸಿದ ಹಾಗೆ ಅಚ್ಚುಕಟ್ಟಾದ ಹೆಣ್ಣು''.

''ಮುಚ್ಚು ಮರೆ ಯಾಕೆ, ಇದರಿಂದ ನನಗೆ ತುಂಬಾ ಅಸೂಯೆಯಾಗಿದೆ''

ರುಕಿಯಾ ಮತ್ತೆ ಹೇಳಿದಳು.

''ದೊಡ್ಡ ಕುಳ, ಹುಡುಗಿಗೆ ನೂರು ಪವನ್ ಚಿನ್ನ ಹಾಕಿದ್ದಾರೆ''

''ನೂರು ಪವನಾ?''

''ನನ್ನ ಮುಂದೆ ಚಡ್ಡಿ ಹಾಕಿ ಮೂಗಿನಲ್ಲಿ ಸೊರಳೆ ಸುರಿಸಿಕೊಂಡು ಓಡಾಡುತ್ತಿದ್ದ, ಎದೆ ಸೀಳಿದರೂ ಮೂರಕ್ಷರ ಜ್ಞಾನವಿಲ್ಲದ ಈ ಬಿಕನಾಸಿಗೆ ನೂರು ಪವನ್! ಎಸ್.ಎಸ್.ಎಲ್.ಸಿ. ಕಲಿತ ಹೆಣ್ಣು'' ನನಗೆ ಒಳಗೊಳಗೇ ಕುದಿಯತೊಡಗಿತು.

ಇನ್ನು ಅವನು ಇಲ್ಲಿಗೆ ಬಂದರೆ ನನ್ನ ಐದು ಪವನ್ ಕೇಳಬೇಕು. ಕೇಳುವುದಕ್ಕೇನು ಮುಲಾಜು. ನನಗೆ ಕೊಡುವಂತಹದ್ದಲ್ಲವಾ?

ಮಾವ ತೀರಿಕೊಂಡ ಮೇಲೆ, ಪಾಪ, ಅವರಲ್ಲಿ ಇಲ್ಲ, ರುಕಿಯಾ ಬೇಜಾರು ಮಾಡಿಕೊಳ್ಳಬಹುದು ಎಂದು ಸುಮ್ಮನಿದ್ದೆ.

ಬರಲಿ ಅವ. ಮುಖಕ್ಕೆ ಹೊಡೆದಂತೆ ಕೇಳಬೇಕು, ಅಯೋಗ್ಯ.

''ಮತ್ತೇನು ವಿಶೇಷ ಊರಿದ್ದು?'' ಕೇಳಿದೆ.

''ಇನ್ನೊಂದು ವಿಷಯ''

''ಏನದು?''

''ನಮ್ಮ ಮನೆಯ ಹಿಂದೆ ಖಾಲಿ ಜಾಗ ಇತ್ತಲ್ಲ. ಅದರಲ್ಲಿ ಅಣ್ಣ ಒಂದು ದೊಡ್ಡ ಮನೆ ಕಟ್ಟಿಸಿದ್ದಾನೆ. ಟಾರಸಿ ಮನೆ. ಒಳಗೆಲ್ಲ ಮಾರ್ಬಲ್ಲು. ಮೂರು ಬೆಡ್ ರೂಂ ಇದೆ. ಮನೆ ತುಂಬಾ ಚೆನ್ನಾಗಿದೆ. ಹತ್ತು ಲಕ್ಷ ಖರ್ಚಾಯಿತಂತೆ''.

''ಏನು? ಮನೆ ಕಟ್ಟಿಸಿದ್ದಾನಾ?''

''ಹಳೇ ಮನೆ, ಇಂದೋ ನಾಳೆಯೋ ಬೀಳುವ ಸ್ಥಿತಿಯಲ್ಲಿದೆ. ಶ್ರೀಮಂತರ ಮನೆಯ ಹೆಣ್ಣು ಬಂದಿದ್ದಾಳೆ. ಆ ಹಳೇ ಮನೆಯಲ್ಲಿ ಇರುವುದು ಸರಿ ಆಗ್ತದಾ?'' ರುಕಿಯಾ ಹೇಳುತ್ತಾ ಅಡುಗೆ ಮನೆ ಸೇರಿದಳು.

ಹತ್ತು ಲಕ್ಷದ ಮನೆ ಕಟ್ಟಿದ್ದಾನೆ. ಇಷ್ಟೊಂದು ಹಣ ಇದೆ ಈ ಅಯೋಗ್ಯನಲ್ಲಿ. ಐದು ಸಾವಿರದ ಮೇಲೆ ಸಂಬಳ ಇದ್ದರೂ ನನಗಿನ್ನೂ ಒಂದು ಸೈಟು ಖರೀದಿಸಲು ಸಾಧ್ಯ ಆಗಲಿಲ್ಲ. ಬಾಡಿಗೆ ಮನೆಯಲ್ಲಿ ಸವೆಯುತ್ತಾ ಇದ್ದೇನೆ. ನನ್ನ ಮುಂದೆ ಬೆಳೆದ ಬಚ್ಚ ಇವನು. ಹತ್ತು ಲಕ್ಷದ ಮನೆ ಕಟ್ಟಿಸುವುದೆಂದರೆ!

ಹಾಗಾದರೆ ಒಂದು ಸಲ ನಾನು ಅಲ್ಲಿಗೆ ಹೋಗಿಬರಬೇಕು. ಆ ಮನೆಯನ್ನು ನೋಡಿ ಬರಲೇಬೇಕು. ಯಾರಲ್ಲಿ ಕೇಳಿ ಆತ ಮನೆ ಕಟ್ಟಿಸಿದ್ದು? ರುಕಿಯಾಳಿಗೂ ಆ ಜಾಗದಲ್ಲಿ ಪಾಲು ಇದೆ. ಅವಳ ಅನುಮತಿ ಇಲ್ಲದೆ ಅವನು ಹೇಗೆ ಕಟ್ಟಿದ? ಐದು ಪವನ್ ಮೋಸ ಮಾಡಿ ಆಯಿತು. ಇನ್ನು ತಂದೆಯ ಆಸ್ತಿಯನ್ನೂ ಒಳಗೆ ಹಾಕುವ ಪ್ಲಾನ್. ಇರಲಿ ಅವನ ಮುಖದ ಬೆವರು ಇಳಿಸುತ್ತೇನೆ.

ಆಮೇಲೆ ಹೋಗೋಣ, ಹೋಗೋಣ ಎಂದರೂ ರಜೆ ಇಲ್ಲದೆ ವಾರ ಕಳೆದುಹೋಯಿತು. ಇನ್ನು ಹೀಗೇ ಕಳೆದರೆ ಹೋದಂತೆಯೇ. ಒಂದು ದಿನ ರಜೆ ಹಾಕಿ ಆದರೂ ಹೋಗಿ ಬರಲೇಬೇಕು.

ಈಗ ಅವನಲ್ಲಿ ದುಡ್ಡು ಇದೆ. ಕೇಳಿದರೆ ಐದು ಪವನ್ ಖಂಡಿತ ಕೊಟ್ಟಾನು. ಕೊಟ್ಟಾನು ಏನು... ಕೊಡಲೇಬೇಕು. ಕೊಡದಿದ್ದರೆ ನಾನು ಬಿಡಬೇಕಲ್ಲ! ''ಹತ್ತು



ಲಕ್ಷದ್ದು ಮನೆ ಕಟ್ಟಿಸಿದ್ದಿಯಾ, ನನಗೆ ಕೊಡಲಿಕ್ಕಿರುವ ಐದು ಪವನ್ ಕೊಡಲಿಕ್ಕೆ ಆಗುವುದಿಲ್ಲವಾ?'' ಎಂದು ನಿಂತ ಕಾಲಲ್ಲಿ ವಸೂಲು ಮಾಡುತ್ತೇನೆ ಎಂದು ತೀರ್ಮಾನಿಸಿದೆ.

ಸಂಜೆ ಆಫೀಸಿನಿಂದ ಮನೆಗೆ ಬಂದಾಗ ಆಶ್ಚರ್ಯ. ಅತ್ತೆ, ರಫೀಕ್, ಅವನ ಹೆಂಡತಿ ಮನೆಯಲ್ಲಿದ್ದರು.

ರುಕಿಯಾ ಹೇಳಿದಂತೆ ಅವಳೊಂದು ಸೌಂದರ್ಯದ ಖನಿಯೇ ಸರಿ. ಎಂಥವರ ಮನಸ್ಸನ್ನೂ ಸೂರೆಗೊಳ್ಳುವ ರೂಪ.

''ಶಮ್ಮಿ, ಇವರೇ ನನ್ನ ಭಾವ. ದೊಡ್ಡ ಸರಕಾರಿ ಹುದ್ದೆಯಲ್ಲಿದ್ದಾರೆ. ತುಂಬಾ ಒಳ್ಳೆಯ ಜನ''

''ಬಾವಾ, ಇವಳು ನನ್ನ ಹೆಂಡತಿ ಶಮ್ಮಿ, ನೀವು ಮದುವೆಗೆ ಬರಲಿಲ್ಲ. ನಿಮ್ಮನ್ನೆಲ್ಲ ನೋಡಬೇಕು ಎಂದಳು. ಕರೆದುಕೊಂಡು ಬಂದೆ'' ಎಂದ.

ಈತ ಅವಳಿಗೆ ತಕ್ಕ ವರ ಖಂಡಿತ ಅಲ್ಲ. ರುಕಿಯಾ ಹೇಳಿದಂತೆ ಈತ ತುಂಬಾ ಅದೃಷ್ಟವಂತನೇ ಸರಿ.

ಅತ್ತೆ ಬರಬೇಕಾದರೆ ಏನೋ ವಿಶೇಷ ಇರಲೇಬೇಕು. ಬಹುಶಃ ನನ್ನ ಐದು ಪವನ್ ಕೊಡಲು ಬಂದಿರಬೇಕು. ಏನಾದರಾಗಲಿ ಈ ರಾತ್ರಿ ಕೇಳಿಯೇ ಬಿಡುವುದು!

''ಹೇಗೆ ಕೇಳುವುದು? ಯಾವ ರೀತಿ ಮಾತನಾಡಬೇಕು? ರುಕಿಯಾಳಿಗೆ ಬೇಸರವಾಗದಂತೆ, ಆ ಸೌಂದರ್ಯದ ಗಿಣಿಯ ಎದುರು ಸಣ್ಣವನಾಗದಂತೆ ವರ್ತಿಸಬೇಕು,'' ಎಂದೆಲ್ಲಾ ಕೋಣೆಯಲ್ಲೇ ತಿರುಗುತ್ತಾ ಲೆಕ್ಕ ಹಾಕಿದೆ.

ಅಂದು ರಾತ್ರಿ ರುಕಿಯಾ, ತಾಯಿ, ಅಣ್ಣ, ಅತ್ತಿಗೆಯ ಜೊತೆ ಮಾತಿನಲ್ಲೇ ಮುಳುಗಿದ್ದಳು. ಅವಳು ಯಾವಾಗ ಬರಬಹುದು ಎಂದು ಕಾಯುತ್ತಿದ್ದ ನನಗೆ ನಿದ್ದೆ ಹತ್ತಿದ್ದೇ ಗೊತ್ತಾಗಲಿಲ್ಲ. ಬೆಳಗಾದಾಗಲೇ ಎಚ್ಚರ!

''ಛೆ! ನಿನ್ನೆ ರಾತ್ರಿಯೆ ಕೇಳಬೇಕಿತ್ತು. ಇನ್ನು ನಾನು ಆಫೀಸಿಗೆ ಹೋಗಿ ಬರುವ ಮೊದಲು ಇವರು ಹೋಗಿಬಿಟ್ಟರೆ? ಇವತ್ತು ಒಂದು ದಿನ ಆಫೀಸಿಗೆ ರಜ ಹಾಕುವುದೇ ಒಳ್ಳೆಯದು,'' ಎಂದೆಲ್ಲಾ ಯೋಚಿಸುತ್ತಿರುವಾಗ ರುಕಿಯಾ ಕೋಣೆಗೆ ಬಂದಳು.

''ಅಮ್ಮನಿಗೆ ನಿಮ್ಮ ಜೊತೆ ಸ್ವಲ್ಪ ಮಾತನಾಡಲಿಕ್ಕಿದೆಯಂತೆ''

''ಯಾಕೆ? ಏನು ವಿಷಯ?'' ಕೇಳಿದೆ.

''ಗೊತ್ತಿಲ್ಲ, ಅವರು ಈಗ ಮಧ್ಯಾಹ್ನದ ಬಸ್ಸಿಗೆ ಹೋಗ್ತಾರಂತೆ'' ಎಂದಳು.

ಐದು ಪವನ್ ಕೊಡಲಿಕ್ಕೇ ಇರಬೇಕು!

ಅತ್ತೆ ಒಳಗೆ ಬಂದರು.

''ಕುಳಿತುಕೊಳ್ಳಿ'' ಅಲ್ಲೇ ಇದ್ದ ಕುರ್ಚಿ ತೋರಿಸಿದೆ.

''ನೋಡಪ್ಪಾ, ನಮ್ಮ ರಫೀಕ್ ನಮ್ಮ ಜಾಗದಲ್ಲೇ ಒಂದು ಮನೆ ಕಟ್ಟಿಸಿದ್ದಾನೆ''.

''ಕಟ್ಟುವುದಕ್ಕಿಂತ ಮೊದಲು ಕೇಳಬೇಕಿತ್ತು. ಈಗವಾ ಬಂದು ಕೇಳುವುದು? ಅಷ್ಟು ಸುಲಭದಲ್ಲಿ ಬಿಡುವುದಿಲ್ಲ. ಇಂದು ಎರಡರಲ್ಲಿ ಒಂದು ಆಗಲೇಬೇಕು'' ಎಂದು ನಾನು ಮನಸ್ಸಿನಲ್ಲೇ ಅಂದುಕೊಂಡೆ.

''ಅವನಿಗೆ ತುಂಬಾ ವರ್ಷದಿಂದ ಒಂದು ಆಸೆ ಇತ್ತು. ನಮ್ಮ ಮನೆಯ ಪಕ್ಕದಲ್ಲೇ ರುಕಿಯಾಳಿಗೊಂದು ಮನೆ ಕಟ್ಟಿಸಿಕೊಡಬೇಕು ಎಂದು. ಈ ಮನೆಯನ್ನು ಅವನು ರುಕಿಯಾಳಿಗಾಗಿ ಕಟ್ಟಿಸಿದ್ದಾನೆ. ಎಲ್ಲ ಅವಳ ಹೆಸರಿಗೇ ಮಾಡಿದ್ದೇವೆ. ಇದರಲ್ಲಿ ಅದಕ್ಕೆ ಸಂಬಂಧಪಟ್ಟ ಎಲ್ಲ ಕಾಗದ ಪತ್ರಗಳಿವೆ. ನೀವಿನ್ನು ಬಾಡಿಗೆ ಮನೆಯಲ್ಲಿ ಉಳಿದದ್ದು ಸಾಕು. ಅಲ್ಲಿಗೇ ಬಂದುಬಿಡಿ. ಅವನು ಹೋಗುವುದಕ್ಕೆ ಮೊದಲು ಗೃಹಪ್ರವೇಶ ಮಾಡಿಬಿಡಿ''.

''ಈ ಕಾಗದ ಪತ್ರಗಳನ್ನೆಲ್ಲ ಅವಳ ಕೈಗೆ ಕೊಟ್ಟೆ. ಅವಳು ಪಡೆಯಲಿಲ್ಲ. ನಿನ್ನಲ್ಲಿ ಕೇಳಬೇಕು ಎಂದಳು.''

''ನೀನು ಬೇಡ ಅನ್ನಬಾರದು'' ಎನ್ನುತ್ತಾ ಕಾಗದ ಪತ್ರಗಳ ಫೈಲನ್ನು ನನ್ನ ಕೈಯಲ್ಲಿರಿಸಿ ಅತ್ತೆ ಕೊಠಡಿಯ ಹೊರಗೆ ನಡೆದರು.

ನಾನು ಭೂಮಿಯೊಳಗೆ ಕುಸಿಯುತ್ತಿದ್ದೇನೆಯೋ ಎಂದೆನಿಸಿ ಸಹಾಯಕ್ಕಾಗಿ ರುಕಿಯಾಳ ಮುಖ ನೋಡಿದೆ.

**ಸನ್ಮಾರ್ಗ ವಿಶೇಷಾಂಕ**



## ತೆರೆದಿದೆ ಮನೆ ಬಾ... ಓ...

ನನಗೆ ಮದುವೆಯಾದಾಗ ನಾನು ಒಂದು ಸೈಕಲ್ ಶಾಪ್‌ನಲ್ಲಿ ಕೆಲಸಕ್ಕಿದ್ದೆ. ಇದು ಇಪ್ಪತ್ತು ವರ್ಷಗಳ ಹಿಂದಿನ ಮಾತು. ಆಗ ನನಗೆ ಇದ್ದದ್ದು ದಿನಕ್ಕೆ ಮೂವತ್ತು ರೂಪಾಯಿ ಸಂಬಳ. ತಂದೆ ತೀರಿಕೊಂಡಾಗ ಶಾಲೆ ಬಿಟ್ಟವನು ನನ್ನ ಹನ್ನೆರಡನೇ ವಯಸ್ಸಿನಲ್ಲಿ ಇಲ್ಲಿ ಕೆಲಸಕ್ಕೆ ಸೇರಿದ್ದೆ. ಈ ಶಾಪಿನ ಮಾಲಕರು ಒಬ್ಬ ಕ್ರಿಶ್ಚಿಯನ್. ಬಹಳ ಒಳ್ಳೆಯವರು. ಮೊದ ಮೊದಲು ನನಗೆ ಸಂಬಳ ಕೊಡುತ್ತಿರಲಿಲ್ಲ. ನಾನೇನಾದರೂ ಕೇಳಿದರೆ ''ಮೊದಲು ಕೆಲಸ ಕಲಿ, ಆಮೇಲೆ ಸಂಬಳ'' ಎನ್ನುತ್ತಿದ್ದರು. ನನಗೆ ಚೆನ್ನಾಗಿ ಕೆಲಸ ಹೇಳಿ ಕೊಡುತ್ತಿದ್ದರು. ನಾನು ಆರು ತಿಂಗಳು ಕಳೆಯುವುದರಲ್ಲೇ ಚಿಕ್ಕ ಪುಟ್ಟ ಕೆಲಸಗಳನ್ನು ಕಲಿತುಕೊಂಡೆ. ಒಂದು ವರ್ಷವಾಗುವಾಗ ಒಬ್ಬ ಒಳ್ಳೆಯ ಸೈಕಲ್ ಮೆಕ್ಯಾನಿಕ್ ಆಗಿಬಿಟ್ಟೆ. ಪ್ರಾರಂಭದಲ್ಲಿ ಎರಡು ರೂಪಾಯಿ ಸಂಬಳ ಕೊಡುತ್ತಿದ್ದ ಮಾಲಕರು ಮತ್ತೆ ಮೂರು, ಐದು, ಹತ್ತು ಹೀಗೆ ಏರಿಸುತ್ತಾ ಬಂದು ಮದುವೆಯಾಗುವ ಸಮಯದಲ್ಲಿ ಮೂವತ್ತು ರೂಪಾಯಿ ಕೊಡುತ್ತಿದ್ದರು. ನನಗೆ ಒಬ್ಬ ಅಕ್ಕ ಇದ್ದಳು. ತಾಯಿ ನಾವಿರುವ ಮನೆಯನ್ನು ಮಾರಿ, ಅಕ್ಕನಿಗೆ ಮದುವೆ ಮಾಡಿ, ಅಕ್ಕನ ಮನೆ ಸೇರಿಕೊಂಡರು. ಆಗ ನಾನೂ ಅನಿವಾರ್ಯವಾಗಿ ಅಕ್ಕನ ಮನೆ ಯಲ್ಲಿರಬೇಕಾಯಿತು. ನನ್ನ ಸಂಬಳದಲ್ಲಿ ಅರ್ಧವನ್ನು ತಾಯಿಗೆ ಕೊಟ್ಟು ಮಿಕ್ಕಿದ್ದನ್ನು ಜಾಗರೂಕತೆಯಿಂದ ಉಳಿಸಿಕೊಂಡು ಬಂದಿದ್ದೆ.

ನಮ್ಮ ಊರಿನಲ್ಲಿ ಈ ಸೈಕಲ್ ಶಾಪ್‌ಗೆ ಒಳ್ಳೆಯ ಹೆಸರಿತ್ತು. ಅದಕ್ಕೆ ಕಾರಣ ಮಾಲಕರ ವ್ಯಕ್ತಿತ್ವ. ಅವರೊಬ್ಬ ಶಿಸ್ತಿನ ಸಿಪಾಯಿ.

ಸ್ನೇಹದಿಂದ ಎಲ್ಲರೊಂದಿಗೆ ಬೆರೆಯುತ್ತಿದ್ದರು. ಪ್ರೀತಿಯಿಂದ ಮಾತನಾಡುತ್ತಿದ್ದರು. ಸತ್ಯ, ಪ್ರಾಮಾಣಿಕತೆಯೇ ಅವರ  ಬಂಡವಾಳ ವಾಗಿತ್ತು. ಅವರ ಜೊತೆಗೇ ಇದ್ದುದರಿಂದ ಅವರ ಒಳ್ಳೆಯ ಗುಣಗಳನ್ನೆಲ್ಲಾ ನಾನೂ ಮೈಗೂಡಿಸಿಕೊಂಡಿದ್ದೆ. ಆದುದರಿಂದ ನನಗೂ ಊರಲ್ಲಿ ಗೌರವವಿತ್ತು.

ನನ್ನ ಮದುವೆಗೆ ಹಲವು ಸಂಬಂಧಗಳು ಬಂದವು. ನಾನು ಎಂಟನೇ ತರಗತಿ ಓದಿದ್ದ, ಒಂದು ಒಳ್ಳೆಯ ಮನೆತನದ ಹುಡುಗಿಯನ್ನು ನೋಡಿ ಮದುವೆ ಮಾಡಿಕೊಂಡೆ. ನನಗಾಗ ಏನಾಗಿತ್ತೋ! ಕೂಡಿಟ್ಟ ಹಣವನ್ನೆಲ್ಲಾ ಮದುವೆಗೆ ಖರ್ಚು ಮಾಡಿದ್ದೆ. ಮದುವೆ ಝೂಂ... ಝೂಂ ಆಗಿ ನಡೆಯಿತು. ಮದುವೆಯಾಗಿ ಆರು ತಿಂಗಳಲ್ಲಿ ನನ್ನ ತಾಯಿಯೂ ತೀರಿಕೊಂಡಳು. ಈಗ ನನ್ನ ಕೈ ಸಂಪೂರ್ಣ ಖಾಲಿ ಯಾಗಿತ್ತು. ನನ್ನವಳಿಗೆ ಆಗ ನಮ್ಮದೇ ಆದ ಬೇರೆಯೇ ಮನೆಯೊಂದು ಬೇಕೆಂಬ ಆಲೋಚನೆ ಹುಟ್ಟಿತು. ದಿನವೂ ಮನೆಗೆ ಹೋದಾಗ ಇದೇ ಮಾತು. ಸಿಟ್ಟು, ಸಿಡುಕು ಪ್ರಾರಂಭವಾಯಿತು. ಕೈಯಲ್ಲಿ ದುಡ್ಡಿಲ್ಲದೆ ಮನೆ ಹೇಗೆ ಕಟ್ಟಿಸುವುದು? ಎಂದರೆ, ಬಾಡಿಗೆ ಮನೆಯಾದರೂ ಸರಿ, ನಮ್ಮದೂಂತ ಒಂದು ಇರಲಿ ಎಂದು ಅವಳು ತಲೆ ತಿನ್ನತೊಡಗಿದಳು. ಎಷ್ಟಾದರೂ ಅಕ್ಕನ ಮನೆಯಲ್ಲಿರುವುದು ಸರಿಯಲ್ಲ ಎಂಬುದು ನನಗೂ ತಿಳಿದಿತ್ತು. ಆದರೆ ದುಡ್ಡು ಬೇಕಲ್ಲ! ಸರಿಯಿದ್ದ ತಲೆ ಹಾಳಾಯಿತು. ಚಿಂತೆ ಯೇನೆಂದರಿಯದ ನನಗೆ ಚಿಂತೆ ಹತ್ತಿತು. ಇವಳ ಕಾಟ ತಾಳಲಾದರೆ ಒಂದು ದಿನ ಮಾಲಕರಲ್ಲಿ ವಿಷಯ ಪ್ರಸ್ತಾಪಿಸಿದೆ. ಐದು ನೂರು ರೂಪಾಯಿ ಸಾಲ ಕೊಟ್ಟು ಹತ್ತು ರೂಪಾಯಿ ಸಂಬಳ ಜಾಸ್ತಿ ಮಾಡಿ, ''ಮನೆ ಮಾಡು'' ಎಂದರು. ಒಂದು ಪುಟ್ಟ ಮನೆ ಮಾಡಿದೆ. ಪಾತ್ರೆ, ಪಗಡ, ಬಟ್ಟೆ ಎಂದು ಹಣವೆಲ್ಲಾ ಖಾಲಿಯಾಯಿತು. ಜೀವನದಲ್ಲಿ ಮೊತ್ತ ಮೊದಲ ಬಾರಿಗೆ ನಾನು ಸಾಲಗಾರನಾಗಿಬಿಟ್ಟಿದ್ದೆ. ಬೇರೆ ಮನೆ ಮಾಡಿ ವರ್ಷ ಕಳೆಯುವುದರೊಳಗೆ ನನಗೊಂದು ಗಂಡು ಮಗುವಾಯಿತು. ದಿನದಿಂದ ದಿನಕ್ಕೆ ನನ್ನ ಖರ್ಚು ಏರತೊಡಗಿತು. ಬರುವ ಸಂಬಳದಲ್ಲಿ ಜೀವನ ಸಾಗಿಸುವುದೇ ಕಷ್ಟವಾಗತೊಡಗಿತು.

ಇಂತಹ ಸಮಯದಲ್ಲಿಯೇ ನನ್ನ ಮಾಲಕರ ಆರೋಗ್ಯ ಹದಗೆಡತೊಡಗಿದ್ದು! ಅವರು ಅಂಗಡಿಗೆ ಬರುವುದೇ ಕಡಿಮೆ ಮಾಡತೊಡಗಿದರು. ಕ್ರಮೇಣ ಅವರು ಹಾಸಿಗೆ ಹಿಡಿದು ಬರುವುದನ್ನೇ ನಿಲ್ಲಿಸಿಬಿಟ್ಟರು. ಇಡೀ ಅಂಗಡಿಯನ್ನು ಈಗ ನಾನೊಬ್ಬನೇ ನಿರ್ವಹಿಸುತ್ತಿದ್ದೆ. ದಿನಾ ರಾತ್ರಿ ಅವರ ಮನೆಗೆ ಹೋಗಿ ಲೆಕ್ಕ ಕೊಡುತ್ತಿದ್ದೆ. ಅವರಿಗೂ ಈ ಅಂಗಡಿಯಿಂದಲೇ ಜೀವನ ಸಾಗಬೇಕಿತ್ತು.

ಒಂದು ರಾತ್ರಿ ನಾನು ಅವರ ಮನೆಗೆ ಹೋದಾಗ ನನ್ನನ್ನು ತನ್ನ ಮಂಚದ



ಬಳಿ ಕುಳ್ಳಿರಿಸಿಕೊಂಡರು ''ನೋಡಪ್ಪಾ, ನನ್ನ ಅನಾರೋಗ್ಯ ದಿನದಿಂದ ದಿನಕ್ಕೆ ಹೆಚ್ಚಾಗ್ತಾ ಇದೆ. ಇನ್ನು ನನಗೆ ಅಂಗಡಿಗೆ ಬರಲು ಸಾಧ್ಯವಾಗಲಿಕ್ಕಿಲ್ಲ. ನನ್ನ ಆರ್ಥಿಕ ಸ್ಥಿತಿ ನಿನಗೆ ಗೊತ್ತಿದೆ. ಸಿಕ್ಕಿದ ದುಡ್ಡು ಮದ್ದಿಗೇ ಸಾಕಾಗ್ತಾ ಇಲ್ಲ. ಆದುದರಿಂದ ಅಂಗಡಿ ಯನ್ನು ಮಾರಬೇಕೂಂತ ತೀರ್ಮಾನಿಸಿದ್ದೇನೆ'' ಎಂದರು. ನನ್ನ ಎದೆ ಧಸಕ್ಕೆಂದಿತು. ನಾನು ಮಾತನಾಡಲಿಲ್ಲ. ನನ್ನ ಮನಸ್ಸನ್ನು ಓದಿದವರಂತೆ ಅವರು ಮತ್ತೆ ಹೇಳಿದರು ''ನಿನ್ನ ಕಷ್ಟ ನನಗೆ ಅರ್ಥವಾಗ್ತಾ ಇದೆ. ಆದರೆ ನನಗೆ ಬೇರೆ ದಾರಿಯೇ ಇಲ್ಲ'' ಎಂದು.

ಅವರು ಪತ್ರಿಕ್ರಿಯೆಗಾಗಿ ನನ್ನ ಮುಖವನ್ನೇ ನೋಡುತ್ತಿದ್ದರು. ನನಗೆ ಏನು ಹೇಳಬೇಕೋ ತಿಳಿಯಲಿಲ್ಲ. ನನ್ನ ಸಾಲ, ಮನೆಯ ಚಿತ್ರಣ ಕಣ್ಣ ಮುಂದೆ ಸುಳಿಯತೊಡಗಿತು.

''ಏನು ಯೋಚಿಸ್ತಿದ್ದಿಯಾ?''

''ಏನಿಲ್ಲ...''

''ನೀನು ನಿನ್ನ ಬಗ್ಗೆಯೇ ಯೋಚಿಸ್ತಿದ್ದೀಯಲ್ಲವಾ..?''

''ಹಾಗಲ್ಲ.., ಸೈಕಲ್ ರಿಪೇರಿ ಬಿಟ್ಟು ಬೇರೇನೂ ಕೆಲಸ ನನಗೆ ಗೊತ್ತಿಲ್ಲ. ಮುಂದೇನೂಂತ?''

''ಒಂದು ಕೆಲಸ ಮಾಡು. ಅಂಗಡಿಯನ್ನು ನೀನೇ ಖರೀದಿಸಿಬಿಡು''

ನಾನು ಒಮ್ಮೆಲೇ ಬೆಚ್ಚಿ ಅವರ ಮುಖ ನೋಡಿದೆ.

''ಬೇರೆಯವರು ಕೊಡುವ ಅರ್ಧ ಬೆಲೆ ನೀನು ಕೊಟ್ಟರೆ ಸಾಕು... ನೀನೇ ಅಭಿವೃದ್ಧಿಪಡಿಸಿದ ಅಂಗಡಿಯಲ್ಲವಾ ಅದು. ನನ್ನಲ್ಲಿದ್ದಿದ್ದರೆ ಹಾಗೇ ಕೊಡುತ್ತಿದ್ದೆ'' ಎಂದರು.

''ಆದರೂ ಅಷ್ಟೊಂದು ಹಣ...?''

''ನೋಡು, ಯೋಚಿಸಿ ನೋಡು. ನಿನಗೆ ಬೇಕಾದಷ್ಟು ಗೆಳೆಯರಿದ್ದಾರೆ. ಪ್ರಯತ್ನಿಸಿದರೆ ಕಷ್ಟವಾಗಲಿಕ್ಕಿಲ್ಲ''

ನನಗೆ ಆಮೇಲೆ ಇದೇ ಯೋಚನೆಯಾಗತೊಡಗಿತು. ಏನಾದರೂ ಮಾಡಬೇಕು... ಹೇಗಾದರೂ ಮಾಡಬೇಕು... ಅಂಗಡಿ ಕೈಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು... ಆದರೆ ಅಷ್ಟೊಂದು ಹಣ?

ಅದೇ ಸಮಯದಲ್ಲಿ ನನ್ನ ಆತ್ಮೀಯ ಗೆಳೆಯನೊಬ್ಬ ಗಲ್ಫ್‌ನಿಂದ ಮರಳಿದ್ದ. ಆತ ಬಿಂದಾಸ್ ಜನ. ಕೈಯಲ್ಲಿದ್ದರೆ ಖರ್ಚು ಮಾಡುವುದರಲ್ಲಿ, ಕೊಡುವುದರಲ್ಲಿ ಹಿಂದೆ - ಮುಂದೆ ನೋಡುವವನಲ್ಲ. ಒಂದು ಬೆಳಗ್ಗೆ ಸಮಯ ನೋಡಿ ಅವನ ಮನೆಗೆ ನಡೆದೆ. ಆತ ಗಲ್ಫ್ ಕೆಲಸ ಬಿಟ್ಟು ಬಂದಿದ್ದ. ಕೈಯಲ್ಲಿ ದುಡ್ಡಿತ್ತು. ಕೇಳಿದ

ತಕ್ಷಣ ಕೇಳಿದಷ್ಟನ್ನು ಕೊಟ್ಟುಬಿಟ್ಟ. ನಾನು ಒಂದು ಬೆಲೆ ಮಾಡಿ ಖರೀದಿಸಿ ಸೈಕಲ್ ಶಾಪನ್ನು ನನ್ನದಾಗಿಸಿಕೊಂಡಿದ್ದೆ.

ಅಂದಿನಿಂದ ನನ್ನ ಅದೃಷ್ಟ ಖುಲಾಯಿಸಿತು ಎನ್ನಬೇಕು. ನಾನು ಮುಟ್ಟಿದ್ದೆಲ್ಲವೂ ಚಿನ್ನವಾಗತೊಡಗಿತು. ಅಂಗಡಿಯಲ್ಲಿ ಒಳ್ಳೆಯ ಕೆಲಸವೂ ಬರುತ್ತಿತ್ತು. ಒಂದೇ ವರ್ಷದಲ್ಲಿ ನಾನು ಅಂಗಡಿಗೆ ಮಾಡಿದ್ದ ಸಾಲವನ್ನು ತೀರಿಸಿದ್ದೆ. ಮತ್ತೊಂದು ವರ್ಷದಲ್ಲಿ ಒಂದು ಜಾಗ ಖರೀದಿಸಿದೆ. ಮತ್ತೆರಡು ವರ್ಷಗಳಲ್ಲಿ ಒಂದು ಪುಟ್ಟ ಮನೆಯನ್ನೂ ಕಟ್ಟಿಸಿಕೊಂಡೆ. ಈಗ ನನಗೆ ಮೂರು ಮಕ್ಕಳಿದ್ದವು. ಮೂರೂ ಗಂಡು. ನನ್ನವಳು ಒಂದು ಹೆಣ್ಣು ಮಗು ಬೇಕೆಂಬ ಆಸೆಯ ಬೆನ್ನು ಹತ್ತಿ ಮತ್ತೆ ಗರ್ಭ ಧರಿಸಿದ್ದಳು.

ನನಗೆ ಊರಿನಲ್ಲಿ ಈಗ ಒಳ್ಳೆಯ ಹೆಸರಿತ್ತು. ಎಲ್ಲರೂ ನನ್ನನ್ನು ಗೌರವದಿಂದ ಕಾಣುವವರೇ. ಊರಿನ ಮಸೀದಿ ಕಮಿಟಿ, ಸಂಘ ಸಂಸ್ಥೆಗಳ ಕಾರ್ಯಕಾರಿಣಿಯಲ್ಲೂ ನನ್ನನ್ನು ಸೇರಿಸಿಕೊಂಡಿದ್ದರು. ಒಂದೆರಡು ಸಲ ಸಂಘದ ಅಧ್ಯಕ್ಷನನ್ನಾಗಿಯೂ ಆರಿಸಿದ್ದರು. ಊರಿನ ಯಾವುದೇ ಕೆಲಸ, ಕಾರ್ಯದಲ್ಲೂ ನಾನೀಗ ಹಾಜರಿರುತ್ತಿದ್ದೆ.

ವರ್ಷಗಳು ಕಳೆದಂತೆ, ಊರು ಅಭಿವೃದ್ಧಿ ಹೊಂದಿದಂತೆ ಜನರೂ ಬದಲಾಗ ತೊಡಗಿದರು. ಜನರಿಗೆ ಸೈಕಲ್‌ನ ಬಗ್ಗೆ ಕೀಳರಿಮೆ ಹುಟ್ಟತೊಡಗಿತು. ಸ್ಕೂಟರ್, ಬೈಕು, ಕಾರುಗಳು ರಸ್ತೆ ತುಂಬಾ ಓಡಾಡತೊಡಗಿದವು. ನನ್ನ ವ್ಯಾಪಾರ ಕುಸಿಯಲಾರಂಭಿಸಿತು. ಈ ಕುಸಿತ ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿತು. ನಾನು ಕಂಗಾಲಾಗಿಬಿಟ್ಟಿದ್ದೆ. ಮನೆ ಖರ್ಚಿಗೂ ಪರದಾಡತೊಡಗಿದೆ. ನನ್ನ ಈ ಕುಸಿತವನ್ನು ಊರೆಲ್ಲ ಗಮನಿಸತೊಡಗಿತ್ತು. ಮೊದಲಿನ ಹೆಸರು, ಗೌರವ ಕಡಿಮೆಯಾಗತೊಡಗಿತ್ತು. ನಿರ್ವಾಹವಿಲ್ಲದೆ ನಾನು ಈಗ ಒಂದೊಂದೇ ಸೈಕಲನ್ನು ಮಾರತೊಡಗಿದೆ.

ಮೂವತ್ತೈದು ಸೈಕಲ್‌ಗಳಲ್ಲಿ ಈಗ ನನ್ನಲ್ಲಿ ಹನ್ನೆರಡು ಸೈಕಲ್‌ಗಳು ಮಾತ್ರ ಉಳಿದಿದ್ದವು. ಅವೂ ಬಾಡಿಗೆ ಇಲ್ಲದೆ ತುಕ್ಕು ಹಿಡಿಯಲಾರಂಭಿಸಿದ್ದವು.

ಒಂದು ದಿನ, ಭವಿಷ್ಯವನ್ನು ನೆನೆದು ಚಿಂತಾಕ್ರಾಂತನಾಗಿ ಕುಳಿತಿದ್ದ ಸಮಯ. ಗಲ್ಫ್ ಗೆಳೆಯ ಹಾಜರಾಗಿದ್ದ. ಬಹಳ ದಿನಗಳನಂತರ ಬಂದ ಗೆಳೆಯನನ್ನು ನೋಡಿ ಸಂತೋಷವಾಗಿತ್ತು. ನನ್ನ ಕಷ್ಟ, ನೋವುಗಳನ್ನೆಲ್ಲಾ ಇವನಲ್ಲಿ ಹೇಳಿ ಮನಸ್ಸು ಹಗುರ ಮಾಡಿಕೊಳ್ಳಬೇಕು, ನನ್ನ ಸಮಸ್ಯೆಗೆ ಏನಾದರೂ ಪರಿಹಾರವಿದೆಯೇ ಎಂದು ಚರ್ಚಿಸ ಬೇಕು ಎಂದು ಯೋಚಿಸುತ್ತಾ ಆತನನ್ನು ಸ್ವಾಗತಿಸಿದೆ. ಆತ ಅಲ್ಲೇ ಇದ್ದ ಸ್ಟೂಲಿನಲ್ಲಿ ಕುಳಿತ. ಬಾಡಿದ ಮುಖದಲ್ಲಿ ಚಿಂತೆಯ ಗೆರೆ ಎದ್ದು ಕಾಣುತ್ತಿತ್ತು. ''ಏನು?'' ಕೇಳಿದೆ. ''ಏನಿಲ್ಲ, ಒಂದು ನೂರು ರೂಪಾಯಿ ಬೇಕಾಗಿತ್ತು'' ಎಂದ. ''ಏನು? ಟೆನ್‌ಷನ್‌ನಲ್ಲಿ ಇದ್ದ ಹಾಗಿದ್ದೀಯಾ? ಏನು ವಿಷಯ?'' ಎಂದು ಬಾಯಿ ಬಿಡಿಸಲು ನೋಡಿದೆ.



''ಅದೆಲ್ಲ ಇನ್ನೊಮ್ಮೆ ಸಿಕ್ಕಿದಾಗ ಹೇಳುತ್ತೇನೆ'' ಎಂದು ಎದ್ದು ನಿಂತು ಅವಸರಪಡಿಸಿದ. ಏನೋ ದುಡ್ಡು ಮರೆತುಬಿಟ್ಟು ಬಂದಿರಬೇಕೆಂದು ಊಹಿಸಿ ಮನೆ ಖರ್ಚಿಗೆಂದು ಇಟ್ಟಿದ್ದ ನೂರು ರೂಪಾಯಿಯನ್ನು ತೆಗೆದುಕೊಟ್ಟೆ.

ವಾರ ಬಿಟ್ಟು ಬರುತ್ತೇನೆ ಎಂದು ಹೊರಟು ಹೋಗಿದ್ದ ಆಸಾಮಿ ಮತ್ತೆ ತಿಂಗಳು ಕಳೆದರೂ ಬರಲೇ ಇಲ್ಲ. ನಾನೀಗ ಹತ್ತು ರೂಪಾಯಿಗೂ ಪರದಾಡುತ್ತಿದ್ದೆ. ಆ ನೂರು ರೂಪಾಯಿ ಸಿಕ್ಕಿದ್ದರೆ ನನಗೀಗ ಲಾಟರಿ ಸಿಕ್ಕಿದಷ್ಟೇ ಸಂತೋಷವಾಗುತ್ತಿತ್ತು. ನಾನು ಹೀಗೆ ಕಷ್ಟದಲ್ಲಿರುವಾಗ ಒಂದು ದಿನ ಮತ್ತೆ ಆತ ಪ್ರತ್ಯಕ್ಷನಾದ. ಅಂದು ಅವನಿಗೆ ಒಂದು ಲೋಟ ಕಾಫಿ ತರಿಸಿ ಕೊಡಲೂ ನನ್ನಲ್ಲಿ ಹಣವಿರಲಿಲ್ಲ. ಆತ ಬಂದವನೇ ''ನಾನೊಂದು ದೊಡ್ಡ ಸಮಸ್ಯೆಯಲ್ಲಿದ್ದೇನೆ. ನನಗೆ ಸ್ವಲ್ಪ ಸಹಾಯ ಮಾಡುತ್ತೀಯಾ'' ಎಂದು ಕೇಳಿದ. ''ನನ್ನಿಂದ ಆಗುವಂಥದ್ದಾದರೆ ಖಂಡಿತಾ ಮಾಡುತ್ತೇನೆ. ಏನು ಹೇಳು'' ಎಂದೆ. ''ನನ್ನ ಹೆಂಡತಿಗೆ ಹೆರಿಗೆಯಾಗಿದೆ. ಹತ್ತು ದಿನ ಆಯಿತು. ಆಸ್ಪತ್ರೆ ಯಲ್ಲಿದ್ದಾಳೆ. ಶಸ್ತ್ರಚಿಕಿತ್ಸೆಯಾಗಿದೆ. ನಿನ್ನೆ ಡಿಸ್ಚಾರ್ಜ್ ಮಾಡಬೇಕಿತ್ತು. ಕೈಯಲ್ಲಿ ದುಡ್ಡಿಲ್ಲ. ಏನೆಲ್ಲ ಪ್ರಯತ್ನ ಮಾಡಿದೆ. ಸಾಧ್ಯವಾಗಲಿಲ್ಲ. ಈವತ್ತು ಹೇಗಾದರೂ ಮಾಡಿ ಡಿಸ್ಚಾರ್ಜ್ ಮಾಡಲೇ ಬೇಕು. ಇಲ್ಲದಿದ್ದರೆ ದಿನದಿಂದ ದಿನಕ್ಕೆ ಬಿಲ್ಲು ಜಾಸ್ತಿಯಾಗ್ತಾ ಹೋಗ್ತದೆ. ಆಸ್ಪತ್ರೆಯಿಂದ ನಿನ್ನೆ ಬೆಳಿಗ್ಗೆ 'ಈಗ ಬರುತ್ತೇನೆ' ಎಂದು ಹೇಳಿ ಬಂದಿದ್ದೇನೆ. ಇನ್ನೂ ಹೋಗಿಲ್ಲ. ನೀನು ನನಗೆ ಹೇಗಾದರೂ ಮಾಡಿ ಹತ್ತು ಸಾವಿರ ರೂಪಾಯಿ ಸಾಲ ಕೊಡಬೇಕು. ಎರಡು ತಿಂಗಳಲ್ಲಿ ಹಿಂತಿರುಗಿಸುತ್ತೇನೆ'' ಎಂದ.

ನನಗೆ ಏನು ಹೇಳಬೇಕೋ ತಿಳಿಯಲಿಲ್ಲ. ಹತ್ತು ಸಾವಿರ ಬಿಟ್ಟು ಹತ್ತು ರೂಪಾಯಿ ನನ್ನಲ್ಲಿರಲಿಲ್ಲ. ಏನಾಯಿತು ಇವನಿಗೆ? ಗಲ್ಫ್‌ನಿಂದ ಬರುವಾಗ ಇವನಲ್ಲಿ ಎಷ್ಟೊಂದು ದುಡ್ಡಿತ್ತು. ಎಲ್ಲ ಏನು ಮಾಡಿದ? ಎಂದು ಮನಸ್ಸಲ್ಲೇ ಯೋಚಿಸುತ್ತಾ ಕೇಳಿದೆ ''ಏನು ಮಾಡಿದೆ ದುಡ್ಡನ್ನೆಲ್ಲಾ?''

''ಎರಡು ಬಸ್ಸು ತಗೊಂಡೆ. ಒಂದು ಬೋಟು ತಗೊಂಡೆ. ಯಾವುದೂ ಸರಿಯಾಗಲಿಲ್ಲ. ತುಂಬಾ ನಷ್ಟವಾಯಿತು. ಎಲ್ಲಾ ಕೈಬಿಟ್ಟು ಹೋಯಿತು. ಖರ್ಚಿಗೂ ಇಲ್ಲದ ಸ್ಥಿತಿ ಬಂದುಬಿಟ್ಟಿತು. ಏನು ಮಾಡಲೂ ಸಾಧ್ಯವಾಗುತ್ತಿಲ್ಲ. ಮತ್ತೆ ಗಲ್ಫ್‌ಗೆ ಹೋಗುವಾ ಎಂದು ಯೋಚಿಸುತ್ತಿದ್ದೇನೆ'' ಎಂದು ಹೇಳಿದ.

ನಾನು ನನ್ನ ಕಷ್ಟಗಳನ್ನೆಲ್ಲಾ ವಿವರಿಸಿದೆ. ''ಹತ್ತು ಸಾವಿರ ಬಿಡು ಮನೆಯಲ್ಲಿ ಒಂದು ಹೊತ್ತಿನ ಗಂಜಿಗೂ ತೊಂದರೆಯಾಗಿದೆ. ನೀನು ನನಗೆ ಸಹಾಯ ಮಾಡಿದ್ದಿ. ಆದರೆ ನಾನು ಇಂದು ನಿನಗೆ ಸಹಾಯ ಮಾಡುವ ಸ್ಥಿತಿಯಲ್ಲಿಲ್ಲ'' ಎಂದೆ.

''ನಿನ್ನಲ್ಲಿಲ್ಲದಿದ್ದರೆ ಯಾರಿಂದಲಾದರೂ ತೆಗೆದುಕೊಡು. ನನ್ನ ಮಾನ ಉಳಿಸು''

ಎಂದು ಅಂಗಲಾಚಿದ.

ಈ ಅಂಗಡಿ ಖರೀದಿಸಲು ದುಡ್ಡು ಸಾಲ ಕೇಳಿದಾಗ ಒಂದು ಮಾತೂ ವಿಚಾರಿಸದೆ ತಕ್ಷಣ ತೆಗೆದುಕೊಟ್ಟಿದ್ದ ಗೆಳೆಯನಿಗೆ ಹೇಗೆ ಸಹಾಯ ಮಾಡುವುದು? ಎಂದು ನಾನೂ ಯೋಚಿಸತೊಡಗಿದೆ. ಹತ್ತು ಸಾವಿರ ಸಾಲ ಕೊಡುವಂತಹ ಯಾವ ಗೆಳೆಯನೂ ನನ್ನ ನೆನಪಿಗೆ ಬರಲಿಲ್ಲ. ನನಗೆ ಸೈಕಲ್ ಬಿಡಿ ಭಾಗಗಳನ್ನು ಪೂರೈಸುತ್ತಿದ್ದ ಒಬ್ಬ ವ್ಯಕ್ತಿ ಇದ್ದ. ಆತನಲ್ಲಿ ಕೇಳಿದರೆ ಹೇಗೆ? ಎಂದು ಯೋಚಿಸಿದೆ. ಆದರೆ ಹತ್ತು ಸಾವಿರ? ಇಷ್ಟೊಂದು ದುಡ್ಡು ಅವನಲ್ಲಿರಬಹುದೇ? ಆತನಲ್ಲಿಲ್ಲದಿದ್ದರೆ ಬೇರೆಯವರಲ್ಲಿ ತೆಗೆದು ಕೊಡುವಷ್ಟು ಆತ ಸಮರ್ಥ ಎಂಬ ನಂಬಿಕೆ ನನಗಿತ್ತು. ಆದರೆ ನನ್ನ ಈಗಿನ ಆರ್ಥಿಕ ಸ್ಥಿತಿ ತಿಳಿದಿದ್ದ ಆತ ಕೊಡಬಹುದೇ? ಎಂಬ ಸಂಶಯ ಕಾಡತೊಡಗಿತು. ಆದರೂ ಒಮ್ಮೆ ಪ್ರಯತ್ನಿಸಬಾರದೇಕೆ? ಪ್ರಯತ್ನಿಸಲಿಲ್ಲ ಎಂಬ ಅಪವಾದವಾದರೂ ತಪ್ಪುತ್ತದಲ್ಲಾ! ಎಂದು ತೀರ್ಮಾನಿಸಿ ಹೇಳಿದೆ. ''ನನಗೆ ಬಿಡಿಭಾಗ ಪೂರೈಸುವ ಒಬ್ಬ ವ್ಯಕ್ತಿ ಇದ್ದಾನೆ. ಅವನಲ್ಲಿ ಒಮ್ಮೆ ಪ್ರಯತ್ನಿಸಿ ನೋಡುವಾ. ಇಲ್ಲಿಂದ ಐದು ಕಿ.ಮೀ. ದೂರವಿದೆ. ಇದಲ್ಲದೆ ನನಗೆ ಬೇರೆ ದಾರಿಯೇ ತೋಚುವುದಿಲ್ಲ'' ಅಷ್ಟು ಹೇಳಿದ್ದೇ ತಡ ''ಹೋಗುವಾ'' ಎನ್ನುತ್ತಾ ಆತ ಎದ್ದು ನಿಂತ. ಇಬ್ಬರೂ ಹೊರಟೆವು. ಆತ ಸಿಕ್ಕಿದ. ನನ್ನ ಗೆಳೆಯನ ಕಷ್ಟವನ್ನೆಲ್ಲಾ ಅವನಲ್ಲಿ ತೋಡಿಕೊಂಡೆ. ಹೇಗಾದರೂ ಮಾಡಿ ಹೊಂದಿಸಿಕೊಡಬೇಕೆಂದು ಬೇಡಿಕೊಂಡೆ. ''ಅಷ್ಟೊಂದು ಹಣ ನನ್ನಲ್ಲಿಲ್ಲ. ನಿಮಗೆ ಹಾಗೆ ಅಗತ್ಯ ಇದ್ದರೆ ಇಲ್ಲೊಬ್ಬ ಬಡ್ಡಿಗೆ ಕೊಡುವವರಿದ್ದಾರೆ. ಅವರಲ್ಲಿ ವಿಚಾರಿಸಿ, ನಾನೂ ಹೇಳುತ್ತೇನೆ'' ಎಂದ. ಮೂವರೂ ಸೇರಿ ಅವನ ಬಳಿ ಹೋದೆವು. ಅವರಿಬ್ಬರಿಗೂ ನನ್ನ ಗೆಳೆಯನ ಪರಿಚಯವಿಲ್ಲದ ಕಾರಣ ಬಡ್ಡಿಯವ ಗೆಳೆಯನಿಗೆ ಸಾಲ ನೀಡಲು ಒಪ್ಪಲಿಲ್ಲ. ಬಿಡಿಭಾಗ ಪೂರೈಸುವವನಿಗೆ ನನ್ನ ಪರಿಚಯವಿದ್ದುದರಿಂದ ಅವನ ಶಿಫಾರಸಿನ ಮೇಲೆ ನನಗೆ ಬೇಕಾದರೆ ಕೊಡುತ್ತೇನೆ ಎಂದ. ''ನನ್ನ ಹೆಸರಲ್ಲಾದರೆ ನನ್ನ ಹೆಸರಿನಲ್ಲಿ... ಕೊಡಿ'' ಎಂದೆ. ನನ್ನ ಹೆಸರಲ್ಲೇ ಹತ್ತು ಸಾವಿರ ಕೊಟ್ಟ. ತಿಂಗಳಿಗೆ ಐದು ನೂರು ರೂಪಾಯಿ ಬಡ್ಡಿ. ಬಡ್ಡಿಯನ್ನು ಪ್ರತಿ ತಿಂಗಳು ಪಾವತಿಸಬೇಕು. ಮೂರು ತಿಂಗಳೊಳಗೆ ಅಸಲನ್ನು ಕೊಡಬೇಕು. ನಾವು ಒಪ್ಪಿದೆವು. ನಮಗೆ ಹೊಸ ಜೀವ ಬಂದಂತಾಗಿತ್ತು. ಗೆಳೆಯ ದುಡ್ಡು ತೆಗೆದುಕೊಂಡು ಅಲ್ಲಿಂದಲೇ ಆಸ್ಪತ್ರೆಯತ್ತ ಓಟಕ್ಕಿತ್ತ. ಗೆಳೆಯನಿಗೆ ನೆರವಾದ ಖುಷಿಯೊಂದಿಗೆ ನಾನು ಅಂಗಡಿಗೆ ನಡೆದೆ.

ಇದಾಗಿ ಈಗ ನಾಲ್ಕು ತಿಂಗಳು ಕಳೆದಿದೆ. ಎರಡು ತಿಂಗಳ ಬಡ್ಡಿಯನ್ನು ಗೆಳೆಯ ಕ್ಲಪ್ತ ಸಮಯಕ್ಕೆ ಪಾವತಿಸಿದ್ದಾನೆ. ಮೂರನೇ ತಿಂಗಳು ಬಡ್ಡಿಯ ಜೊತೆಗೆ ಅಸಲನ್ನೂ ಕೊಡಬೇಕಾಗಿತ್ತು. ಆದರೆ ಗೆಳೆಯನ ಪತ್ತೆಯೇ ಇಲ್ಲ. ಮೂರು ತಿಂಗಳು ಕಳೆದ



ಮರುದಿನವೇ ಬಿಡಿಭಾಗಗಳ ಪೂರೈಕೆದಾರ ಹಣಕ್ಕಾಗಿ ನನ್ನ ಅಂಗಡಿಯ ಮುಂದೆ ಪ್ರತ್ಯಕ್ಷನಾದ. ನಾನು ಅಕ್ಕಪಕ್ಕದ ಅಂಗಡಿಯವರಿಂದೆಲ್ಲಾ ನೂರು - ಇನ್ನೂರು ಸಾಲ ಪಡೆದು ಐನೂರು ರೂಪಾಯಿ ಬಡ್ಡಿ ಹಣವನ್ನು ಕೊಟ್ಟು ಅಸಲನ್ನು ಇನ್ನೆರಡು ದಿನಗಳಲ್ಲಿ ತಲುಪಿಸುವುದಾಗಿ ಹೇಳಿ ಒಪ್ಪಿಸಿದೆ. ಆತ ಮುಖ ಊದಿಸಿಕೊಂಡು ಹೊರಟುಹೋದ. ಮಧ್ಯಾಹ್ನ ಬಾಗಿಲು ಹಾಕಿ ಗೆಳೆಯನ ಮನೆಯತ್ತ ನಡೆದೆ. ''ಆತ ಊರಲ್ಲಿಲ್ಲ, ಬರಲು ಒಂದು ವಾರ ತಗಲಬಹುದು'' ಎಂದಳು ಅವನ ಹೆಂಡತಿ. ನನಗೆ ಪಿಕಲಾಟಕ್ಕಿಟ್ಟು ಕೊಂಡಿತು. ಎರಡು ದಿನಗಳಲ್ಲಿ ಅಸಲನ್ನು ಕೊಡುತ್ತೇನೆ ಎಂದು ಮಾತು ಕೊಟ್ಟಾಗಿದೆ. ಹೇಗೆ ಕೊಡುವುದು? ಕೊಡದಿದ್ದರೆ ಆತ ಮತ್ತೆ ಬರುತ್ತಾನೆ! ಎಂದು ಯೋಚಿಸಿ ಮತ್ತೆ ಬಿಡಿಭಾಗ ಪೂರೈಸುವವನ ಬಳಿ ಹೋದೆ. ದುಡ್ಡು ಪಡೆದುಕೊಂಡವ ಊರಲ್ಲಿಲ್ಲದಿರುವುದ ರಿಂದ ನನಗೆ ಇನ್ನೂ ಒಂದು ತಿಂಗಳ ಸಮಯ ಕೊಡಬೇಕಾಗಿಯೂ ಕೇಳಿಕೊಂಡೆ. ಆತ ನನ್ನನ್ನು ಬಡ್ಡಿಯವನ ಬಳಿ ಕರೆದುಕೊಂಡು ಹೋದ. ವಿಷಯವೆಲ್ಲ ತಿಳಿಸಿದ. ಒಂದು ತಿಂಗಳ ಸಮಯವನ್ನು ಪಡೆದುಕೊಟ್ಟ. ಆದರೆ ''ಇನ್ನು ಒಂದು ತಿಂಗಳೊಳಗೆ ಕೊಡದಿದ್ದರೆ ಪರಿಣಾಮ ನೆಟ್ಟಗಿರಲಿಕ್ಕಿಲ್ಲ'' ಎಂದು ಬಡ್ಡಿಯವ ಎಚ್ಚರಿಸಿದ. ಅವನ ಒರಟು ಧ್ವನಿಗೆ ನನ್ನ ಕರುಳು ಕಂಪಿಸಿತು.

ವಾರ ಕಳೆದು ಮತ್ತೆ ನಾನು ಗೆಳೆಯನನ್ನು ಹುಡುಕಿ ಮನೆಗೆ ಹೋದೆ. ಆತ ಬಂದಿರಲಿಲ್ಲ. ''ಯಾವಾಗ ಬರುತ್ತಾರೋ ಗೊತ್ತಿಲ್ಲ'' ಎಂದಳು ಮಡದಿ. ಅಂದಿನಿಂದ ಪ್ರತಿದಿನ ಗೆಳೆಯನನ್ನು ಹುಡುಕಿ ಅಲೆಯುವುದೇ ನನಗೆ ಕೆಲಸವಾಯಿತು. ಅವನ ಹುಡುಕಾಟಕ್ಕೆ ದಿನಕ್ಕೆ ಹತ್ತು ರೂಪಾಯಿ ತೆಗೆದಿಡಬೇಕಾದಂತಹ ಸ್ಥಿತಿ ಬಂತು.

ಒಂದು ದಿನ ನಾನು ಹೋದಾಗ ಆತ ಮನೆಯಲ್ಲಿಯೇ ಇದ್ದ. ಆತನನ್ನು ಹೊರಗೆ ಕರೆದು ವಿಷಯವನ್ನೆಲ್ಲ ತಿಳಿಸಿದೆ. ಇನ್ನು ಒಂದು ವಾರದೊಳಗೆ ಅಸಲು, ಬಡ್ಡಿ ಕೊಡದಿದ್ದರೆ ಆತ ನನ್ನ ಅಂಗಡಿಗೇ ಬರಬಹುದು, ಅಲ್ಲಿ ಏನೂ ನಡೆಯಬಹುದು, ಅವನಲ್ಲಿ ಗೂಂಡಾಗಳ ಗುಂಪೇ ಇದೆ ಎಂದು ಹೆದರಿಸಿದೆ. ಆತ ವಾರದೊಳಗೆ ತಾನೇ ಅಲ್ಲಿಗೆ ಹೋಗಿ ಹಣ ಪಾವತಿಸುವುದಾಗಿ ಆಶ್ವಾಸನೆಯಿತ್ತ. ನಾನು ನೆಮ್ಮದಿಯ ನಿಟ್ಟುಸಿರು ಬಿಟ್ಟೆ.

ವಾರ ಕಳೆದಿತ್ತು. ಒಂದು ಬೆಳಗ್ಗೆ ನಾನು ನನ್ನದೇ ನೂರಾರು ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಹೆಣಗಾಡುತ್ತಾ ಅಂಗಡಿಯಲ್ಲಿ ಕುಳಿತಿದ್ದೆ. ಆಗಲೇ ಆಟೋ ಒಂದು ಬಂದು ಅಂಗಡಿಯ ಮುಂದೆ ನಿಂತಿತು. ಅದರಿಂದ ಬಡ್ಡಿಯವ ಮತ್ತು ಬಿಡಿಭಾಗ ಪೂರೈಸುವವ ಇಳಿದವರೇ ನೇರ ಅಂಗಡಿಗೆ ನುಗ್ಗಿದರು. ನನ್ನ ಎದೆ ಧಸಕ್ಕೆಂದಿತು. ನಾನು ಎದ್ದು ನಿಂತೆ.

''ಏಯ್... ದುಡ್ಡು ತೆಗಿಯೋ...'' ಬಡ್ಡಿಯವ ತನ್ನ ಬೂಟುಗಾಲನ್ನು ಕುರ್ಚಿಯ ಮೇಲಿಟ್ಟು ಬಗ್ಗಿ ಮುಖವನ್ನು ನನ್ನ ಮುಖದ ಹತ್ತಿರ ತಂದು ಹೇಳಿದ.

''ಆತ ಇನ್ನೂ ಕೊಡಲಿಲ್ಲವೇ?'' ಕೇಳಿದೆ.

''ನಿನ್ನ ನಾಟಕವೆಲ್ಲ ಬೇಡ, ಮರ್ಯಾದೆಯಾಗಿ ದುಡ್ಡು ಕೊಡು'' ಎಂದ. ಕ್ಷಣ ಕ್ಷಣಕ್ಕೂ ಅವನ ಧ್ವನಿ ಏರತೊಡಗಿತ್ತು.

''ಅವನು ನಿನ್ನೆಯೇ ಕೊಡುತ್ತೇನೆ ಎಂದು ವಾಗ್ದಾನ ಮಾಡಿದ್ದ. ಕೊಟ್ಟಿರಬಹುದು ಎಂದು ನಂಬಿದ್ದೆ''.

''ನಾನು ದುಡ್ಡು ಕೊಟ್ಟದ್ದು ಅವನಿಗಲ್ಲ ನಿನಗೆ'' ಆತ ಗರ್ಜಿಸಿದ.

''ನನಗೆ ಎರಡು ದಿನ ಸಮಯ ಕೊಡಿ. ಖಂಡಿತ ದುಡ್ಡು ತಲುಪಿಸುತ್ತೇನೆ. ನನ್ನ ಮಾನ ತೆಗೆಯಬೇಡಿ. ಎಲ್ಲ ನೋಡುತ್ತಿದ್ದಾರೆ'' ಎಂದು ಗೋಗರೆದೆ.

''ಸರಿ, ನಾಳೆ ಒಂದು ದಿನ, ನಾಡದ್ದು ಸಂಜೆ ಐದು ಗಂಟೆಯೊಳಗೆ ನನಗೆ ದುಡ್ಡು ತಲುಪಬೇಕು. ತಲುಪಿಲ್ಲ - ಐದೂವರೆಗೆ ನಾನಿಲ್ಲಿರುತ್ತೇನೆ. ಮತ್ತೆ ನಿನ್ನ ಸೈಕಲ್, ಅಂಗಡಿ ಯಾವುದೂ ಇಲ್ಲಿರುವುದಿಲ್ಲ. ನಿನ್ನ ಒಂದು ಕಾಲು ಮುರಿದೇ ನಾನಿಲ್ಲಿಂದ ಹೋಗುವುದು. ಜಾಗ್ರತೆ''. ಅಷ್ಟು ಹೇಳಿದವನೇ ಆತ ಬಿರುಗಾಳಿಯಂತೆ ಹೋಗಿ ಆಟೋ ಹತ್ತಿದ. ನಾನು ಒದ್ದೆ ಕೋಳಿಯಂತೆ ಅತ್ತ ಇತ್ತ ನೋಡಿದೆ. ರಸ್ತೆಯಲ್ಲಿ, ಪಕ್ಕದ ಅಂಗಡಿಯಲ್ಲೆಲ್ಲ ನಿಂತ ಜನ ನನ್ನತ್ತಲೇ ನೋಡುತ್ತಿದ್ದರು. ನಾನು ಬೇಗ ಬೇಗ ಅಂಗಡಿ ಮುಚ್ಚಿ ಗೆಳೆಯನ ಮನೆಯತ್ತ ಓಡಿದೆ. ಆತ ನಡುದಾರಿಯಲ್ಲಿಯೇ ಎದುರಾದ. ನಾನು ವಿಷಯವೆಲ್ಲ ವಿವರಿಸಿದೆ. ನಾಳೆ ರಾತ್ರಿಯೊಳಗೆ ಹೇಗಾದರೂ ಮಾಡಿ ನನಗೆ ದುಡ್ಡು ತಲುಪಿಸಬೇಕು ಎಂದು ಖಡಕ್ಕಾಗಿ ಹೇಳಿದೆ. ಆತ ಸ್ವಲ್ಪ ಹೊತ್ತು ಮಾತನಾಡಲಿಲ್ಲ. ಆಮೇಲೆ ಹೇಳಿದ ''ನಿಜ ಹೇಳ್ತೇನೆ. ನನ್ನ ಕೈಯಲ್ಲಿ ದುಡ್ಡಿಲ್ಲ. ನಾನು ಪ್ರಯತ್ನಿಸುತ್ತೇನೆ. ಸಿಕ್ಕಿದರೆ ನಾಡಿದ್ದು ಮಧ್ಯಾಹ್ನದೊಳಗೆ ತಲುಪಿಸುತ್ತೇನೆ. ನೀನೂ ಪ್ರಯತ್ನಿಸು. ಯಾರಲ್ಲಿಯಾದರೂ ಸಿಕ್ಕಿದರೆ ತೆಗೆದುಕೊಡು. ಕೆಲವೇ ದಿನಗಳಲ್ಲಿ ಹಿಂತಿರುಗಿಸುತ್ತೇನೆ. ನೀನು ದುಡ್ಡಿಗಾಗಿ ಮನೆಗೆ ಬರುವುದು ಬೇಡ. ದುಡ್ಡು ಸಿಕ್ಕಿದ ತಕ್ಷಣ ನಾನೇ ಬರುತ್ತೇನೆ''. ಅವನ ಮಾತು ಕೇಳಿದ ನನಗೆ ಅವನು ದುಡ್ಡು ಕೊಡುವ ಭರವಸೆಯೇ ತಪ್ಪಿಹೋಯಿತು. ನನ್ನ ಎದೆ ಹೊಡೆದುಕೊಳ್ಳತೊಡಗಿತು. ಇದ್ದರೆ ಕೊಡುವ ಜನ. ಇಲ್ಲದಿದ್ದರೆ ಎಲ್ಲಿಂದ ಕೊಡುವುದು. ಇದ್ದಾಗ ನನಗೆ ಸಾಲ ಕೊಟ್ಟಿದ್ದ. ಈಗ ಅವನೂ ನನ್ನಂತೆಯೇ ಅಸಹಾಯಕ. ಆದರೂ ನಾನು ಕೊಡಬೇಕಲ್ಲ! ಮತ್ತೊಮ್ಮೆ ನಾಡದ್ದು ಮಧ್ಯಾಹ್ನದೊಳಗೆ ದುಡ್ಡು ತಲುಪಿಸಲು ಒತ್ತಾಯಿಸಿ ಅಂಗಡಿಗೆ ಹೋಗಲು ಮನಸ್ಸಾಗದೆ ಮನೆಯತ್ತ ನಡೆದೆ.



ಮರುದಿನ ಬೆಳಗ್ಗಿಂದ ಸಂಜೆ ತನಕ ಪರಿಚಿತರು, ಗೆಳೆಯರು, ಮಸೀದಿ ಕಮಿಟಿಯ ಅಧ್ಯಕ್ಷರು, ಸಂಘ- ಸಂಸ್ಥೆ, ಶ್ರೀಮಂತರು, ಬಡವರು ಎನ್ನದೆ ಮಾನ ಮರ್ಯಾದೆ ಬಿಟ್ಟು ಎಲ್ಲರ ಮನೆ ಬಾಗಿಲಿಗೆ ಅಲೆದೆ. ಎಲ್ಲಿಯೂ ಒಂದು ಸಾವಿರ ರೂಪಾಯಿ ಕೂಡಿಸಲು ನನ್ನಿಂದಾಗಲಿಲ್ಲ. ಎಲ್ಲರೂ ಅವರವರ ಕಷ್ಟ ಹೇಳುವವರೇ. ಇಲ್ಲದವರಲ್ಲಂತೂ ಇಲ್ಲ, ಇದ್ದವರೂ ಕೊಡಲಿಲ್ಲ. ವಿಶ್ವಾಸ ಬಿಡಿ, ಅನುಕಂಪ ಕೂಡಾ ತೋರಿಸಲಿಲ್ಲ. ರಾತ್ರಿ ಮನೆಗೆ ಬಂದವನಿಗೆ ಊಟವೂ ಸೇರಲಿಲ್ಲ. ನಾಳೆ ಏನು ಮಾಡುವುದು? ಅವರನ್ನು ಹೇಗೆ ಎದುರಿಸುವುದು? ಎಂಬುದೇ ಚಿಂತೆಯಾಗಿಬಿಟ್ಟಿತು. ಅಂದು ರಾತ್ರಿ ನನ್ನ ಪಾಲಿಗೆ ನಿದ್ದೆ ಇಲ್ಲದ ರಾತ್ರಿಯಾಯಿತು.

ಬೆಳಗ್ಗೆದ್ದವಳೇ ನನ್ನವಳು ತವರುಮನೆಗೆ ಹೋಗಿಬರುತ್ತೇನೆ ಎಂದಳು. ''ಸರಿ, ಹೋಗು, ಮಕ್ಕಳನ್ನೂ ಕರೆದುಕೊಂಡು ಹೋಗು. ಎರಡು ದಿನ ಇದ್ದು ಬಾ'' ಎಂದು ಕಳುಹಿಸಿದೆ. ಅಂಗಡಿ ಬಾಗಿಲು ತೆರೆದು ತಲೆಯ ಮೇಲೆ ಕೈಹೊತ್ತು ಗೆಳೆಯನಿಗಾಗಿ ಕಾದು ಕುಳಿತೆ. ಗಂಟೆ ಹನ್ನೆರಡಾಯಿತು, ಒಂದಾಯಿತು. ಅವನ ಪತ್ತೆ ಇಲ್ಲ. ದುಡ್ಡು ತೆಗೆದುಕೊಂಡವ ಆತ. ಅವರು ಬರುವಾಗ ಆತನೂ ನನ್ನ ಜೊತೆ ಇರಲಿ ಎಂದು ಯೋಚಿಸಿ ಅವನ ಮನೆಯತ್ತ ನಡೆದೆ. ಮನೆ ಸಮೀಪಿಸುತ್ತಿದ್ದಂತೆಯೇ ಮನೆಯ ಮುಂದೆ ಜನ ನೆರೆದದ್ದು ಕಂಡು ಎದೆ ಧಸಕ್ಕೆಂದಿತು. ''ಏನೋ ಸಂಭವಿಸಿರಬೇಕು! ಇವನೇ ಜೀವಕ್ಕೇನಾದರೂ ಮಾಡಿಕೊಂಡನೋ ಹೇಗೆ?'' ಎಂದು ನಡುಗುತ್ತಾ ದಾಪುಗಾಲು ಹಾಕಿದೆ. ಶಾಮಿಯಾನದೊಳಗೆ ಸುಮಾರು ಇನ್ನೂರಕ್ಕೂ ಹೆಚ್ಚು ಜನ ಸೇರಿದ್ದರು. ಒಂದು ಕಡೆ ಊಟದ ಪಂಕ್ತಿ ನಡೆಯುತ್ತಿತ್ತು. ಏನಿದು? ಅಲ್ಲೇ ಇದ್ದ ಒಬ್ಬರಲ್ಲಿ ವಿಚಾರಿಸಿದೆ. ''ಇಂದು ಅವರ ಮದುವೆಯ ಹತ್ತನೇ ವರ್ಷದ ದಿನ...'' ಎನ್ನುತ್ತಿದ್ದಂತೆಯೇ ಗೆಳೆಯ ಓಡಿಬರುವುದು ಕಾಣಿಸಿತು. ಬಂದವನೇ ನನ್ನ ಕೈಹಿಡಿದು ಟೆನ್‌ಷನ್‌ನಲ್ಲಿ ''ನಿನ್ನನ್ನು ಹೇಳಲು ಮರೆತೇ ಬಿಟ್ಟೆ ಕ್ಷಮಿಸು. ಹೆಂಗಸರ ಒತ್ತಾಯಕ್ಕೆ ಮಾಡಲೇ ಬೇಕಾಯಿತು. ಒಂದು ನಾಲ್ಕು ಜನರನ್ನು ಕರೆಯಲೇ ಬೇಕಾಯಿತು'' ಎಂದು ಊಟಕ್ಕೆ ಒತ್ತಾಯಿಸಿದ. ''ಅದಿರಲಿ, ಸಂಜೆ ಐದು ಗಂಟೆಯೊಳಗೆ ಅವರಿಗೆ ದುಡ್ಡು ಕೊಡಬೇಕು. ವ್ಯವಸ್ಥೆ ಮಾಡಿದ್ದಿಯಾ?'' ಕೇಳಿದೆ. ''ಇಲ್ಲ, ದುಡ್ಡಿನ ವ್ಯವಸ್ಥೆ ಆಗಲಿಲ್ಲ. ಇನ್ನೊಂದು ವಾರದಲ್ಲಿ ಕೊಡುತ್ತೇನೆ. ಹೇಗಾದರೂ ಮಾಡಿ ಅವರನ್ನು ಸಮಾಧಾನಪಡಿಸು'' ಎಂದ. ನನ್ನ ರಕ್ತ ಬಿಸಿಯೇರತೊಡಗಿತು. ''ಸರಿ ಸಂಜೆ ಅವರು ಬರುವಾಗ ನೀನೂ ನನ್ನ ಜೊತೆಗಿರಬೇಕು. ಇಬ್ಬರೂ ಸೇರಿ ಅವರನ್ನು ಒಪ್ಪಿಸೋಣ. ಇಲ್ಲ... ಅವರು ಏನು ಮಾಡುತ್ತಾರೋ ಅದನ್ನು ಅನುಭವಿಸೋಣ. ದುಡ್ಡು ತೆಗೆದುಕೊಂಡದ್ದು ನೀನು, ನಾನೊಬ್ಬನೇ ಅನುಭವಿಸೋದು ಬೇಡ'' ಎಂದೆ. ನನಗರಿವಿಲ್ಲದೆ ನನ್ನ ಧ್ವನಿ

ಏರತೊಡಗಿತ್ತು. ''ದಯವಿಟ್ಟು ಜೋರು ಮಾತನಾಡಬೇಡ. ಜನ ಎಲ್ಲ ನೋಡ್ತಾರೆ. ನೆಂಟರೆಲ್ಲ ಇರುವಾಗ ಅವರನ್ನು ಬಿಟ್ಟು ಸಂಜೆ ಹೇಗೆ ಬರುವುದು ಹೇಳು? ಅವರೆಲ್ಲ ಹೋದ ತಕ್ಷಣ ಬರುತ್ತೇನೆ'' ಎಂದು ನನ್ನನ್ನು ಎಳೆದುಕೊಂಡೇ ಹೋಗಿ ಊಟದ ಪಂಕ್ತಿಯಲ್ಲಿ ಕುಳ್ಳಿರಿಸಿದ. ಬಿರಿಯಾನಿ, ಕೋಳಿ, ಐಸ್‌ಕ್ರೀಂ, ಕೋಲ್ಡ್ ಡ್ರಿಂಕ್ಸ್, ಸಿಹಿತಿಂಡಿಗಳ ತಟ್ಟೆಗಳನ್ನೆಲ್ಲಾ ತಂದು ನನ್ನ ಮುಂದೆ ಜೋಡಿಸಿದ. ಅದನ್ನೆಲ್ಲಾ ಕಂಡು ನನ್ನ ಕೋಪ ನೆತ್ತಿಗೇರಿತು. ಇವನನ್ನು ಕತ್ತು ಅಮುಕಿ ಕೊಂದುಬಿಡಲೇ? ಅನ್ನುವಷ್ಟು ರೋಷದಿಂದ ನಾನು ಕಂಪಿಸತೊಡಗಿದೆ. ಈ ಸಮಾರಂಭಕ್ಕೆ ಕಮ್ಮಿಯೆಂದರೂ ಹತ್ತು ಸಾವಿರ ರೂಪಾಯಿಯಾದರೂ ಬೇಕು. ಅದೇ ದುಡ್ಡನ್ನು ಬಡ್ಡಿಯವನಿಗೆ ಕೊಟ್ಟಿದ್ದರೆ ನನ್ನ ಮಾನವಾದರೂ ಉಳಿಯುತ್ತಿತ್ತು. ಈತ ದುಡ್ಡು ಕೊಡುವವನಲ್ಲ. ಸಂಜೆ ಅಂಗಡಿಗೆ ಬರುವ ಜಾತಿಯೂ ಅಲ್ಲ ಎಂಬುದು ನನಗೆ ಖಾತ್ರಿಯಾಯಿತು. ಒಂದು ತುತ್ತೂ ತಿನ್ನಲಾಗದೆ ಅತ್ತಿತ್ತ ನೋಡಿದೆ. ತುಂಬಿದ ಸಭೆ. ಎಲ್ಲರೂ ಸಂತೋಷವಾಗಿದ್ದಾರೆ. ಸಭೆಯನ್ನು ಹಾಳು ಮಾಡುವುದು ಬೇಡ ಎಂದಿತು ವಿವೇಕ. ಎದ್ದವನೇ ಅವನ ಬಳಿ ನಡೆದು, ''ಸಂಜೆ ಐದು ಗಂಟೆಯೊಳಗೆ ಅಂಗಡಿಯಲ್ಲಿರಬೇಕು. ಇಲ್ಲದಿದ್ದರೆ ನಾಳೆ ನೀನು ನನ್ನ ಹೆಣ ನೋಡಬೇಕಾದಿತು'' ಎಂದು ಎಚ್ಚರಿಸಿ ಹೊರಟೆ.

ವಾಚು ನೋಡಿಕೊಂಡೆ. **3-30**. ''ಇನ್ನು ಎರಡು ಗಂಟೆಯೊಳಗೆ ಅವರು ಅಂಗಡಿಗೆ ಬರುತ್ತಾರೆ. ದುಡ್ಡು ಕೇಳುತ್ತಾರೆ. 'ಇಲ್ಲ' ಎಂದಾಗ ಸೈಕಲ್‌ಗಳನ್ನೆಲ್ಲಾ ಪುಡಿ ಮಾಡುತ್ತಾರೆ. ಇಲ್ಲ... ಟೆಂಪೋದಲ್ಲಿ ತುಂಬಿಸಿ ಸಾಗಿಸುತ್ತಾರೆ. ನಾಯಿಗೆ ಒದ್ದಂತೆ ನನ್ನನ್ನು ಒದೆಯುತ್ತಾರೆ. ಕೈಯ್ಯೋ, ಕಾಲೋ ಮುರಿಯುತ್ತಾರೆ. ಊರಿನ ಜನ ಎಲ್ಲ ಸೇರುತ್ತಾರೆ. ನನ್ನನ್ನು ನೋಡಿ ನಗುತ್ತಾರೆ'' ಎಂಬ ಯೋಚನೆ ಬರುತ್ತಿದ್ದಂತೆಯೇ ಕಾಲು ಮನೆಯತ್ತ ಹೆಜ್ಜೆ ಹಾಕಿತು.

ದೊಣ್ಣೆ ಕೊಟ್ಟು ಹೊಡೆಸಿದಂತಾಗಿದೆ ನನ್ನ ಸ್ಥಿತಿ. ''ಏನಾಗ್ತದೋ ಆಗಲಿ'' ಎಂದು ಮನಸ್ಸು ಗಟ್ಟಿ ಮಾಡಿಕೊಂಡು ಮನೆಗೆ ಬಂದಿದ್ದೇನೆ. ಬಾಗಿಲು ತೆರೆದಿಟ್ಟು ವರಾಂಡದ ಮಧ್ಯೆ ಒಂದು ಕುರ್ಚಿ ತಂದು ಹಾಕಿ ಅದರಲ್ಲಿ ಕುಳಿತಿದ್ದೇನೆ. ಈಗ ಗಂಟೆ ಐದು. ಇನ್ನರ್ಧ ಗಂಟೆಯಲ್ಲಿ ಅವರು ಅಂಗಡಿಗೆ ಬರುತ್ತಾರೆ. ಮತ್ತೆ ಕಾಲು ಗಂಟೆಯಲ್ಲಿ ಮನೆ ಹುಡುಕಿಕೊಂಡು ಇಲ್ಲಿಗೆ ತಲುಪುತ್ತಾರೆ. ಆಮೇಲೆ ಏನು ಮಾಡುತ್ತಾರೆ? ನನ್ನನ್ನು ಹೊಡೆಯುತ್ತಾರೋ, ಬಡಿಯುತ್ತಾರೋ, ಕೊಲ್ಲುತ್ತಾರೋ, ಕೊಚ್ಚಿ ಮಾಂಸ ಮಾಡಿ ಬೇಯಿಸಿ ತಿನ್ನುತ್ತಾರೋ ಏನು ಬೇಕಾದರೂ ಮಾಡಲಿ. ನಿಜ ಹೇಳಬೇಕೆಂದರೆ ನನ್ನಲ್ಲಿ ಕೊಡಲು ದುಡ್ಡಿಲ್ಲ. ನಾನೀಗ ಎಲ್ಲದಕ್ಕೂ ತಯಾರಾಗಿ ಅವರು ಬರುವುದನ್ನೇ ಕಾಯುತ್ತಾ ಕುಳಿತಿದ್ದೇನೆ....



## ಆಯಿಷಾ

ಆತ ಕಿಟಕಿಯಲ್ಲಿ ತಲೆ ಇಟ್ಟು ಕುಳಿತಿದ್ದ. ರಾಶಿ ರಾಶಿ ವಾಹನಗಳು ಸಿಗ್ನಲನ್ನು ಇರುವೆಯಂತೆ ಮುತ್ತಿದ್ದವು. ಅವನಿದ್ದ ಬಸ್ಸೂ ಸಿಗ್ನಲ್‌ಗಾಗಿ ಕಾಯುತ್ತಿತ್ತು. ಕೆಂಪು ದೀಪ ಆರಿ ಹಸಿರು ದೀಪ ಹೊತ್ತಿಕೊಂಡಿತು. ಸುಮಾರು ನೂರು ಗಜ ಅಂತರದಲ್ಲಿ ವಿರುದ್ಧ ದಿಕ್ಕಿಗೆ ಮುಖ ಮಾಡಿ ನಿಂತಿದ್ದ ಬಸ್ಸೊಂದರಿಂದ ಬುರ್ಖಾ ಸ್ತ್ರೀಯೊಬ್ಬಳು ತನ್ನ ತಲೆ ಹೊರಹಾಕಿ ಒಮ್ಮೆ ತನ್ನ ಮುಖ ಪರದೆಯನ್ನು ಸರಿಸಿದಳು. ನೋಡುತ್ತಿದ್ದಂತೆಯೇ ಆತನಿಗೆ ಮಿಂಚು ಬಡಿದಂತಾಯಿತು... ''ಹೌದು ಅವಳೇ... ಅವಳೇ... ಅದೇ ಮುಖ... ಅದೇ ಕಣ್ಣು...'' ಬಸ್ಸು ಹೊರಟಾಗಿತ್ತು... ಮರೆಯಾಗುವವರೆಗೂ ಅವಳು ನೋಡುತ್ತಲೇ ಇದ್ದಳು... ''ಛೆ! ನಾನು ಇಳಿಯಬೇಕಾಗಿತ್ತು... ಅವಳನ್ನು ಭೇಟಿಯಾಗಬೇಕಾಗಿತ್ತು... ಮಾತನಾಡಿಸಬೇಕಾಗಿತ್ತು...'' ಬಸ್ಸು ಚಲಿಸುತ್ತಿತ್ತು... ಮನಸ್ಸು ಚಡಪಡಿಸಿತು... ''ಅಯ್ಯೋ... ಎಂತಹ ಕೆಲಸ ಮಾಡಿಬಿಟ್ಟೆ.... ಎಷ್ಟು ವರ್ಷಗಳಾಯಿತು ಅವಳನ್ನು ನೋಡಿ...''

''ಅವಳು ಇಲ್ಲಿಗೆ ಹೇಗೆ ಬಂದಳು...? ಇದೇ ನಗರದಲ್ಲಿಯೇ ಇರಬಹುದೇ...? ಅವಳನ್ನು ಹುಡುಕಬೇಕು... ಎಲ್ಲಿದ್ದರೂ ಹುಡುಕಬೇಕು... ನೋಡಬೇಕು... ಮಾತನಾಡಿಸಬೇಕು... ಆದರೆ ಇಷ್ಟು ದೊಡ್ಡ ನಗರದಲ್ಲಿ ಎಲ್ಲೆಂದು ಹುಡುಕುವುದು...?'' ಆತ ತನ್ನ ನಿಲ್ದಾಣ ಬಂದಾಗ ಇಳಿದು ಕಾಲೆಳೆಯತೊಡಗಿದ. ಪಶ್ಚಾತ್ತಾಪದಿಂದ ಮನಸ್ಸು ಮುದುಡಿಹೋಗಿತ್ತು. ಮನೆಗೆ ಬಂದವನೇ ಅಂಗಾತ ಬಿದ್ದುಕೊಂಡ.

ಅವನಿಗೆ ಇದ್ದಕ್ಕಿದ್ದಂತೆಯೇ ಒಂದು ಯೋಚನೆ ಹೊಳೆಯಿತು. ''ನಾಳೆ ಅದೇ ಸಮಯ ದಲ್ಲಿ ಅದೇ ಬಸ್ಸನ್ನು ಹಿಡಿದರೆ... ಒಂದು ವೇಳೆ ಅವಳೂ ನನ್ನನ್ನರಸಿ ಅದೇ ಬಸ್ಸಲ್ಲಿ ಬಂದರೂ ಬರಬಹುದು.'' ಮರುದಿನ ಮತ್ತೆ ಆತ ಅದೇ ಬಸ್ಸನ್ನು ಕಾದು ಹಿಡಿದ... ಇಲ್ಲ... ಅವಳಿಲ್ಲ... ಅವನಿಗೆ ಅಳುವೇ ಬಂದುಬಿಟ್ಟಿತು.. ಹುಚ್ಚನಂತೆ ನಗರವೆಲ್ಲಾ ಅಲೆದ... ಬುರ್ಖಾ ಕಂಡಲ್ಲೆಲ್ಲ ಹಿಂಬಾಲಿಸಿ ಅವಳನ್ನು ಹುಡುಕಿದ... ರಾತ್ರಿಯಾಗುತ್ತಲೇ ಸೋತು ಸುಣ್ಣವಾಗಿ ಮನೆಗೆ ಮರಳಿದ.

ರಾತ್ರಿ ಹತ್ತು ಗಂಟೆಯಾಗಿರಬಹುದು.. ಫೋನ್ ಒಂದೇ ಸವನೆ ಅರಚ ತೊಡಗಿತು. ಅದನ್ನೆತ್ತಿಕೊಳ್ಳುವ ಮನಸ್ಥಿತಿಯಲ್ಲೂ ಅವನಿರಲಿಲ್ಲ.. ಸ್ತಬ್ಧವಾದ ಫೋನು ಮತ್ತೆ ಮತ್ತೆ ಕಿರುಚತೊಡಗಿತು. ಆತ ಅಸಹನೆಯಿಂದ ರಿಸೀವರ್ ಎತ್ತಿ ''ಹಲೋ...'' ಎಂದ. ಆ ಕಡೆಯಿಂದ ಧ್ವನಿ ಇಲ್ಲ... ''ಯಾಕ್ರೀ ರಿಂಗ್ ಮಾಡಿ ಸುಮ್ಮನಿದ್ದೀರಾ...? ಯಾಕೆ ಹಿಂಸೆ ಕೊಡ್ತೀರಾ...?'' ಆತ ಗದರಿಸುತ್ತಾ ರಿಸೀವರ್ ಇಡುವುದರಲ್ಲಿದ್ದ.

''ಫೋನ್ ಇಡಬೇಡಿ...'' ಆ ಕಡೆಯಿಂದ ಮಧುರ ಕಂಠವೊಂದು ಉಲಿಯಿತು.

''ಯಾರು...? ಯಾರು...?'' ಉತ್ತರವಿಲ್ಲ... ಆತನ ನೆಪು ಆ ಧ್ವನಿಯನ್ನು ಜ್ಞಾಪಿಸಿಕೊಳ್ಳತೊಡಗಿತು.

''ಯಾರು ಮಾತನಾಡುವುದು...?'' ಆತ ಮತ್ತೆ ಕೇಳಿದ.

''ನಾನು ಆಯಿಷಾ...''

ಆತ ಕೆಲವು ಕ್ಷಣ ಮಾತನಾಡುವುದನ್ನೇ ಮರೆತ... ಗರಬಡಿದವನಂತೆ ನಿಂತುಬಿಟ್ಟ.

''ಯಾಕೆ ಸುಮ್ಮನಾಗಿಬಿಟ್ಟಿರಿ...? ನಾನು ಆಯಿಷಾ... ನೆನಪಾಗುತ್ತಿಲ್ಲವೇ?'' ಆ ಧ್ವನಿಯಲ್ಲಿ ನಡುಕವಿತ್ತು.

''ಹಾಂ... ಹಾಂ... ಎಲ್ಲಿಂದ ಮಾತನಾಡುತ್ತಿದ್ದೀಯಾ ಆಯಿಷಾ...?''

''ಇಲ್ಲಿಯೇ... ಇದೇ ನಗರದಲ್ಲಿಯೇ ಇದ್ದೇನೆ... ನಿಮ್ಮನ್ನೊಮ್ಮೆ ನೋಡಬೇಕು... ತುಂಬಾ ಆಸೆಯಾಗ್ತಾ ಇದೆ...''

''ನನ್ನ ನಂಬ್ರ ಯಾರು ಕೊಟ್ಟರು?''

''ನಿನ್ನೆಯಿಂದ ಟೆಲಿಫೋನ್ ಡೈರೆಕ್ಟರಿಯಲ್ಲಿರುವ ನಿಮ್ಮ ಹೆಸರಿನ ಎಲ್ಲಾ ನಂಬರಿಗೂ ಫೋನ್ ಮಾಡಿದೆ... ಈಗ ಸಿಕ್ಕಿದಿರಿ''

''ಹೇಗಿದ್ದಿ ಆಯಿಷಾ?''

''ನನಗೆ ನಿಮ್ಮನ್ನೊಮ್ಮೆ ನೋಡಬೇಕು...''

''ನನಗೂ...''



''ಎಲ್ಲಿ ಸಿಗ್ತೀರಾ...?''

''ಬೆಳಗ್ಗೆ ಮನೆಗೆ ಬಾ...''

''ಬೇಡ... ಮನೆಯಲ್ಲಿ ನಿಮ್ಮ ಹೆಂಡ್ತಿ ಮಕ್ಕಳು ಎಲ್ಲ ಇರ್ತಾರೆ.. ನನಗೆ ನೀವು ಒಂಟಿಯಾಗಿ ಬೇಕು''

''ಇಲ್ಲ... ಬೆಳಗಿನ ಹನ್ನೊಂದು ಗಂಟೆಯ ಹೊತ್ತು ಯಾರೂ ಇರೋದಿಲ್ಲ... ನಾನೊಬ್ಬನೇ ಇರ್ತೇನೆ... ಬಾ...''

ಮತ್ತೆ ಕೆಲವು ಹೊತ್ತು ಮೌನ.... ಅವಳಿಂದ ಮಾತೇ ಇಲ್ಲ... ಅವನಿಗೂ ಏನು ಮಾತನಾಡಬೇಕೆಂದೇ ತೋಚಲಿಲ್ಲ...

''ಆಯಿಷಾ...''

''ಹೂಂ...''

''ಹೇಗಿದ್ದಿ?''

'' ........... ''

''ಮಾತಾಡು ಆಯಿಷಾ...''

''ನನಗೆ ನಿಮ್ಮನ್ನು ನೋಡಬೇಕು''

''ನಾನೀಗಲೇ ಅಲ್ಲಿಗೆ ಬರಲೇ...?''

''ಬೇಡ... ಬೆಳಗ್ಗೆ ನಾನೇ ಬರ್ತೇನೆ''

ಮಧ್ಯರಾತ್ರಿಯವರೆಗೂ ರಿಸೀವರ್ ಕಿವಿಗೆ ಹಿಡಿದು ಅವರಿಬ್ಬರೂ ಕುಳಿತಿದ್ದರು. ಬೆಳಗಾಗುತ್ತಲೇ ಆತ ಕಾಯತೊಡಗಿದ್ದ.

ಅವಳು ಬಂದಳು.. ಅವಳನ್ನು ಎದುರ್ಗೊಳ್ಳಲು ಆತ ಬಾಗಿಲಲ್ಲೇ ಕಾಯುತ್ತಿದ್ದ. ಮೆಟ್ಟಲೇರಿದ ಅವಳು ಮುಖ ಪರದೆ ಸರಿಸಿದಳು... ನಾಲ್ಕು ಕಣ್ಣುಗಳೂ ಒಂದಾದವು... ತಪಸ್ಸಿಗೆ ನಿಂತಂತೆ... ಲೋಕವನ್ನೇ ಮರೆತಂತೆ... ಇಬ್ಬರೂ ಮೆಟ್ಟಲಲ್ಲೇ ಕಂಬಗಳಂತೆ ನಿಂತುಬಿಟ್ಟರು.

''ಬಾ... ಒಳಗೆ ಬಾ... '' ಆತ ಎಚ್ಚರಗೊಂಡ.

ಅವಳು ಒಳಗೆ ಬಂದವಳು ಕುರ್ಚಿ ಎಳೆದು ಟೇಬಲ್ ಮುಂದೆ ಕುಳಿತಳು. ಆತನೂ ಅವಳೆದುರು ಕುಳಿತ.

''ಆಯಿಷಾ...''

'' ............. ''

''ಎಷ್ಟು ವರ್ಷಗಳಾದವು ನಿನ್ನನ್ನು ನೋಡಿ...''

ಅವಳು ಮಾತನಾಡಲಿಲ್ಲ... ಅವನನ್ನು ತನ್ನ ಕಣ್ಣೊಳಗೆ ತುಂಬಿಸಿಕೊಳ್ಳುತ್ತಾ

ಉಸಿರಾಡುವುದನ್ನೂ ಮರೆತಂತೆ ಗಲ್ಲಕ್ಕೆ ಕೈಕೊಟ್ಟು ಕುಳಿತಿದ್ದಳು.

ಅವನೂ ಅವಳ ಮುಖ ನೋಡುತ್ತಾ ಕುಳಿತುಬಿಟ್ಟ. ಇದ್ದಕ್ಕಿದ್ದಂತೆಯೇ ಅವಳ ಕಣ್ಣು ತುಂಬಿ ಹರಿಯತೊಡಗಿತು. ಅವಳಿಗೆ ಅದರ ಪರಿವೆಯೇ ಇರಲಿಲ್ಲ... ಮುಖದಲ್ಲಿ ಯಾವುದೇ ಭಾವನೆಗಳಿರಲಿಲ್ಲ. ಕಣ್ಣಲ್ಲಿ ಜೀವವೇ ಇರಲಿಲ್ಲ... ಆತ ಗಾಬರಿಗೊಂಡ...

''ಆಯಿಷಾ.. ಆಯಿಷಾ... ಯಾಕೆ ಅಳ್ತಿದ್ದಿಯಾ..?'' ಆತ ಎದ್ದು ಅವಳ ಕಣ್ಣ ಮುಂದಿನಿಂದ ಪಕ್ಕಕ್ಕೆ ಸರಿದ.

ಅವಳು ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡು ಅಳತೊಡಗಿದಳು. ಎಷ್ಟೋ ವರ್ಷಗಳಿಂದ ಬಚ್ಚಿಟ್ಟುಕೊಂಡಿದ್ದ ದುಃಖ, ನೋವು, ಕಣ್ಣೀರಾಗಿ ಹರಿಯತೊಡಗಿತ್ತು. ಅತ್ತು ಅತ್ತು ಅವಳ ದುಃಖ ಶಮನವಾಗಲಿ ಎಂದು ಆತ ಸುಮ್ಮನೆ ನಿಂತುಬಿಟ್ಟ.

ಅವಳು ಅಳು ನಿಲ್ಲಿಸಿ ಕಣ್ಣೊರೆಸಿಕೊಂಡವಳೇ ದಡಕ್ಕನೆ ಎದ್ದು ''ನಾನು ಹೋಗುತ್ತೇನೆ'' ಎನ್ನುತ್ತಾ ಹೊರಟು ನಿಂತಳು.

''ನಿಲ್ಲು ಆಯಿಷಾ... ನಿನ್ನ ಜೊತೆ ಮಾತನಾಡಬೇಕು''

''ಇನ್ನೊಮ್ಮೆ ಬರುತ್ತೇನೆ...'' ಎನ್ನುತ್ತಾ ಮುಖದ ಪರದೆ ಇಳಿಸಿದವಳು ನಡೆದೇಬಿಟ್ಟಳು.

ಎರಡು ದಿನ ಕಳೆಯಿತು. ಮತ್ತೆ ಅವಳಿಂದ ಫೋನು.

''ನಿಮ್ಮನ್ನು ನೋಡಬೇಕು, ನಿಮ್ಮ ಜೊತೆ ಮಾತನಾಡಬೇಕು''

''ನಾಳೆ ಬಾ ಆಯಿಷಾ...''

''ಮನೆಯಲ್ಲಿ ಯಾರೂ ಇರುವುದಿಲ್ಲವೇ?''

''ಇಲ್ಲ... ಮೊನ್ನೆಯ ಹೊತ್ತಿಗೇ ಬಾ...''

ಅವಳು ಬಂದಳು. ಸ್ವಲ್ಪ ಗೆಲುವಾದಂತಿದ್ದಳು.

''ಆಯಿಷಾ... ಎಲ್ಲಿ ವಾಸವಾಗಿದ್ದಿಯಾ...?''

ಅವಳು ತನ್ನ ವಿಳಾಸ ಹೇಳಿದಳು.

''ಈ ಊರಿಗೆ ಯಾಕೆ ಬಂದೆ?''

''ಮಗನಿಗೆ ಮೆಡಿಕಲ್ ಸೀಟು ಸಿಗ್ತು... ಇಲ್ಲಿಯೇ ಒಂದು ಬಾಡಿಗೆ ಮನೆ ಮಾಡಿಕೊಂಡಿದ್ದೇನೆ''

''ಎಷ್ಟು ಮಕ್ಕಳು?''

''ಒಬ್ಬನೇ''

''ಏನೆಲ್ಲಾ ನಡೆದುಹೋಯಿತು ಆಯಿಷಾ ನಮ್ಮ ಜೀವನದಲ್ಲಿ?''



''ನೀವು ಹೇಗಿದ್ದೀರಾ?''

''ಚೆನ್ನಾಗಿದ್ದೇನೆ''

''ನಿಮ್ಮ ಹೆಂಡ್ತಿ...?''

''ಶಾಲೆಗೆ ಮಗಳಿಗೆ ಬುತ್ತಿ ತಗೊಂಡು ಹೋಗಿದ್ದಾಳೆ. ದಿನಾ ಈ ಹೊತ್ತಿಗೆ ಹೋಗ್ತಾಳೆ... ಇನ್ನೊಂದು ಗಂಟೆಯಲ್ಲಿ ಬಂದು ಬಿಡ್ತಾಳೆ''

''ಎಷ್ಟು ಮಕ್ಕಳು?''

''ಎರಡು... ಒಂದು ಗಂಡು, ಒಂದು ಹೆಣ್ಣು. ದೊಡ್ಡವ ಕಾಲೇಜಿಗೆ ಹೋಗ್ತಾ ಇದ್ದಾನೆ. ಚಿಕ್ಕವಳು ಐದನೇ ಕ್ಲಾಸು''

''ತಡವಾಗಿ ಮದುವೆಯಾದಿರಾ...?''

''ಹೌದು... ನಿನ್ನ ಗಂಡ...?''

''ಅವರು ತೀರಿಹೋಗಿ ಹತ್ತು ವರ್ಷ ಕಳೆಯಿತು...''

''ಏನಾಗಿತ್ತು?''

''ಅದೆಲ್ಲ ಬೇಡ ಬಿಡಿ...''

''ಒಳಗೆ ಅಮ್ಮ ಇದ್ದಾರೆ. ಮಲಗಿದಲ್ಲಿಯೇ ಇದ್ದಾರೆ.. ನೋಡ್ತೀಯಾ...?''

''ಬೇಡ... ನನಗೆ ಭಯವಾಗ್ತದೆ.. ನಾನು ಹೋಗ್ತೇನೆ..'' ಅವಳು ಎದ್ದು ನಿಂತಳು.

''ಇನ್ಯಾವಾಗ ಬರ್ತೀಯಾ?''

''ಫೋನ್ ಮಾಡಿ ಬರ್ತೇನೆ''

''ನನ್ನನ್ನು ನಿನ್ನ ಮನೆಗೆ ಕರೆಯುವುದಿಲ್ವೇ?''

''ಇಲ್ಲ, ಮಗ ಮನೆಯಲ್ಲಿಯೇ ಇದ್ದಾನೆ.. ಪರೀಕ್ಷೆ... ಓದುತ್ತಿದ್ದಾನೆ...'' ಅವಳು ಹೊರಟುಹೋದಳು.

ಮತ್ತೆ ವಾರಕ್ಕೆ ಎರಡು - ಮೂರು ಸಲ ಅವಳು ಬರುತ್ತಲೇ ಇದ್ದಳು. ಅವನನ್ನು ಬಿಟ್ಟ ಕಣ್ಣಿಂದ ನೋಡುತ್ತಾ ಒಂದರ್ಧ ಗಂಟೆ ಇದ್ದು ಹೋಗುತ್ತಿದ್ದಳು.

ಒಂದು ದಿನ ಬಂದವಳು ''ನಾನು ನಾಳೆ ಊರಿಗೆ ಹೋಗ್ತಿದ್ದೇನೆ'' ಎಂದಳು.

''ಯಾಕೆ?''

''ಮಗನಿಗೆ ರಜೆ ಇದೆ''

''ಮತ್ಯಾವಾಗ ಬರ್ತಿಯಾ?''

''ತಿಂಗಳು ಕಳೆಯಬಹುದು''

''ಹೋದ ಮೇಲೆ ಫೋನ್ ಮಾಡ್ತೀಯಾ?''

‘‘ಹೂಂ...’’

‘‘ನಿನ್ನ ಮಗನನ್ನೊಮ್ಮೆ ನೋಡಬೇಕಲ್ಲಾ..’’

‘‘ಬೇಡ...’’

‘‘ನಿನ್ನ ತಂದೆ ಹೇಗಿದ್ದಾರೆ?’’

‘‘ನನ್ನ ಮದುವೆಯಾಗಿ ಎರಡು ವರ್ಷದಲ್ಲೇ ಅವರು ತೀರಿಕೊಂಡರು’’

‘‘ಜೀವನಕ್ಕೆ ಏನ್ಮಾಡ್ತಿದ್ದೀಯಾ?’’

‘‘ಬೇಕಾದಷ್ಟಿದೆ.... ಆದರೆ ಜೀವನವೇ ಇಲ್ಲ’’

‘‘ಯಾಕೆ ಆಯಿಷಾ ನಮ್ಮ ಜೀವನ ಹೀಗಾಯ್ತು?’’

‘‘ಅದಕ್ಕೆಲ್ಲ ನಾನೇ ಕಾರಣ... ನಾನು ನಿಮ್ಮ ತಾಯಿಯ ಜೊತೆ ಜಗಳವಾಡ ಬಾರದಿತ್ತು..’’ ಅವಳ ಕಣ್ಣಲ್ಲಿ ನೀರು ಜಿನುಗಿತು.

‘‘ಇಲ್ಲ ಆಯಿಷಾ... ನಾನೇ ಕಾರಣ... ಎಲ್ಲದಕ್ಕೂ ನಾನೇ ಕಾರಣ... ನಾನು ಅಮ್ಮನ ಮಾತು ಕೇಳಿಬಿಟ್ಟೆ...’’

‘‘ನಾನು ಸ್ವಲ್ಪ ಸಹನೆಯಿಂದಿರಬೇಕಾಗಿತ್ತು... ನಿಮ್ಮ ತಾಯಿಯನ್ನು ಅರ್ಥ ಮಾಡಿಕೊಳ್ಳಬೇಕಾಗಿತ್ತು... ದುಡುಕಿಬಿಟ್ಟೆ...’’

‘‘ಎಷ್ಟು ಸುಂದರವಾಗಿತ್ತು ಆ ಜೀವನ... ಸುಮ್ಮನೆ ಕಳೆದುಹೋಯ್ತು... ಅಲ್ವೇ ಆಯಿಷಾ...’’

‘‘ಹೌದು... ಹಾಳಾಗಿ ಹೋಯ್ತು... ಎಲ್ಲ ನನ್ನಿಂದ’’

‘‘ನಾನು ಚಿಕ್ಕದರಲ್ಲೇ ತಂದೆಯನ್ನು ಕಳೆದುಕೊಂಡೆ ಆಯಿಷಾ... ನನ್ನನ್ನು ಬೆಳೆಸಲು ನನ್ನಮ್ಮ ಬಹಳ ಕಷ್ಟಪಟ್ಟಳು... ಆ ತಾಯಿಯ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳಲೇಬೇಕಾಗಿತ್ತು... ಎಲ್ಲಿ ಮಗ ತನ್ನ ಕೈಬಿಟ್ಟು ಹೋಗ್ತಾನೋ ಎಂಬ ಭಯವಿತ್ತು ಅವರಲ್ಲಿ... ಅದಕ್ಕೆ ಹಾಗೆ ನಡೆದುಕೊಂಡೆ...’’

‘‘ಅವರದ್ದೇನೂ ತಪ್ಪಿಲ್ಲ ಬಿಡಿ... ನಾಳೆ ನಾನೂ ಹಾಗೆಯೇ... ನಾನು ದುಡುಕಬಾರದಿತ್ತು...’’

‘‘ಇಲ್ಲ ಆಯಿಷಾ... ನಾನು ಕುರುಡನಾಗಿದ್ದೆ... ತಾಯಿ ನಿನ್ನ ಮೇಲೆ ಕೈ ಮಾಡಿದಾಗಲೂ ನಾನು ಸುಮ್ಮನಿದ್ದೆ... ತಪ್ಪಾಯಿತು ಕ್ಷಮಿಸು...’’

‘‘ನಿಮ್ಮ ತಾಯಿಯನ್ನು ನಾನು ನನ್ನ ತಾಯಿಯಂತೆ ನೋಡಲಿಲ್ಲ... ಹಟ ಸಾಧಿಸಿ ಬಿಟ್ಟೆ... ನನ್ನ ನಾಲಗೆ ಕತ್ತರಿಸಬೇಕು... ಅಂತಹ ಮಾತನಾಡಿಬಿಟ್ಟೆ...’’

‘‘ಅಂದು ಯೌವನದಲ್ಲಿ ನಾವು ಮಾಡಿದ್ದೆಲ್ಲ ಸರಿಯೆನಿಸುತ್ತಿತ್ತು... ಈಗ ಎಲ್ಲ ಅರ್ಥವಾಗ್ತಾ ಇದೆ... ಎಲ್ಲ ನಾವು ಪಡಕೊಂಡು ಬಂದದ್ದು..’’



‘‘ಬಿಡಿ... ಕಳೆದು ಹೋದದ್ದರ ಬಗ್ಗೆ ಈಗೇಕೆ ಮಾತು... ಇನ್ನಷ್ಟು ನೋವನ್ನು ತುಂಬಿಸಿಕೊಳ್ಳಲು ಈ ಹೃದಯದಲ್ಲಿ ಜಾಗವಿಲ್ಲ... ಎಲ್ಲ ಮರ್ರುಬಿಡೋಣ...’’

‘‘ಅಂದು ನೀನು ನಿನ್ನ ತಂದೆಯ ಜೊತೆ ಹೊರಟು ಹೋದೆಯಲ್ಲಾ... ನೀನು ಮತ್ತೆ ಬರಬಹುದೆಂದು ನಾನು ಎಷ್ಟು ಕಾದಿದ್ದೆ ಗೊತ್ತಾ...? ಎಷ್ಟೊಂದು ಆಸೆ ಪಟ್ಟಿದ್ದೆ... ಎಷ್ಟೊಂದು ಕಾತರದಿಂದಿದ್ದೆ... ನೀನು ಯಾಕೆ ಬರ್ಲಿಲ್ಲ ಆಯಿಷಾ...? ನಾನು ಅಷ್ಟೊ ಕೆಟ್ಟವನಾಗಿದ್ದೆನೇ...?’’

‘‘ನನಗೂ ಬರ್ಬೇಕೆಂಬ ತುಡಿತ ಇತ್ತು. ನಾನೂ ಚಡಪಡಿಸ್ತಿದ್ದೆ... ಆದರೆ ಅಪ್ಪ ಬಿಡಬೇಕಲ್ಲಾ? ನಾನು ಹೆಣ್ಣು... ಅಪ್ಪಣೆ ಇಲ್ಲದೆ ಹೊರಗೆ ಕಾಲಿಡುವಂತಿರಲಿಲ್ಲ... ನೀವು ಗಂಡಸು... ನಿಮಗೆ ಬರಬಹುದಿತ್ತಲ್ವಾ... ನೀವ್ಯಾಕೆ ಬರ್ಲಿಲ್ಲ...? ನಾನು ಅಷ್ಟೊ ಕೆಟ್ಟವಳಾಗಿದ್ದೆನಾ...?’’

‘‘ಅಮ್ಮ ಬಿಡಲಿಲ್ಲ. ಅವರ ಮಾತು ಮೀರುವ ಧೈರ್ಯ ನನ್ನಿಗಿರ್ಲಿಲ್ಲ... ಅವಳಾಗಿಯೇ ಹೋಗಿದ್ದಾಳೆ. ಬೇಕಾದರೆ ಬರ್ಲಿ...’’ ಎಂದುಬಿಟ್ಟರು.

‘‘ಅದೂ ಸರಿಯೇ... ಅವರ ಮಾತಿನಲ್ಲಿ ನ್ಯಾಯವಿದೆ... ನನ್ನ ಮನಸ್ಸು ಕಿತ್ತು ತಿನ್ನುವ ಒಂದು ಪ್ರಶ್ನೆ ಇದೆ... ಎಷ್ಟೋ ದಿನಗಳಿಂದ ಕೇಳಬೇಕೂಂತ ಇದ್ದೇನೆ. ಕೇಳಲೇ?’’

‘‘ಅದೇನು ಕೇಳು’’

‘‘ನನಗೆ ತಲಾಖ್ ಕೊಡಲು ನಿಮಗೆ ಹೇಗೆ ಮನಸ್ಸು ಬಂತು? ನಾನು ಅಷ್ಟೊ ಬೇಡದವಳಾಗಿದ್ದೆನೇ... ಅಷ್ಟೊಂದು ಪ್ರೀತಿ ತೋರಿಸ್ತಾ ಇದ್ರಲ್ಲಾ... ಎಲ್ಲಾ ನಾಟಕವಾಗಿತ್ತೇ?’’

‘‘ನಾನೆಲ್ಲಿ ತಲಾಖ್ ಕೊಟ್ಟೆ ಆಯಿಷಾ...? ನಿನ್ನ ತಂದೆ ಮಸೀದಿಯಲ್ಲಿ ಪಂಚಾಯತಿ ಸೇರಿಸಿ ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಹೊರಿಸಿ... ನನ್ನಿಂದ ಬಲವಂತವಾಗಿ ‘ತಲಾಖ್’ ಪಡೆದುಕೊಂಡರು’’.

‘‘ಸುಳ್ಳು...’’ ಇದುವರೆಗೂ ತಲೆಬಗ್ಗಿಸಿ ಮಾತನಾಡುತ್ತಿದ್ದವಳು ಒಮ್ಮೆಲೇ ತಲೆ ಎತ್ತಿ ಆತನ ಮುಖ ನೋಡಿದಳು.

‘‘ನನ್ನ ತಾಯಿಯಾಣೆ ಸತ್ಯ ಆಯಿಷಾ... ದೇವರಾಣೆ ಸತ್ಯ... ನನ್ನ ಮನಸ್ಸು ಇಂದಿಗೂ ನಿನಗೆ ತಲಾಖ್ ಹೇಳಲಿಲ್ಲ... ನಾನು ನಿನ್ನನ್ನು ಎಷ್ಟು ಪ್ರೀತಿಸ್ತಿದ್ದೆ.... ಎಷ್ಟೊಂದು ಇಷ್ಟಪಟ್ಟಿದ್ದೆ... ಪಂಚಾಯತಿ ಸೇರಿಸಿದ ನಿಮ್ಮಪ್ಪ ನನ್ನನ್ನು ಎಷ್ಟೊಂದು ಅಪಮಾನಿಸಿದರು ಗೊತ್ತಾ...? ನೀನು ನನ್ನನ್ನು ಸಂಪೂರ್ಣ ತಿರಸ್ಕರಿಸಿದ್ದಿ... ನೀನು ಇನ್ನು ಯಾವ ಕಾರಣಕ್ಕೂ ನನ್ನ ಜೊತೆ ಸಂಸಾರ ಮಾಡುವುದಿಲ್ಲ ಎಂದು ಹೇಳಿದ್ದಿ

ಎಂದು ಪ್ರಶ್ನೆ, ಅವಮಾನಗಳಿಂದ ನನ್ನನ್ನು ಕಟ್ಟಿಹಾಕಿಬಿಟ್ಟರು... ಸೇರಿದ ಜನರೆಲ್ಲಾ ನನ್ನ ಮೇಲೆ ಒತ್ತಡ ತಂದರು... ''ಅವಳಿಗೆ ಬೇಡವೆಂದ ಮೇಲೆ ನಿನಗ್ಯಾಕೋ... ಕೊಡೋ ತಲಾಖ್'' ಎಂದು ಬೊಬ್ಬಿಟ್ಟರು... ನಾನೇನು ಮಾಡ್ಬೇಕಾಗಿತ್ತು ಆಯಿಷಾ?''

''ಹಟ ಸಾಧಿಸಿಬಿಟ್ಟರು... ನನ್ನಪ್ಪ ಹಟ ಸಾಧಿಸಿಬಿಟ್ಟರು... ನೀವಾಗಿಯೇ ತಲಾಖ್ ಕೊಟ್ಟಿರೆಂದು ಸುಳ್ಳು ಸುಳ್ಳೇ ಹೇಳಿಬಿಟ್ಟರು... ನಾನು ನಂಬಿಬಿಟ್ಟೆ...'' ಅವಳು ಗೋಡೆ ನೋಡುತ್ತಾ ಮುಷ್ಟಿ ಬಿಗಿ ಹಿಡಿದು ನಡುಗುತ್ತಿದ್ದಳು.

''ಆಯಿಷಾ... ನಾನು ತಲಾಖ್ ಕೊಟ್ಟೆ ಎಂದು ತಿಳಿದಾಗ ನಿನಗೇನೂ ಅನ್ನಿಸಲಿಲ್ವೇ?''

''ಇಲ್ಲ, ಅನ್ನಿಸಲಿಲ್ಲ... ನಾನಾಗಲೇ ಸತ್ತುಹೋಗಿದ್ದೆ... ಆ ಕ್ಷಣವೇ ಸತ್ತು ಹೋಗಿದ್ದೆ... ನಿಮಗೇ ಬೇಡ ಅಂದ ಮೇಲೆ ನನಗೇನು ಮಾಡೋಕಾಗುತ್ತೆ... ಆಮೇಲೆ ಈ ಶವಕ್ಕೆ ನನ್ನಪ್ಪ ಇನ್ನೊಂದು ಮದುವೆ ಮಾಡಿದ... ಎಲ್ಲ ಸುಳ್ಳು... ಮೋಸ..'' ಅವಳ ಮುಖದಲ್ಲಿ ಈಗ ದ್ವೇಷ, ಕ್ರೌರ್ಯ ತಾಂಡವವಾಡತೊಡಗಿತ್ತು. ಕೆಲವು ಹೊತ್ತು ಮೌನವಾಗಿ ಕುಳಿತವಳು ಧಡಕ್ಕನೆ ಎದ್ದು ನಿಂತು ''ನಾನು ಹೋಗ್ತೇನೆ'' ಎಂದಳು.

''ಆಯಿಷಾ... ಅಮ್ಮ ಇನ್ನೂ ಎಷ್ಟು ದಿನ ಬದುಕ್ತಾರೆ ಗೊತ್ತಿಲ್ಲ... ಪಶ್ಚಾತ್ತಾಪದಿಂದ ಬೆಂದು ನರಳ್ತಿದ್ದಾರೆ.. ಒಮ್ಮೆ ಮಾತನಾಡಿಸಿ ಹೋಗು...''

''ನನಗೆ ಹೆದರಿಕೆಯಾಗುತ್ತೆ... ಈ ಮುಖವನ್ನು ತೋರಿಸಲೇ ಅಸಹ್ಯವಾಗುತ್ತೆ''

''ಇಲ್ಲ ಆಯಿಷಾ... ಅಮ್ಮ ನಿನ್ನನ್ನು ತುಂಬ ಪ್ರೀತಿಸ್ತಾರೆ... ಬಾ...'' ಎನ್ನುತ್ತಾ ಆತ ಒಳಗೆ ನಡೆದ... ಅವಳು ಹಿಂಬಾಲಿಸಿದಳು.

''ಅಮ್ಮಾ... ಯಾರು ಬಂದಿದ್ದಾರೆ ನೋಡು...?''

ಮುದ್ದೆಯಾಗಿ ಬಿದ್ದುಕೊಂಡಿದ್ದ ಅಮ್ಮ ಹೊರಳಿದಳು. ಆತ ಅವರ ಪಕ್ಕ ಕುಳಿತ.

''ಯಾರು ಬಂದಿದ್ದಾರೆ ನೋಡಮ್ಮಾ...''

ಅಮ್ಮ ಕಣ್ಣುಬಿಟ್ಟರು... ಯಾರು? ಯಾರಪ್ಪಾ?

''ಆಯಿಷಾ.. ಆಯಿಷಾ ಬಂದಿದ್ದಾಳೆ...''

''ಯಾರೂ...?''

''ಆಯಿಷಾ..''

''ಎಲ್ಲಿಯಪ್ಪಾ... ನನಗೆ ಕಾಣಿಸುತ್ತಿಲ್ವಲ್ಲಾ... ನನ್ನನ್ನು ಸ್ವಲ್ಪ ಎದ್ದು ಕೂರಿಸು'' ಆ ಮುದಿ ದೇಹ ಕಾತರಿಸಿತು.

ಆಯಿಷಾಳ ಎದೆ ಜೋರಾಗಿ ಬಡಿದುಕೊಳ್ಳತೊಡಗಿತು... ಅವಳು ಅವರ ಕೈಯನ್ನು ತನ್ನ ಮುಷ್ಟಿಯೊಳಗೆ ಹಿಡಿದು ಎದೆಗೊತ್ತಿಕೊಂಡಳು.



''ಯಾರಮ್ಮಾ...''

''ನಾನತ್ತೆ.. ಆಯಿಷಾ...''

''ನಿಜವಾಗಿಯೂ ನೀನು ಆಯಿಷಾನಾ...?''

''ಹೌದತ್ತೆ''

''ನಾನು ಕನಸು ಕಾಣ್ತಿಲ್ಲ ತಾನೇ?''

''ಇಲ್ಲತ್ತೇ... ಇದು ಕನಸಲ್ಲ... ನಾನೇ ಬಂದಿದ್ದೇನೆ...'' ಅವಳು ಅವರ ಪಕ್ಕ ಕುಳಿತು

''ಅತ್ತೇ... ನನ್ನನ್ನು ಕ್ಷಮಿಸಿಬಿಡಿ...'' ಎಂದಳು.

''ಯಾಕಮ್ಮಾ... ಅಂತಹ ಮಾತಾಡ್ತಿಯಾ...? ತಪ್ಪು ಮಾಡಿದವಳು ನಾನು... ನಿಮ್ಮಿಬ್ಬರ ಜೀವನವನ್ನೇ ಹಾಳು ಮಾಡಿಬಿಟ್ಟ ಪಾಪಿ ನಾನು.... ಅದರ ಫಲವನ್ನು ಈಗ ಅನುಭವಿಸ್ತಿದ್ದೇನೆ...''

''ಇಲ್ಲತ್ತೇ... ನನ್ನದೇ ತಪ್ಪು... ನಾನು ನಿಮ್ಮನ್ನು ಅರ್ಥ ಮಾಡಿಕೊಳ್ಳಲಿಲ್ಲ... ನಿಮ್ಮನ್ನು ಏನೇನೋ ಅಂದುಬಿಟ್ಟೆ... ಅವಮಾನಿಸಿಬಿಟ್ಟೆ....'' ಅವರ ಕೈಯನ್ನೆತ್ತಿ ತನ್ನ ಕೆನ್ನೆಗೊತ್ತಿಕೊಂಡವಳಿಗೆ ದುಃಖ ಉಮ್ಮಳಿಸಿ ಬಂತು.

''ಮಗಳೇ...''

''ಹೂಂ...''

''ಚೆನ್ನಾಗಿದ್ದಿಯಾಮ್ಮಾ...''

ಅವಳು ತಲೆಯಾಡಿಸಿದಳು.

''ಎಷ್ಟು ಮಕ್ಕಳು ನಿನಗೆ...?''

''ಒಬ್ಬನೇ...''

''ಚೆನ್ನಾಗಿರಮ್ಮಾ... ನೀನಾದರೂ ಚೆನ್ನಾಗಿರು... ನೋಡಮ್ಮಾ... ಈ ನನ್ನ ಮಗನ ಹಟ ನೋಡಮ್ಮಾ... ನೀನು ಹೋದಾಗಿನಿಂದಲೂ ಹೀಗೇ ಇದ್ದಾನೆ... ಮದುವೆ ಮಾಡ್ಕೊಳ್ಳೋಂತ ಎಷ್ಟು ಹೇಳಿದರೂ ಕೇಳ್ತಾ ಇಲ್ಲ... ನೀನಾದರೂ ಹೇಳಮ್ಮಾ... ಒಂದು ಒಳ್ಳೆಯ ಹುಡುಗಿ ನೋಡಿ ಮದುವೆಯಾಗಲು ಹೇಳಮ್ಮಾ...''

ಅವಳಿಗೆ ಸಿಡಿಲು ಬಡಿದಂತಾಯಿತು. ಒಮ್ಮೆಲೇ ತಲೆ ಎತ್ತಿ ಅವನನ್ನೇ ದುರುಗುಟ್ಟಿ ನೋಡಿದಳು... ಆ ಕಣ್ಣಿನ ತೀಕ್ಷ್ಣತೆಯನ್ನು ಎದುರಿಸಲಾರದೆ ಆತ ತಲೆ ತಗ್ಗಿಸಿದ.

**ಉದಯವಾಣಿ**

# ಅನಾವರಣ

ವಾರದ ಹಿಂದೆ ಅಂಚೆಯವನು ತಂದ ಆಮಂತ್ರಣ ಪತ್ರ ಹಿಡಿದು ಹೊರಟಿದ್ದೆ. ಎಕ್ಸ್‌ಪ್ರೆಸ್‌ನಲ್ಲಿ ಹೋದರೆ ಒಂದು ಗಂಟೆಯ ಪ್ರಯಾಣ. ಈಗ ಬೆಳಗಿನ **8** ಗಂಟೆ. **9-30**ಕ್ಕೆ ಕಾರ್ಯಕ್ರಮ ಪ್ರಾರಂಭ. ಬಸ್ಸು ಹತ್ತಿದವನು ಆಮಂತ್ರಣ ಪತ್ರ ಬಿಡಿಸಿ ಮತ್ತೊಮ್ಮೆ ಕಣ್ಣಾಡಿಸಿದೆ. ಸ್ವಾಮೀಜಿಯವರಿಂದ ಉದ್ಘಾಟನೆಯೊಂದಿಗೆ ಕಾರ್ಯಕ್ರಮ ಪ್ರಾರಂಭ. ಆಮೇಲೆ ವಿವಿಧ ಗೋಷ್ಠಿಗಳು, ರಾಜಕಾರಣಿಗಳು, ಗಣ್ಯರ ಭಾಷಣ. ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕರು, ಸಿಬ್ಬಂದಿಗಳಿಗೆ ಸನ್ಮಾನ. ಸ್ಮರಣಸಂಚಿಕೆ ಬಿಡುಗಡೆ ಇತ್ಯಾದಿ. ಸಂಜೆ ಐದಕ್ಕೆ ಸಮಾರೋಪ. ಸಮಾರೋಪದ ಕೊನೆಯಲ್ಲಿ ಸಂತ ಫಿರ್‌ದೌಸರ ಆಶೀರ್ವಚನ. ಅನಂತರ ವಿದ್ಯಾರ್ಥಿಗಳಿಂದ ಮತ್ತು ಹಳೆವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ.

ನಾನೂ ಈ ವಿದ್ಯಾಸಂಸ್ಥೆಯ ಹಳೆವಿದ್ಯಾರ್ಥಿ. ಕಾಲೇಜು ಮುಗಿಸಿ ಈಗ ಹನ್ನೆರಡು ವರ್ಷಗಳೇ ಕಳೆದಿವೆ. ನಾನು ಓದಿದ ಕಾಲೇಜು ಎಂಬ ಅಭಿಮಾನ ಬಿಟ್ಟರೆ ಆಮೇಲೆ ಆ ವಿದ್ಯಾಸಂಸ್ಥೆಯ ಮೆಟ್ಟಿಲು ಹತ್ತಿರಲಿಲ್ಲ. ಇಂದು ಅಂತಹ ಒಂದು ಅವಕಾಶ ಒದಗಿ ಬಂದಿದೆ.

'ಭಾರತಿ ವಿದ್ಯಾಸಂಸ್ಥೆ'ಗೆ ಇಂದು ಐವತ್ತನೇ ವರ್ಷದ ಸಂಭ್ರಮ. ಈ ಸಂಸ್ಥೆಯಲ್ಲಿ ಓದಿ ದೇಶ ವಿದೇಶಗಳಲ್ಲಿ ದುಡಿಯುತ್ತಿರುವ ಹಳೆ ವಿದ್ಯಾರ್ಥಿಗಳು ಈ ವಾರ್ಷಿಕೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬಹುದು. ನನ್ನ ಹಲವಾರು ಸಹಪಾಠಿಗಳನ್ನು ಭೇಟಿಯಾಗಬಹುದೆಂಬ ನಿರೀಕ್ಷೆ ನನ್ನದು. ಇದೆಲ್ಲಕ್ಕಿಂತಲೂ ಸಂತ ಫಿರ್‌ದೌಸರ



ಆಗಮನ ನನ್ನಲ್ಲಿ ಕುತೂಹಲ ಮೂಡಿಸಿತ್ತು.

ಸಂತ ಫಿರ್‌ದೌಸ್ ಉತ್ತರಭಾರತದಲ್ಲಿ ಪ್ರಖ್ಯಾತ ವಿದ್ಯಾಸಂಸ್ಥೆಯೊಂದನ್ನು ನಡೆಸುತ್ತಿರುವ ಮಹಾನುಭಾವರು. ಸಂತರೆಂದೇ ಎಲ್ಲರಿಂದಲೂ ಗೌರವಿಸಲ್ಪಡುವವರು. ಅವರು ಸ್ಥಾಪಿಸಿದ ವಿದ್ಯಾಸಂಸ್ಥೆಗೆ ಅಂತಾರಾಷ್ಟ್ರೀಯ ಮಟ್ಟದ ಖ್ಯಾತಿ ಇದೆ. ಅವರ ಅನೇಕ ಲೇಖನಗಳು, ಸಂದರ್ಶನಗಳು ಕನ್ನಡದ ಬೇರೆ ಬೇರೆ ಪತ್ರಿಕೆಗಳಲ್ಲೂ ಪ್ರಕಟವಾಗುತ್ತಿರುತ್ತವೆ. ಲೇಖನದ ಬಗ್ಗೆ ಚರ್ಚೆ, ಸಂವಾದ ನಡೆದದ್ದೂ ಇದೆ. ಅವರು ಕನ್ನಡದವರು ಎಂದು ತಿಳಿದ ಮೇಲೆ ನನಗೂ ಅವರ ಮೇಲೆ ಅಭಿಮಾನ. ಅವರು ಈ ಸಮಾರಂಭದಲ್ಲಿ ಪಾಲ್ಗೊಳ್ಳುವ ಸುದ್ದಿ ಎಲ್ಲಾ ಪತ್ರಿಕೆಗಳಲ್ಲೂ ಭಾರೀ ಪ್ರಚಾರ ಪಡೆದಿತ್ತು. ಅವರು ಯಾವುದೇ ಸಭೆ, ಸಮಾರಂಭಗಳಲ್ಲಿ ಭಾಗವಹಿಸುವುದಿಲ್ಲ. ಯಾವುದೇ ರಾಜಕಾರಣಿಗಳ ಜೊತೆ ಸೇರುವುದಿಲ್ಲ ಎಂದು ಅವರ ಸಂದರ್ಶನದಲ್ಲೇ ಓದಿದ ನೆನಪು. ಹಾಗಾದರೆ ರಾಜಕಾರಣಿಗಳೇ ತುಂಬಿರುವ ಈ ಸಮಾರಂಭಕ್ಕೆ ಹೇಗೆ ಬರುತ್ತಿದ್ದಾರೆ? ಅವರ ನಡೆ - ನುಡಿಯಲ್ಲಿರುವ ಈ ವ್ಯತ್ಯಾಸ ನನ್ನಲ್ಲಿ ಗೊಂದಲ ಹುಟ್ಟಿಸಿತ್ತು. ಮಾತ್ರವಲ್ಲ ಅವರನ್ನೊಮ್ಮೆ ನೋಡಬೇಕೆಂಬ ಹಂಬಲವೂ ಇತ್ತು. ಹಾಗೆ ನಾನು ಇಡೀ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸುವ ಉದ್ದೇಶದಿಂದ ಹೊರಟಿದ್ದೆ.

ನಾನು ತಲುಪಿದಾಗ ಇನ್ನೂ ಕಾರ್ಯಕ್ರಮ ಪ್ರಾರಂಭವಾಗಿರಲಿಲ್ಲ. ಅದಾಗಲೇ ಸಾವಿರಾರು ವಿದ್ಯಾರ್ಥಿಗಳು, ಹೆತ್ತವರು, ಸಭಾಂಗಣದಲ್ಲಿ ನೆರೆದಿದ್ದರು. ಎಲ್ಲರ ಬಾಯಲ್ಲೂ ಸಂತರ ಬಗ್ಗೆಯೇ ಮಾತು, ಚರ್ಚೆ. ಅವರ ಆಗಮನದ ನಿರೀಕ್ಷೆ. ಅವರ ಆಶೀರ್ವಚನದಲ್ಲಿ ಭಾಗವಹಿಸಬೇಕೆಂಬ ಇಚ್ಛೆ.

ಸುಮಾರು ಇಪ್ಪತ್ತು ಎಕರೆ ಜಾಗದಲ್ಲಿ ವಿಶಾಲವಾಗಿ ಹರಡಿಕೊಂಡಿದ್ದ ಭಾರತಿ ವಿದ್ಯಾಸಂಸ್ಥೆ ಇಂದು ಸರ್ವಾಲಂಕೃತವಾಗಿ ಮದುಮಗಳಂತೆ ಕಾಣುತ್ತಿತ್ತು. ಹಳೆ ವಿದ್ಯಾರ್ಥಿಗಳ, ಊರ- ಪರವೂರ ದಾನಿಗಳ ನೆರವಿನಿಂದ ಈ ಸಂಸ್ಥೆ ಇತ್ತೀಚೆಗೆ ಬಹಳಷ್ಟು ಅಭಿವೃದ್ಧಿ ಹೊಂದಿತ್ತು. ಒಮ್ಮೆಗೆ ಸುಮಾರು ಹತ್ತು ಸಾವಿರ ಜನ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ವ್ಯವಸ್ಥೆ ಮಾಡಲಾಗಿತ್ತು. ನಾನು ಮುಂದಿನ ಒಂದು ಆಸನವನ್ನು ಆರಿಸಿ ಕುಳಿತುಕೊಂಡೆ.

ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ಪ್ರಾರಂಭವಾಯಿತು. ಗೋಷ್ಠಿಗಳು, ಸನ್ಮಾನ, ಪುಸ್ತಕ ಬಿಡುಗಡೆ ಹೀಗೆ ಒಂದೊಂದೇ ಕಾರ್ಯಕ್ರಮದಲ್ಲಿ ಸಮಯ ಸರಿದದ್ದೇ ತಿಳಿಯಲಿಲ್ಲ. ಮಧ್ಯಾಹ್ನದ ಊಟ, ಸಂಜೆಯ ಕಾಫಿ ಎಲ್ಲ ವ್ಯವಸ್ಥೆಯೂ ಅಲ್ಲಿತ್ತು. ಸಂಜೆಯ ಸಮಾರೋಪಕ್ಕೆ ಜನಸಾಗರವೇ ನೆರೆಯಿತು. ಸಂತರನ್ನು ಹತ್ತಿರದಿಂದ ನೋಡಬೇಕೆಂದು ನಾನು ಮುಂದಿನ ಆಸನವನ್ನು ಬಹಳ ಕಷ್ಟದಿಂದ ಉಳಿಸಿಕೊಂಡಿದ್ದೆ.

ಸಮಾರೋಪ ಕಾರ್ಯಕ್ರಮ ಪ್ರಾರಂಭವಾಯಿತು. ವೇದಿಕೆಯಲ್ಲಿ ರಾಜಕಾರಣಿಗಳು, ಸಾಹಿತಿಗಳು, ಕ್ರೈಸ್ತ ಪಾದ್ರಿಗಳು, ಸ್ವಾಮೀಜಿಗಳು, ಗಣ್ಯವ್ಯಕ್ತಿಗಳ ಸಾಲೇ ಇತ್ತು. 'ಸಂತರು ಇನ್ನು ಕೆಲವೇ ನಿಮಿಷಗಳಲ್ಲಿ ವೇದಿಕೆಗೆ ಬರಲಿದ್ದಾರೆ' ಎಂದು ಕಾರ್ಯಕ್ರಮ ನಿರೂಪಕ ಪದೇ ಪದೇ ಹೇಳುತ್ತಿದ್ದ. ಕಾರ್ಯಕ್ರಮ ಕೊನೆಯ ಹಂತ ತಲುಪುತ್ತಿದ್ದಂತೆಯೇ ವೇದಿಕೆಯ ಬಳಿ ಬಿಳಿ ಕಾರೊಂದು ಬಂದು ನಿಂತಿತು. ಅದರಿಂದ ಇಳಿದ ವ್ಯಕ್ತಿಯೊಬ್ಬರು ಅವಸರವಸರವಾಗಿ ವೇದಿಕೆಯೇರಿ ಬರುತ್ತಿದ್ದಂತೆಯೇ, ವೇದಿಕೆಯಲ್ಲಿದ್ದ ಗಣ್ಯರೆಲ್ಲ ಎದ್ದು ನಿಂತರು. ''ರಾಷ್ಟ್ರ ಅಂತಾರಾಷ್ಟ್ರೀಯ ಖ್ಯಾತಿಯ ಶಿಕ್ಷಣತಜ್ಞ, ನಾವು ಬಹು ನಿರೀಕ್ಷೆಯಿಂದ ಕಾಯುತ್ತಿದ್ದ ಸಂತ ಫಿರ್‌ದೌಸ್‌ರವರು ವೇದಿಕೆಗೆ ಆಗಮಿಸಿದ್ದಾರೆ. ಅವರನ್ನು ನಾನು ಗೌರವಪೂರ್ವಕವಾಗಿ ಸ್ವಾಗತಿಸುತ್ತೇನೆ. ಅವರು ಇನ್ನು ಕೆಲವೇ ಸಮಯದಲ್ಲಿ ನಮಗೆಲ್ಲರಿಗೂ ಆಶೀರ್ವಚನ ನೀಡಲಿದ್ದಾರೆ'' ಎಂಬ ನಿರೂಪಕನ ಮಾತು ಎಲ್ಲರಲ್ಲೂ ಸಂಚಲನ ಉಂಟುಮಾಡಿತು.

ಸಪೂರ ಕಡ್ಡಿಯಂತಹ ದೇಹ, ಚೌಕುಳಿ ಬಿಳಿ ಅಂಗಿ, ಅದರ ಮೇಲೊಂದು ಜುಬ್ಬ, ಹೆಗಲಲ್ಲಿ ಬಿಳಿ ಶಾಲು, ಮುಖ ತುಂಬಾ ನೆರೆತ ಗಡ್ಡ, ಬೋಳು ತಲೆಯಲ್ಲಿ ಅಲ್ಲಲ್ಲಿ ಮಿನುಗುವ ಕೂದಲು...

ಸಂತರು ಬಂದು ಮೈಕ್‌ನ ಮುಂದೆ ನಿಂತರು.

''ಎಲ್ಲರಿಗೂ ನಮಸ್ಕಾರ...'' ಎರಡು ಕೈಗಳನ್ನೂ ಜೋಡಿಸಿ ಹಣೆಗೊತ್ತಿ ಮುಗಿದು ಒಂದು ಕ್ಷಣ ಕಣ್ಣು ಮುಚ್ಚಿ ನಿಂತುಕೊಂಡರು.

ಸಭಿಕರೆಲ್ಲ ಭಕ್ತಿಯಿಂದ ಪ್ರತಿಯಾಗಿ ಕೈಮುಗಿದರು. ಎಲ್ಲರ ಕಣ್ಣುಗಳಲ್ಲೂ ಹೊಳಪು, ಮುಖದಲ್ಲಿ ಕಾತರ. ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ದ.

''ಓ ಅಲ್ಲಿ ಒಂದು ಅರಳಿ ಮರ ಕಾಣುತ್ತದೆ ನೋಡಿ. ಐವತ್ತು ವರ್ಷಗಳ ಹಿಂದೆ ಆ ಮರದಡಿಯಲ್ಲಿ ಒಂದು ಚಿಕ್ಕ ಗುಡಿ ಇತ್ತು. ತೆಂಗಿನ ಸೋಗೆಯಿಂದ ನಿರ್ಮಿಸಿದ ಗುಡಿ ಅದು. ಗುಡಿಯಲ್ಲಿ ಹನುಮಂತನ ವಿಗ್ರಹವಿತ್ತು. ಪ್ರತಿದಿನ ಬೆಳಗ್ಗೆ ಊರವರಿಂದ ಆ ವಿಗ್ರಹಕ್ಕೆ ಪೂಜೆ ಸಲ್ಲುತ್ತಿತ್ತು. ನಾರಾಯಣ ಭಟ್ಟರು ಅಂತ ಆ ಗುಡಿಯ ಅರ್ಚಕರು...''

''ಏನು ಹೇಳುತ್ತಿದ್ದಾರೆ ಸಂತರು? ಆಶೀರ್ವಚನಾಂತ ಹೇಳಿ ಕತೆ ಹೇಳುತ್ತಿದ್ದಾರಲ್ಲ?'' ಜನರೆಲ್ಲ ಮುಖ ಮುಖ ನೋಡಿಕೊಂಡರು.

''ಆ ಗುಡಿಯ ಪಕ್ಕದಲ್ಲಿ ಒಂದು ಮದ್ರಸಾ ಇತ್ತು. ತಟ್ಟಿ, ಹುಲ್ಲಿನಿಂದ ಕಟ್ಟಿದ ಮದ್ರಸಾ. ಮುಸ್ಲಿಂ ಮಕ್ಕಳು ಅಲ್ಲಿ ಧಾರ್ಮಿಕ ಪಾಠ ಕಲಿಯುತ್ತಿದ್ದರು. ಒಮ್ಮೆ ಈ ಮದ್ರಸಾಕ್ಕೆ ಒಬ್ಬ ಮೌಲವಿ ಬಂದರು. ಅವರು ಬಂದದ್ದು 'ದೀವ್'ನಿಂದ. ಆರಡಿ



ಎತ್ತರದ ದೇಹ. ಬಿಳಿ ಉಡುಗೆ, ಚಂದ್ರನಂತೆ ಉರುಟಾದ ಮುಖ. ಹೊಳೆಯುವ ಕಣ್ಣುಗಳು, ತಲೆಗೊಂದು ಬಿಳಿ ಮುಂಡಾಸು, ಎದೆವರೆಗೆ ಬಿಟ್ಟ ಗಡ್ಡ. ಸುಮಾರು ಇಪ್ಪತ್ತೆರಡು - ಇಪ್ಪತ್ತಮೂರರ ಪ್ರಾಯವಿರಬಹುದು. ಅವರು ಬಂದದ್ದೇ ಊರಿನ ಮುಸ್ಲಿಮರ ಮನೆ ಮನೆಗೆ ತೆರಳಿ ಮಕ್ಕಳನ್ನು ಮದ್ರಸಾಕ್ಕೆ ಕಳುಹಿಸುವಂತೆ ವಿನಂತಿಸ ತೊಡಗಿದರು. ಮೌಲವಿಯ ಕರೆಗೆ ಮದ್ರಸಾದ ತುಂಬಾ ಮಕ್ಕಳು ತುಂಬಿದರು. ದಿನ ಕಳೆಯುತ್ತಿದ್ದಂತೆಯೇ ಅವರು 'ದೀವ್‌ನ ಉಸ್ತಾದ್' ಎಂದೇ ಖ್ಯಾತರಾದರು. ಅವರು ಊರಿನ ಜನರ ಕಷ್ಟ - ಸುಖದಲ್ಲಿ ಪಾಲ್ಗೊಂಡರು. ಪ್ರೀತಿ - ಗೌರವಕ್ಕೆ ಪಾತ್ರರಾದರು. ಹೀಗಿರುವಾಗಲೇ ಅವರಿಗೆ ನಾರಾಯಣ ಭಟ್ಟರ ಪರಿಚಯವಾದದ್ದು. ಪರಿಚಯ ಸ್ನೇಹವಾಯಿತು. ಆಮೇಲೆ ಇಬ್ಬರೂ ಒಡಹುಟ್ಟಿದವರಂತೆ, ಎಲ್ಲಿಗೆ ಹೋಗುವುದಿದ್ದರೂ ಒಟ್ಟಿಗೆ. ಬಿಡುವಿನ ಸಮಯದಲ್ಲಿ ಅರಳಿ ಕಟ್ಟೆಯಲ್ಲೋ, ಮದ್ರಸಾದ ಜಗಲಿಯಲ್ಲೋ ಗಂಟೆಗಟ್ಟಲೆ ಕುಳಿತು ಅದೇನೋ ಮಾತನಾಡುತ್ತಿದ್ದರು. ಒಮ್ಮೊಮ್ಮೆ ಅರ್ಚಕರು ಮೌಲವಿಯನ್ನು ತಮ್ಮ ಮನೆಗೆ ಊಟಕ್ಕೆ ಕರೆದೊಯ್ಯುತ್ತಿದ್ದುದೂ ಉಂಟು.''

''ಒಂದು ದಿನ ಮೌಲವಿ ಮತ್ತು ಅರ್ಚಕರು ಊರಿನಲ್ಲಿರುವ ಎಲ್ಲ ಮನೆಗಳಿಗೆ ತೆರಳಿ ಇಂದು ಸಂಜೆ ಅರಳಿ ಕಟ್ಟೆಯ ಬಳಿ ಒಂದು ಸಭೆ ಕರೆದಿರುವುದಾಗಿಯೂ ಪ್ರತಿ ಮನೆಯ ಗಂಡಸರು ಆ ಸಭೆಯಲ್ಲಿ ಪಾಲ್ಗೊಳ್ಳಬೇಕಾಗಿಯೂ ವಿನಂತಿಸಿಕೊಂಡರು. ಸಂಜೆಯಾಗುತ್ತಲೇ ಜಾತಿ ಭೇದವಿಲ್ಲದೆ ಪ್ರತಿ ಮನೆಯ ಗಂಡಸರೂ ಅರಳಿ ಕಟ್ಟೆಯ ಬಳಿ ಸೇರಿದರು. ನೆರೆದವರನ್ನುದ್ದೇಶಿಸಿ ಮಾತನಾಡಲು ಮೌಲವಿಯವರು ಎದ್ದು ನಿಂತರು.''

''ಸಹೋದರರೇ, ಈ ಊರಿನಲ್ಲಿ ಸುಮಾರು ನೂರಕ್ಕೂ ಹೆಚ್ಚು ಮನೆಗಳಿವೆ. ಪ್ರತಿಯೊಂದು ಮನೆಯಲ್ಲಿಯೂ ಅವರವರದೇ ಆದ ಸಮಸ್ಯೆ, ಕಷ್ಟಗಳಿವೆ. ಒಪ್ಪೊತ್ತಿನ ಗಂಜಿಗೂ ಗತಿಯಿಲ್ಲದಂತಹ ಅದೆಷ್ಟೋ ಮನೆಗಳು ಈ ಊರಿನಲ್ಲಿವೆ. ನಾವೆಲ್ಲ ಒಟ್ಟಾಗಿ ನಿಂತರೆ ಇಂತಹ ಸಮಸ್ಯೆಗಳನ್ನೆಲ್ಲ ಪರಿಹರಿಸಿಕೊಳ್ಳಲು ಸಾಧ್ಯವಿದೆ. ಉದಾಹರಣೆಗೆ ನಮ್ಮೂರಿನಲ್ಲಿ ಒಂದು ಶಾಲೆ ಇಲ್ಲ. ಅಕ್ಷರ ಜ್ಞಾನವಿರುವ ಒಬ್ಬನೇ ಒಬ್ಬ ಈ ಊರಿನಲ್ಲಿಲ್ಲ. ಅಕ್ಷರ ಕಲಿಯಬೇಕಾದರೆ ಇಲ್ಲಿಂದ ಇಪ್ಪತ್ತು ಮೈಲಿ ನಡೆಯಬೇಕು. ಇದು ಆಗದ ಮಾತು. ಹಾಗೆಂತ ನಾವು ಕೈಕಟ್ಟಿ ಕುಳಿತುಕೊಳ್ಳುವಂತಿಲ್ಲ. ನಮ್ಮಂತೆ ನಮ್ಮ ಮಕ್ಕಳೂ ನಿರಕ್ಷರಿಗಳಾಗಬಾರದು. ಅವರಿಗೆ ವಿದ್ಯೆ ಕೊಡಬೇಕು. ವಿದ್ಯೆಯಿಲ್ಲದ ಮನುಷ್ಯ ಪ್ರಾಣಿಗಿಂತ ಕಡೆ. ವಿದ್ಯೆ ಇಲ್ಲದೆ ಅಭಿವೃದ್ಧಿ ಹೊಂದಲು ಸಾಧ್ಯವೇ ಇಲ್ಲ. ಅದಕ್ಕಾಗಿ ಈ ಊರಿನಲ್ಲಿ ಒಂದು ಶಾಲೆ ತೆರೆಯಬೇಕೆಂದು ಅರ್ಚಕರು ಮತ್ತು ನನ್ನ ಆಸೆ. ಈ ಬಗ್ಗೆ ಬಹಳಷ್ಟು ಚರ್ಚಿಸಿಯೇ ನಾವು ಈ ನಿರ್ಧಾರಕ್ಕೆ ಬಂದಿದ್ದೇವೆ. ಇದಕ್ಕೆ

ನಿಮ್ಮೆಲ್ಲರ ಒಪ್ಪಿಗೆ ಸಹಕಾರ ಬೇಕು ಎಂದು ಹೇಳಿ ಮೌಲವಿ ಕುಳಿತುಕೊಂಡರು.''

''ಈಗ ಅರ್ಚಕರು ಎದ್ದು ನಿಂತು; ಜನರೇ, ಈ ಊರಿಗೊಂದು ಶಾಲೆ ಬೇಕೆಂಬ ಕನಸು ನನಗೆ ಬಹಳ ಹಿಂದೆಯೇ ಇತ್ತು. ಆದರೆ ಅದನ್ನು ನಿಮಗೆ ಮನದಟ್ಟು ಮಾಡಲು, ಸ್ಥಾಪಿಸಲು ನನ್ನಲ್ಲಿ ಧೈರ್ಯವಿರಲಿಲ್ಲ. ಈಗ ನನ್ನ ಜೊತೆ ಮೌಲವಿ ಇದ್ದಾರೆ. ಶಾಲೆಯನ್ನು ಸ್ಥಾಪಿಸಿಯೇ ಸಿದ್ಧ ಎಂದು ನಾವಿಬ್ಬರೂ ನಿರ್ಧರಿಸಿದ್ದೇವೆ. ಜನ ಶಿಕ್ಷಿತರಾಗ ಬೇಕು. ಈ ಊರು ಅಭಿವೃದ್ಧಿ ಹೊಂದಬೇಕು ಎಂಬುದೇ ನನ್ನ ಉದ್ದೇಶ. ಇದಕ್ಕಾಗಿ ನೀವೇನೂ ಖರ್ಚು ಮಾಡಬೇಕಾಗಿಲ್ಲ. ನಿಮ್ಮ ಮಕ್ಕಳಿಗೆ ಒಂದು ಸ್ಲೇಟು, ಕಡ್ಡಿ ಕೊಟ್ಟು ಶಾಲೆಗೆ ಕಳುಹಿಸಿದರೆ ಸಾಕು. ಹಗಲು ಹೊತ್ತು ಮದ್ರಸಾ ಕಟ್ಟಡ ಖಾಲಿ ಇರುತ್ತದೆ. ಅದನ್ನು ಶಾಲೆಗಾಗಿ ಬಳಸುವಂತೆ ಮೌಲವಿಯರು ಹೇಳಿದ್ದಾರೆ. ನಾನು ಮತ್ತು ಮೌಲವಿಯವರು ಮಕ್ಕಳಿಗೆ ಪಾಠ ಹೇಳಿಕೊಡುತ್ತೇವೆ. ನನ್ನ ಮಗಳೂ ಸ್ವಲ್ಪ ಓದಿದ್ದಾಳೆ. ಅವಳನ್ನು ಪಾಠ ಹೇಳಿಕೊಡಲು ಕಳುಹಿಸುತ್ತೇನೆ. ನೀವೆಲ್ಲರೂ ಈ ಪುಣ್ಯ ಕಾರ್ಯದಲ್ಲಿ ಸಹಕರಿಸಬೇಕು, ಎನ್ನುತ್ತಾ ಕೈಮುಗಿದು ಕುಳಿತರು.''

''ಇದಾಗಿ ತಿಂಗಳೊಳಗೆ ಮದ್ರಸಾ ಕಟ್ಟಡದಲ್ಲಿ ಶಾಲೆ ಪ್ರಾರಂಭವಾಯಿತು. ದಿನದಿಂದ ದಿನಕ್ಕೆ ಮಕ್ಕಳ ಸಂಖ್ಯೆ ಹೆಚ್ಚಾಗತೊಡಗಿತು. ಆರೇ ತಿಂಗಳಲ್ಲಿ ಊರವರೆಲ್ಲ ಸೇರಿ ಮದ್ರಸಾ ಕಟ್ಟಡವನ್ನು ವಿಸ್ತರಿಸಿದರು. ಅನಂತರ ರಾತ್ರಿ ವೇಳೆಯಲ್ಲಿ ವಯಸ್ಕರ ಶಾಲೆಯೂ ಪ್ರಾರಂಭವಾಯಿತು. ಊರವರಿಂದಲೇ ಬೆಂಚು, ಮೇಜುಗಳು ದೇಣಿಗೆಯಾಗಿ ಬರತೊಡಗಿದವು. ಎರಡು ವರ್ಷಗಳಲ್ಲಿ ಊರಿನ ಚಿತ್ರಣವೇ ಬದಲಾಗಿಬಿಟ್ಟಿತು.''

ನಾನು ಕುಳಿತದಲ್ಲಿಂದಲೇ ಒಮ್ಮೆ ತಿರುಗಿ ನೋಡಿದೆ. ಬೊಂಬೆ ಕೂರಿಸಿದಂತೆ ಕುಳಿತಿತ್ತು ಜನಸಮೂಹ. ಸಂತರ ಬಾಯಿಯಿಂದ ಹೊರಡುವ ಒಂದೊಂದು ಶಬ್ದವನ್ನೂ ಮೈಮರೆತು ಆಲಿಸುತ್ತಿತ್ತು.

''ಓ ಅಲ್ಲಿ ಕಾಣುತ್ತಿದೆ ನೋಡಿ ಮಸೀದಿಯ ಮಿನಾರ.'' ಜನರೆಲ್ಲಾ ವಿದ್ಯಾ ಸಂಸ್ಥೆಯ ಆವರಣದ ಹೊರಗೆ ಎತ್ತರದಲ್ಲಿ ಕಾಣುತ್ತಿದ್ದ ಮಿನಾರದತ್ತ ಮುಖ ತಿರುಗಿಸಿದರು. ''ಆ ಜಾಗದಲ್ಲಿ ಆಗ ಮಣ್ಣಿನಿಂದ ಕಟ್ಟಿದ್ದ ಒಂದು ಚಿಕ್ಕ ಮಸೀದಿ ಯಿತ್ತು. ಮಸೀದಿಯ ಪಕ್ಕ ಐದು ಗುಡಿಸಲುಗಳಿದ್ದುವು. ಇದು ಅನಾಥರಿಗಾಗಿ ಮಸೀದಿ ಕಮಿಟಿಯವರು ಕಟ್ಟಿಸಿಕೊಟ್ಟ ಗುಡಿಸಲುಗಳು. ಒಂದು ಗುಡಿಸಲಿನಲ್ಲಿ ತಂದೆ, ತಾಯಿಯನ್ನು ಕಳೆದುಕೊಂಡ ಇಬ್ಬರು ಅನಾಥ ಮಕ್ಕಳಿದ್ದರು. ಅವರಲ್ಲಿ ಮದುವೆಯ ಪ್ರಾಯಕ್ಕೆ ಬಂದ ಹೆಣ್ಣುಮಗಳೊಬ್ಬಳಿದ್ದಳು. ಹೆಸರು ಸಕೀನಾ. ಮತ್ತೊಬ್ಬ ಅವಳ ತಮ್ಮ ಹಮೀದ್. ಮಸೀದಿಗೆ ಬಂದವರು, ನೆರೆಹೊರೆಯವರು, ಯಾರಾದರೂ ಕೊಡಬೇಕು... ಹಾಗಿದ್ದರೆ ಮಾತ್ರ ಸಕೀನಾಳ ಮನೆಯಲ್ಲಿ ಒಲೆ ಉರಿಯುತ್ತಿತ್ತು.



ಇಲ್ಲದಿದ್ದರೆ ಉಪವಾಸ.''

''ಒಂದು ದಿನ ಮೌಲವಿ ಶಾಲೆಗೆ ಸರಿಯಾಗಿ ಬಾರದ ಹಮೀದ್‌ನನ್ನು ವಿಚಾರಿಸಿಕೊಂಡು ಬರಲು ಸಕೀನಾಳ ಮನೆಯ ಕದ ತಟ್ಟಿದರು. ಬಾಗಿಲು ತೆಗೆದದ್ದು ಸಕೀನಾ. ಸಕೀನಾಳನ್ನು ನೋಡಿದ ಮೌಲವಿಗೆ ಅವಳ ದೇಹದಿಂದ ಕಣ್ಣು ಕೀಳಲಾಗಲಿಲ್ಲ. ಅರಳಿದ ಮಲ್ಲಿಗೆ, ಪೌರ್ಣಮಿಯ ಚಂದಿರ, ಮೊಗ್ಗು ಗುಲಾಬಿ... ಇಲ್ಲ... ಇದ್ಯಾವುದಕ್ಕೂ ಹೋಲಿಸಲು ಸಾಧ್ಯವಿಲ್ಲ. ಧರ್ಮಗ್ರಂಥದಲ್ಲಿ ವಿವರಿಸಲ್ಪಟ್ಟಿರುವ ಸ್ವರ್ಗ ಸುಂದರಿ ಮೌಲವಿಯ ಮುಂದೆ ನಿಂತಿದ್ದಳು. ಮೌಲವಿಯ ನೋಟಕ್ಕೆ ನಾಚಿ ನೀರಾಗಿ ನೆಲ ನೋಡುತ್ತಾ ಬಾಗಿಲ ಮರೆಗೆ ಸರಿದಿದ್ದಳು.''

ಮರಳಿ ಬಂದ ಮೌಲವಿ ಅರ್ಚಕರೊಂದಿಗೆ ಹೇಳಿದರು. ''ಅರ್ಚಕರೇ, ನಾನಿಂದು ಒಂದು ಅದ್ಭುತವನ್ನು ಕಂಡೆ. ದೇವರು ಸೃಷ್ಟಿಸಿದ ಅದ್ಭುತ.''

''ಏನದು?'' ಅರ್ಚಕರು ಕುತೂಹಲಗೊಂಡರು.

''ಒಂದು ಹೆಣ್ಣು! ಆ ರೂಪ ಇನ್ನೂ ನನ್ನ ಕಣ್ಣೊಳಗೆ ನರ್ತಿಸುತ್ತಿದೆ.''

''ಎಲ್ಲಿ?'' ಅರ್ಚಕರಿಗೆ ಅರ್ಥವಾಗಿತ್ತು.

''ಇದೇ ಊರಿನಲ್ಲಿ, ಒಂದು ಅನಾಥ ಕುಟೀರದಲ್ಲಿ''.

''ಅನಾಥೆಯನ್ನು ಬಾಳ ಸಂಗಾತಿಯನ್ನಾಗಿ ಮಾಡಿಕೊಳ್ಳಬೇಕೆಂಬ ಆಸೆ ಇದೆಯಾ?''

''ಹೌದು, ನೀವೇ ಮುಂದೆ ನಿಂತು ಎಲ್ಲವನ್ನೂ ನಡೆಸಿಕೊಡಬೇಕು.''

ಮತ್ತೆ ತಿಂಗಳೊಳಗೆ ಮದುವೆ ನಡೆದಿತ್ತು.

ಊರವರೆಲ್ಲ ಸೇರಿ ಹೊಸ ದಂಪತಿಗೆ ಮದರಸಾದ ಬದಿಯಲ್ಲಿಯೇ ಒಂದು ಗುಡಿಸಲು ಕಟ್ಟಿಕೊಟ್ಟರು.

''ಕ್ಷಮಿಸಿ...'' ಎಂದು ತನ್ನ ಮಾತನ್ನು ನಿಲ್ಲಿಸಿದ ಸಂತರು ಅಲ್ಲೇ ಇದ್ದ ನೀರಿನ ಗ್ಲಾಸನ್ನು ಎತ್ತಿಕೊಂಡು ಕುಡಿದರು. ಹೆಗಲ ಮೇಲಿನ ಶಾಲಿನಿಂದ ಮುಖ, ಕತ್ತಿನ ಬೆವರೊರೆಸಿಕೊಂಡು ಮತ್ತೆ ಮುಂದುವರಿಸಿದರು.

''ನಾನು ಹಮೀದ್ ಎಂದು ಹೇಳಿದೆನಲ್ಲ, ಸಕೀನಾಳ ತಮ್ಮ ಹಮೀದ್, ಈತ ಒಬ್ಬ ದೊಡ್ಡ ಕಳ್ಳ. ಈತ ಕಳ್ಳಾಂತ ಊರಿನ ಹೆಚ್ಚಿನ ಜನರಿಗೆ ತಿಳಿದಿತ್ತು. ಆದರೆ ಮೌಲವಿಗೆ ಮಾತ್ರ ಗೊತ್ತೇ ಇರಲಿಲ್ಲ. ಆತ ಕಳ್ಳತನ ಮಾಡುವಾಗ ಎಷ್ಟೋ ಸಲ ಸಿಕ್ಕಿಬಿದ್ದದ್ದೂ ಇದೆ. ಊರಿನ ಜನ ಕಟ್ಟಿ ಹಾಕಿ ಬಡಿದದ್ದೂ ಇದೆ. ಪೊಲೀಸ್ ಠಾಣೆ ಹತ್ತಿಸಿದ್ದೂ ಇದೆ. ಆದರೆ ಆತ ಕಳ್ಳತನ ಪ್ರಾರಂಭಿಸಿದ್ದು ತನ್ನ ಹೊಟ್ಟೆಯ ಹಸಿವಿಗಾಗಿ. ತನ್ನ ಅಕ್ಕನ ಮೇಲಿನ ಪ್ರೀತಿ, ಜವಾಬ್ದಾರಿಯಿಂದಾಗಿ. ಯಾರೋ, ಯಾವಾಗಲೋ

ದಾನ ಎಂದು ಕೊಡುವ ಪುಡಿಗಾಸು, ಹಿಡಿಯಕ್ಕಿ ಅವರ ಹೊಟ್ಟೆ ತಣಿಸುತ್ತಿರಲಿಲ್ಲ. ಬೋಳು ಬೋಳಾದ ಅಕ್ಕನ ಕಿವಿ, ಕತ್ತು, ಕೈ, ಅವಳು ಉಡುತ್ತಿದ್ದ ಚಿಂದಿ ಬಟ್ಟೆ... ಅವಳಿಗೊಂದು ಮದುವೆ ಮಾಡಬೇಕು, ಅವಳ ಬಾಳು ಸುಂದರವಾಗಿರಬೇಕೆಂಬ ಕನಸು ಅವನನ್ನು ಕಳ್ಳತನಕ್ಕಿಳಿಸಿತ್ತು. ಕಳ್ಳನೆಂಬ ಬಿರುದಿನಿಂದ ಅವನಿಗೆ ಯಾರೂ ಕೆಲಸ ಕೊಡುತ್ತಿರಲಿಲ್ಲ. ಕ್ರಮೇಣ ಕಳ್ಳತನ ಅವನಿಗೊಂದು ಚಾಳಿಯಾಗಿಬಿಟ್ಟಿತ್ತು.

''ಅಕ್ಕನ ಮದುವೆಯಾಗಿ ಅವಳು ಬೇರೆ ಮನೆಯಲ್ಲಿ ಸಂಸಾರ ಹೂಡಿದ ಮೇಲೆ ಹಮೀದ್ ಆ ಮನೆಗೆ ಹೋಗುವುದನ್ನೇ ಕಡಿಮೆ ಮಾಡಿದ. ತನ್ನ ಕೆಟ್ಟ ಹೆಸರಿನಿಂದ ಭಾವನಿಗೆ ತೊಂದರೆಯಾಗಬಾರದೆಂದು ಆತ ಸಾಧ್ಯವಿರುವಷ್ಟೂ ದೂರವಾಗತೊಡಗಿದ.''

''ಸಕೀನಾಳಿಗೆ ನಿಧಿ ಸಿಕ್ಕಿದಂತಾಗಿತ್ತು. ಕನಸಿನಲ್ಲೂ ಎಣಿಸದ ಒಂದು ನಿಧಿ. ಅವಳು ಗಂಡನ ನೆರಳಾದಳು. ಪ್ರೀತಿಯ ಕಣ್ಣಾದಳು. ಊರಿನ ಮನೆಗಳಿಗೆಲ್ಲ ಮಗಳಾದಳು. ಆದರೆ ಅವಳ ಮನಸ್ಸು ತಮ್ಮನಿಗಾಗಿ ಹಂಬಲಿಸಿತು. ಅವನಿಗಾಗಿ ಪ್ರಾರ್ಥಿಸಿತು. ಎಲ್ಲಿ ಅವನ ಕೆಟ್ಟ ನಡತೆ ಗಂಡನಿಗೆ ತಿಳಿದುಬಿಡುತ್ತದೋ ಎಂದು ಅಳುತ್ತಿತ್ತು. ಆತ ಬಂದಾಗಲೆಲ್ಲಾ ಅವಳು ಬುದ್ಧಿ ಹೇಳಿದಳು. ನಿನ್ನ ಭಾವನ ಮಾನ ಕಾಪಾಡೋ ಎಂದು ಕಣ್ಣೀರಿಟ್ಟಳು. ಅವನು ಬಂದಾಗಲೆಲ್ಲ ಅಕ್ಕನಿಗೆ ಭಾಷೆ ಕೊಟ್ಟು ಹೋಗುತ್ತಿದ್ದ. ಕ್ರಮೇಣ ಅವನು ಬರುವುದನ್ನೇ ನಿಲ್ಲಿಸಿಬಿಟ್ಟಿದ್ದ.''

''ಮೌಲವಿ ಮತ್ತು ಅರ್ಚಕರ ದೇಹ ಎರಡಾದರೂ ಮನಸ್ಸು ಒಂದೇ ಆಗಿತ್ತು. ಅವರು ಸದಾ ಕಾಲ ಶಾಲೆಯ ಬಗ್ಗೆಯೇ ಮಾತನಾಡುತ್ತಿದ್ದರು. ಶಾಲೆಯ ಅಭಿವೃದ್ಧಿಯ ಬಗ್ಗೆಯೇ ಚಿಂತಿಸುತ್ತಿದ್ದರು. ಇಬ್ಬರೂ ಊರು, ಪರವೂರು ಸುತ್ತಿದರು. ಚಂದಾ ಎತ್ತಿದರು. ಶಾಲೆಗೆ ಮಣ್ಣಿನ ಗೋಡೆ ನಿಲ್ಲಿಸಿದರು. ಮಂಗಳೂರು ಹಂಚು ಹೊದಿಸಿದರು. ಕೊಠಡಿಗಳನ್ನು ವಿಸ್ತರಿಸಿದರು. ಉಪಾಧ್ಯಾಯರನ್ನು ನೇಮಿಸಿದರು. ತಮ್ಮ ಇಡೀ ಜೀವನವನ್ನು ಶಾಲೆಯ, ಊರಿನ ಅಭಿವೃದ್ಧಿಗಾಗಿ ಮುಡಿಪಾಗಿಟ್ಟರು...''

''ಮಹನೀಯರೇ, ಈ ಇಬ್ಬರೂ ಮಹಾನುಭಾವರು ತಮ್ಮ ರಕ್ತವನ್ನು ಬೆವರಾಗಿಸಿ ದುಡಿದ ಫಲವೇ ಈ 'ಭಾರತಿ ವಿದ್ಯಾಸಂಸ್ಥೆ'. ಆ ಮಹಾತ್ಮರು ಸ್ಥಾಪಿಸಿದ ಸಂಸ್ಥೆ ಇದು. ಆದರೆ ಅವರ ಒಂದು ಚಿಕ್ಕ ಕುರುಹು ಕೂಡಾ ಈಗ ಇಲ್ಲಿ ಕಾಣುತ್ತಿಲ್ಲ. ಅವರ ನೆನಪು ಕೂಡಾ ಇಲ್ಲಿ ಯಾರಿಗೂ ಇಲ್ಲ. ಇಂದು ಈ ಸಂಸ್ಥೆ ತನ್ನ ಐವತ್ತನೇ ವಾರ್ಷಿಕೋತ್ಸವ ವನ್ನು ನಡೆಸುತ್ತಿದೆ. ಈ ಸಂಸ್ಥೆಯಲ್ಲಿ ಕಲಿತ ಅದೆಷ್ಟೋ ಸಾವಿರ ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದಾರೆ. ಅಧಿಕಾರದಲ್ಲಿದ್ದಾರೆ. ರಾಜಕೀಯದಲ್ಲಿದ್ದಾರೆ. ತಮ್ಮ ಹೆಸರನ್ನು ಶಾಲೆಯ ಗೋಡೆಯಲ್ಲಿ ಬರೆದರೆ ಲಕ್ಷ ಲಕ್ಷ ಸುರಿಯುವವರಿದ್ದಾರೆ. ನೋಡಿ, ಗೋಡೆಯ ಅಮೃತ ಶಿಲೆಯಲ್ಲಿ ಬರೆದ ಹೆಸರಿನ ಪಟ್ಟಿ!''



ಸಂತರು ಹೆಸರು ಬರೆದ ಅಮೃತ ಶಿಲೆಯತ್ತ ಕೈತೋರಿಸಿದರು. ''ಇಲ್ಲ, ಎಲ್ಲಿಯೂ ಆ ಮಹಾತ್ಮರ ಹೆಸರಿಲ್ಲ. ಇಡೀ ಊರನ್ನು ಒಂದು ಕುಟುಂಬವಾಗಿ ಪರಿವರ್ತಿಸಿದ, ನಮಗೆ ವಿದ್ಯೆ, ಜ್ಞಾನ ಕೊಟ್ಟು ಉದ್ಧರಿಸಿದವರ ಹೆಸರು ಕೂಡ ನಮಗೆ ನೆನಪಿಲ್ಲ....''

ಒಬ್ಬ ಸಂತನ ಬಾಯಿಯಿಂದ ತಮ್ಮೂರಿನ, ತಾವು ಕಲಿತ ಶಾಲೆಯ ಕಥೆಯನ್ನು ಗಲ್ಲಕ್ಕೆ ಕೈಕೊಟ್ಟು ಆಲಿಸುತ್ತಾ ಜನ ಉಸಿರಾಡುವುದನ್ನೇ ಮರೆತಂತಿದ್ದರು.

''ಹಮೀದ್, ಕಳ್ಳ ಹಮೀದ್, ಸಕೀನಾಳ ತಮ್ಮ ಹಮೀದ್, ತನ್ನ ಅಕ್ಕನ ಮನೆಗೆ ಬರುವುದನ್ನೇ ಬಿಟ್ಟುಬಿಟ್ಟಿದ್ದ ಅಂದೆನಲ್ಲಾ? ಅವನ ಬಗ್ಗೆ ಹೇಳುತ್ತೇನೆ ಕೇಳಿ.''

''ಕೆಲವು ವರ್ಷಗಳು ಕಳೆದಿದ್ದವು. ಆತ ಎಲ್ಲಿದ್ದಾನೆ ಎಂಬ ಸುಳಿವೇ ಇರಲಿಲ್ಲ. ಒಂದು ದಿನ ಪಕ್ಕದೂರಿನ ಇಬ್ಬರು ವ್ಯಕ್ತಿಗಳು ಮೌಲವಿಯ ಮನೆಗೆ ಬಂದರು. 'ಎರಡು ದಿನಗಳ ಹಿಂದೆ ನಮ್ಮ ಮನೆಯಲ್ಲಿ ಚಿನ್ನ - ನಗದು ಕಳವಾಗಿದೆ. ಇದು ನಿಮ್ಮ ಹೆಂಡತಿಯ ತಮ್ಮನದೇ ಕೃತ್ಯ. ನನ್ನ ಮಗಳ ಮದುವೆಗೇಂತ ತೆಗೆದಿಟ್ಟ ಚಿನ್ನ - ದುಡ್ಡು ಸ್ವಾಮಿ ಅದು! ದಯವಿಟ್ಟು ಅದನ್ನು ಹಿಂತಿರುಗಿಸಿ' ಎಂದು ಅಂಗಲಾಚಿದರು. ಮೌಲವಿಗೆ ಆಘಾತವಾಗಿತ್ತು. ತನ್ನ ಪ್ರೀತಿಯ ಪತ್ನಿಯ ತಮ್ಮ ಒಬ್ಬ ಕಳ್ಳ ಎಂದು ನಂಬಲಿಕ್ಕೆ ಸಾಧ್ಯವಾಗಲಿಲ್ಲ. ಮೌಲವಿ ಬಂದವರಿಗೆ 'ಆತ ಮನೆಬಿಟ್ಟು ವರ್ಷಗಳೇ ಕಳೆಯಿತು' ಎಂದು ವಿಷಯ ಮನವರಿಕೆ ಮಾಡಿ ಕಳುಹಿಸಿಕೊಟ್ಟರು. ಸಕೀನಾಳ ಮುಂದೆ ಕುಳಿತು ಅವನ ಬಗ್ಗೆ ಎಲ್ಲಾ ತಿಳಿದುಕೊಂಡರು. ಅರ್ಚಕರ ಬಳಿ ಕುಳಿತು ತನ್ನ ದುಃಖವನ್ನೆಲ್ಲಾ ತೋಡಿಕೊಂಡರು. ಅವನೆಲ್ಲಿದ್ದರೂ ಕರೆತಂದು ಅವನನ್ನು ತಿದ್ದಿ ಸರಿದಾರಿಗೆ ತರಬೇಕೆಂದು ನಿರ್ಧರಿಸಿ ಹೊರಟರು. ಕೆಲವು ತಿಂಗಳ ಹುಡುಕಾಟದ ನಂತರ ಆತ ಪತ್ತೆಯಾದ. ನಗರದ ಒಂದು ಅಡ್ಡೆಯಲ್ಲಿ ಕೆಲವು ಪೋಲಿ ಹುಡುಗರ ಗುಂಪು ಕಟ್ಟಿಕೊಂಡು ಕಳ್ಳತನ, ದರೋಡೆ, ಸುಲಿಗೆ ಮಾಡುತ್ತಿದ್ದವನನ್ನು ಹಿಡಿದು ಮನೆಗೆ ಕರೆತಂದ ಮೌಲವಿ, ಅವನಿಗೆ ಬುದ್ಧಿ ಹೇಳಿದರು. ಒಳ್ಳೆಯ ಜೀವನ ನಡೆಸುವಂತೆ ಕೇಳಿಕೊಂಡರು. ಇನ್ನು ಈ ಮನೆಬಿಟ್ಟು ಹೋಗಬಾರದೆಂದು ವಿನಂತಿಸಿದರು. ಅರ್ಚಕರೂ ಅವನನ್ನು ಪಕ್ಕ ಕುಳ್ಳಿರಿಸಿಕೊಂಡು ಅವನ ಮನ ಪರಿವರ್ತಿಸಲು ತನ್ನೆಲ್ಲಾ ಬುದ್ಧಿಯನ್ನು ಉಪಯೋಗಿಸಿದರು. ಪ್ರತಿ ದಿನ ಒಂದರ್ಧಗಂಟೆ ಬಂದು ತನ್ನ ಮುಂದೆ ಕೂತು ತನ್ನೆರಡು ಮಾತುಗಳನ್ನು ಕೇಳಬೇಕು ಎಂದರು. ಆತ ತಾನಿನ್ನು ಕಳ್ಳತನ ಮಾಡುವುದಿಲ್ಲ. ಒಳ್ಳೆಯ ಜೀವನ ನಡೆಸುತ್ತೇನೆ ಎಂದು ಹೇಳಿದ. ಅರ್ಚಕರಿಗೂ, ಮೌಲವಿಗೂ, ಸಕೀನಾಳಿಗೂ ಆಣೆ ಹಾಕಿ ಮಾತು ಕೊಟ್ಟ.''

''ಅರ್ಚಕರ ಉಪದೇಶ, ಮೌಲವಿಯರ ಒಡನಾಟ, ಸಕೀನಾಳ ಪ್ರೀತಿ ಅವನ ಮೇಲೆ ಪ್ರಭಾವ ಬೀರಿತು. ಆತ ಬದಲಾಗತೊಡಗಿದ. ಅವನಿಗೊಂದು ಕೆಲಸವೋ,

ಒಂದು ಗೂಡಂಗಡಿಯೋ ಮಾಡಿಕೊಡಬೇಕೆಂದು ಅರ್ಚಕರು ಮೌಲವಿಯ ಜೊತೆ ಚರ್ಚಿಸಿದರು. ಅವನಿಗೊಂದು ಮದುವೆ ಮಾಡಬೇಕೆಂದು ಸಕೀನಾ ಆಸೆಪಟ್ಟಳು. ಆದರೆ ಆತ ಬಂದು ಎರಡು ತಿಂಗಳಾಗಿರಬಹುದು. ಒಂದು ದಿನ ಇದ್ದಕ್ಕಿದ್ದಂತೆ ನಾಪತ್ತೆಯಾಗಿ ಬಿಟ್ಟ. ಮೌಲವಿ ಚಿಂತೆಯಲ್ಲಿ ಮುಳುಗಿಬಿಟ್ಟರು. ಸಕೀನಾ ರೋದಿಸಿದಳು. ಅರ್ಚಕರು ಸಮಾಧಾನಪಡಿಸಿದರು. ಮೌಲವಿ ತನ್ನ ಪ್ರಯತ್ನ ಬಿಡಲಿಲ್ಲ. ಮತ್ತೆ ಅವನನ್ನು ಹುಡುಕತೊಡಗಿದರು. ಅರ್ಚಕರೂ ಅವರ ಜೊತೆ ಸೇರಿಕೊಂಡರು. ಎಷ್ಟು ಹುಡುಕಿದರೂ ಆತನ ಪತ್ತೆಯೇ ಇಲ್ಲ. ತಿಂಗಳು ಕಳೆದಿರಬಹುದು. ಒಂದು ದಿನ ಆತ ಇದ್ದಕ್ಕಿದ್ದಂತೆ ಮನೆಯಲ್ಲಿ ಪ್ರತ್ಯಕ್ಷನಾದ. 'ನಾನು ನನ್ನ ಒಂದು ಖಾಸಗಿ ಕೆಲಸದ ಮೇಲೆ ಹೋಗಿದ್ದೆ. ನಿಮ್ಮಲ್ಲಿ ಹೇಳದೇ ಹೋದದ್ದಕ್ಕೆ ಕ್ಷಮಿಸಿ. ಇನ್ನೆಂದೂ ನಿಮ್ಮ ಅಪ್ಪಣೆ ಇಲ್ಲದೆ ಎಲ್ಲಿಗೂ ಹೋಗೋದಿಲ್ಲ. ನಾನಿನ್ನು ನಿಮ್ಮಿಷ್ಟದಂತೆ ನಡೆಯುತ್ತೇನೆ. ನಾನು ಬದಲಾಗಿದ್ದೇನೆ. ಈ ಮನೆಗೆ ಬಂದ ಮೇಲೆ ನಾನು ಯಾವ ತಪ್ಪನ್ನೂ ಮಾಡಿಲ್ಲ. ನನ್ನನ್ನು ನಂಬಿ' ಎಂದು ಆತ ಗೋಗೆರೆದ. ಮೌಲವಿಗೆ ಸಂಶಯ. ಸಕೀನಾಳಿಗೆ ಸಂತೋಷ, ಅವನಾಗಿ ಹಿಂದೆ ಬಂದಿದ್ದಾನೆ, ಖಂಡಿತಾ ಬದಲಾಗಿದ್ದಾನೆ! ಅರ್ಚಕರಿಗೆ ಸಮಾಧಾನ. ಹೀಗೆ ಹದಿನೈದು ದಿನ ಕಳೆಯಿತು. ಸಕೀನಾಳ ಆಸೆ ಚಿಗುರಿತು. ಮೌಲವಿಯ ಸಂಶಯ ಸುಳ್ಳಾಯಿತು. ಅರ್ಚಕರ ಉಪದೇಶ ಮುಂದುವರಿಯಿತು.''

''ಒಂದು ಬೆಳಗ್ಗೆ ಮೌಲವಿ, ಸಕೀನಾ ಹಾಗೂ ಹಮೀದ್ ಒಂದೇ ಚಾಪೆಯಲ್ಲಿ ಕುಳಿತು ಮಾತನಾಡುತ್ತಾ, ನಗುತ್ತಾ ತಿಂಡಿ ತಿನ್ನುತ್ತಿದ್ದರು. ಹೊರಗೆ ವಾಹನ ಬಂದು ನಿಂತ ಶಬ್ದ. ದಡ... ದಡ... ಹೆಜ್ಜೆಯ ಸಪ್ಪಳ. ಮೌಲವಿ ಎದ್ದು ಬಾಗಿಲಿಗೆ ಬಂದರು. ವಾಹನದಿಂದ ಕೋವಿ ಹಿಡಿದ ಪೊಲೀಸರು ಇಳಿಯುತ್ತಿದ್ದಾರೆ. ಮನೆಯನ್ನು ಸುತ್ತುವರಿಯುತ್ತಿದ್ದಾರೆ. ಏನಿದು? ಅವರು ಗಾಬರಿಗೊಂಡರು. ಇಬ್ಬರು ಅಧಿಕಾರಿಗಳು ಅವರ ಬಳಿ ಬಂದರು. 'ಎಲ್ಲಿ ಹಮೀದ್? ಎಲ್ಲಿ ಬಚ್ಚಿಟ್ಟಿದ್ದೀರಿ ಅವನನ್ನು?' ಎಂದು ಕೇಳಿದರು.

''ಬಚ್ಚಿಟ್ಟಿಲ್ಲ... ಇಲ್ಲಿಯೇ ಇದ್ದಾನೆ.. ಯಾಕೆ?''

ಜನ ಮನೆಯ ಮುಂದೆ ಸೇರತೊಡಗಿದರು. ಅರ್ಚಕರು ಧಾವಿಸಿ ಬಂದರು.

''ಏನು? ಏನು ವಿಷಯ?'' ಅಧಿಕಾರಿಗಳ ಜೊತೆ ಅರ್ಚಕರು ಮಾತಿಗಿಳಿದರು.

''ಎರಡು ವಾರದ ಹಿಂದೆ ನಗರದ ದೇವಸ್ಥಾನವೊಂದರಲ್ಲಿ ದರೋಡೆಯಾಗಿದೆ. ಅದು ಇವನದೇ ಕೃತ್ಯ ಎಂದು ಸುಳಿವು ಸಿಕ್ಕಿದೆ.''

ಪೊಲೀಸರು ಹಮೀದ್‌ನ ಕೈಗೆ ಕೋಳ ತೊಡಿಸಿದರು.

''ನಾನು ಕದ್ದಿಲ್ಲ, ನಾನು ದರೋಡೆ ನಡೆಸಿಲ್ಲ'' ಆತ ಅರಚತೊಡಗಿದ.



ಪೊಲೀಸರು ಆತನ ಮುಖಕ್ಕೊಂದು ಗುದ್ದಿ ದರದರನೆ ಎಳೆದರು. ಸಕೀನಾ ಅಳುತ್ತಾ ಮೂಲೆ ಸೇರಿದಳು.

''ಬಾವಾ ನಾನು ಕದ್ದಿಲ್ಲ... ಅಕ್ಕಾ ನಾನು ಕದ್ದಿಲ್ಲ... ಅರ್ಚಕರೇ ನೀವಾದರೂ ಹೇಳಿ... ಈ ಮನೆಗೆ ಬಂದ ಮೇಲೆ ನಾನು ಯಾವ ತಪ್ಪನ್ನೂ ಮಾಡಿಲ್ಲ... ನಾನು ದರೋಡೆ ಮಾಡಿಲ್ಲ...'' ಆತ ಪ್ರತಿಭಟಿಸಿದ. ಪೊಲೀಸರು ಬೂಟು ಕಾಲಿನಿಂದ ಒದೆಯುತ್ತಾ ಆತನನ್ನು ತಳ್ಳತೊಡಗಿದರು. ಎಲ್ಲರೂ ಕಂಬದಂತೆ ನಿಂತು ನೋಡುತ್ತಿದ್ದರು.

''ಮರಗಟ್ಟಿದಂತೆ ನಿಂತಿದ್ದ ಮೌಲವಿ ಎದೆಯನ್ನು ಒತ್ತಿ ಹಿಡಿದುಕೊಂಡು ನಡುಗತೊಡಗಿದರು. ಅವರ ಮುಖ ಕಪ್ಪಿಟ್ಟಿತು. ದೇಹ ಬಾಗಿತು. ಅವರು ಧೊಪ್ಪೆಂದು ಕುಸಿದು ಬಿದ್ದರು. ವಿಲ ವಿಲ ಒದ್ದಾಡಿದರು. ಸಕೀನಾ ಅವರ ಮೇಲೆ ಬಿದ್ದು ಕಿರುಚತೊಡಗಿದಳು. ಅರ್ಚಕರು ಗಾಬರಿಯಿಂದ ಅವರ ತಲೆಯನ್ನೆತ್ತಿ ತನ್ನ ತೊಡೆಯ ಮೇಲಿಟ್ಟುಕೊಂಡರು. ಎಲ್ಲವೂ ಕೆಲವೇ ನಿಮಿಷ... ಇದ್ದಕ್ಕಿದ್ದಂತೆಯೇ ಮೌಲವಿಯ ದೇಹ ಸ್ತಬ್ಧವಾಯಿತು.''

''ಹಮೀದ್ 'ಬಾವಾ...' ಎಂದು ಒಮ್ಮೆ ಜೋರಾಗಿ ಕಿರುಚಿದ ಅಷ್ಟೇ... ಮತ್ತೆ ಮೌನವಾದ. ಅವನ ಕಣ್ಣು ಮೌಲವಿಯನ್ನೇ ಎವೆಯಿಕ್ಕದೆ ನೋಡುತ್ತಿತ್ತು. ಆ ಕಣ್ಣು ಈಗ ತುಂಬಿ ಹರಿಯುತ್ತಿತ್ತು. ಅವನು ಪ್ರತಿಭಟಿಸದೆ ತಾನೇ ಹೋಗಿ ಪೊಲೀಸ್ ವಾಹನ ಹತ್ತಿ ಕುಳಿತ. ವಾಹನ ಹೊರಟಿತು. ಸಕೀನಾಳ ಮನೆ ಮಸಣವಾಯಿತು. ಊರಿಗೆ ಊರೇ ಶೋಕ ಸಾಗರದಲ್ಲಿ ಮುಳುಗಿತು.''

ಸಂತರ ಮಾತು ಕಂಪಿಸುತ್ತಿತ್ತು. ಅವರು ಮಾತು ನಿಲ್ಲಿಸಿ ಶಾಲಿನ ತುದಿಯನ್ನು ತನ್ನೆರಡು ಕಣ್ಣುಗಳಿಗೂ ಒತ್ತಿ ಹಿಡಿದು ಕಂಬದಂತೆ ನಿಂತಿದ್ದರು... ಹೌದು, ಅವರು ಅಳುತ್ತಿದ್ದರು. ಅವರ ಅಳು ನೋಡಿ ನನಗೂ ಕಣ್ಣೀರು ಬಂತು. ಕಣ್ಣೊರೆಸುತ್ತಾ ಸುತ್ತ ಕುಳಿತವರನ್ನು ನೋಡಿದೆ. ಇಡೀ ಸಭಾಂಗಣ ಸೂತಕದ ಮನೆಯಂತೆ ಮೌನವಾಗಿತ್ತು.

ಸಂತರು ಕಣ್ಣು ಮುಖ ಒರೆಸಿಕೊಳ್ಳುತ್ತಾ ಚೇತರಿಸಿಕೊಂಡರು. ಅವರು ಬಹಳ ಬಳಲಿದವರಂತೆ ಮತ್ತೆ ಮಾತು ಪ್ರಾರಂಭಿಸಿದರು.

''ಮಹನೀಯರೇ, ಈ ಊರಿನ ಕಥೆ, ಈ ಶಾಲೆಯ ಇತಿಹಾಸ ನನಗೆ ಹೇಗೆ ಗೊತ್ತು? ಎಂದು ನೀವೆಲ್ಲ ಯೋಚಿಸುತ್ತಿರಬಹುದಲ್ಲವೇ? ಹೇಳುತ್ತೇನೆ ಕೇಳಿ. ಹಮೀದ್... ಆ ಕಳ್ಳ ಹಮೀದ್... ಅದು ಬೇರೆ ಯಾರೂ ಅಲ್ಲ ನಾನೇ... ಆ ಕಳ್ಳ ಹಮೀದ್ ನಾನೇ...! ಹಮೀದ್ ಫಿರ್‌ದೌಸ್... ಈಗ ಸಂತ ಫಿರ್‌ದೌಸ್..!!''

''ಮಹನೀಯರೇ, ಒಂದು ಸತ್ಯವನ್ನು ನಾನು ಈಗಲೂ ನಿಮಗೆ ಹೇಳಲು ಇಷ್ಟಪಡುತ್ತೇನೆ. ದೇವಸ್ಥಾನ ದರೋಡೆ ಮಾಡಿದವನು ನಾನಲ್ಲ. ಅಕ್ಕನ ಮನೆಗೆ ಕಾಲಿಟ್ಟ ದಿನದಿಂದ ನಾನು ಬದಲಾಗಿದ್ದೆ. ಅಂದಿನಿಂದ ನಾನು ಯಾವ ತಪ್ಪನ್ನೂ ಮಾಡಿರಲಿಲ್ಲ... ಇದು ಸತ್ಯ... ದೇವರಾಣೆಗೂ ಸತ್ಯ... ಆದರೆ ಪೋಲೀಸರು ನನ್ನನ್ನು ಬಿಡಲಿಲ್ಲ... ಬೂಟು ಕಾಲಲ್ಲಿ ಒದ್ದು ನನ್ನನ್ನು ಜೈಲಿಗೆ ತಳ್ಳಿದರು... ನನಗೆ ಎರಡು ವರ್ಷ ಶಿಕ್ಷೆಯಾಯಿತು. ಶಿಕ್ಷೆ ಮುಗಿದ ದಿನವೇ ನಾನು ಅರ್ಚಕರಿಗೆ ಸತ್ಯ ಹೇಳಬೇಕೆಂದು ಮತ್ತೆ ಆ ಊರಿಗೆ ಬಂದೆ, ಆದರೆ ಮೌಲವಿ ತೀರಿಕೊಂಡು ವಾರದೊಳಗೆ ಅರ್ಚಕರೂ ತೀರಿಕೊಂಡರು ಎಂದು ತಿಳಿಯಿತು. ಅಕ್ಕನನ್ನು ಹುಡುಕಿ ಮನೆಗೆ ಹೋದೆ. ಅಲ್ಲಿ ಆ ಗುಡಿಸಲೇ ಇರಲಿಲ್ಲ. ಮತ್ತೆ ನಾನು ಇಲ್ಲಿ ನಿಲ್ಲಲಿಲ್ಲ. ಸೀದಾ ಉತ್ತರ ಭಾರತದತ್ತ ಪಯಣ ಬೆಳೆಸಿದೆ. ಕಷ್ಟಪಟ್ಟು ಮೌಲವಿ ಮತ್ತು ಅರ್ಚಕರ ಹೆಸರಲ್ಲಿ ಒಂದು ಶಾಲೆ ಸ್ಥಾಪಿಸಿದೆ. ಅದು ಇಂದು ಬೆಳೆದು ಜಗತ್ತಿನಾದ್ಯಂತ ಹೆಸರು ಪಡೆದಿದೆ. ನೀವು ಇಂದು ಬೇಕಾದರೂ ಬಂದು ನೋಡಬಹುದು. ಆ ವಿದ್ಯಾಸಂಸ್ಥೆಯ ಬಾಗಿಲಲ್ಲೇ ಆ ಇಬ್ಬರು ಮಹಾನುಭಾವರ ಹೆಸರಿದೆ. ನೀವೆಲ್ಲ ಮರೆತರೂ ಅವರನ್ನು ನಾನು ಮರೆತಿಲ್ಲ. ನಾನು ಮರೆಯುವುದಿಲ್ಲ... ನನ್ನ ಈ ದೇಹದಲ್ಲಿ ಉಸಿರಿರುವ ತನಕ ಮರೆಯುವುದಿಲ್ಲ... ಬರುತ್ತೇನೆ. ನಮಸ್ಕಾರ... ನನ್ನ ಮಾತನ್ನು ತಾಳ್ಮೆಯಿಂದ ಆಲಿಸಿದ ನಿಮಗೆಲ್ಲ ನಮಸ್ಕಾರ...'' ಎಂದವರೇ ವೇದಿಕೆಯಿಂದ ಇಳಿದ ಸಂತರು ತನ್ನ ಕಾರಿನತ್ತ ನಡೆಯತೊಡಗಿದರು.

**ವಾರ್ತಾಭಾರತಿ**



# ಋಣ

''ಅಪ್ಪಾ ಈ ಪತ್ರ ಸಿಕ್ಕಿದ ಕೂಡಲೇ ನೀವೊಮ್ಮೆ ಬಂದು ಹೋಗಿ. ನಿಮ್ಮಲ್ಲಿ ತುಂಬಾ ಮುಖ್ಯವಾದ ವಿಚಾರವೊಂದು ಮಾತನಾಡಲಿಕ್ಕಿದೆ''

ಮಗ ಅಬ್ದುಲ್ಲಾನ ಪತ್ರ ಓದಿದ ಹಸನಬ್ಬರಿಗೆ ಏನೇನೋ ಯೋಚನೆ ಬಂದಿತ್ತು. ಒಂದೂ ನೋಡದೆ ರುಕಿಯಾಳಿಗೆ ''ಮನೆ ಕಡೆ ಜೋಪಾನ'' ಎಂದು ಹೇಳಿ ಹೊರಟು ಬಿಟ್ಟಿದ್ದರು. ಆದರೆ ಅಲ್ಲಿ ಹೋದ ಮೇಲೆ ನಡೆದದ್ದೇ ಬೇರೆ...

''ಅಪ್ಪಾ, ಈ ವಯಸ್ಸಿನಲ್ಲಿ ನಿಮಗೆ ಇದೆಂತಹ ಹಟ. ಜನ ಇಲ್ಲಿ ನನ್ನ ಮುಖಕ್ಕೆ ಉಗೀತಾ ಇದ್ದಾರೆ. ನಿಮ್ಮಿಂದಾಗಿ ಮರ್ಯಾದೆಯಿಂದ ಬದುಕಲೂ ಸಾಧ್ಯ ಆಗ್ತಾ ಇಲ್ಲ. ಒಂದಾ ಅವಳನ್ನು ನೀವು ಮನೆಯಿಂದ ಕಳಿಸಬೇಕು. ಇಲ್ಲಾ ಮನೆ - ಭೂಮಿ ಮಾರಿ ಇಲ್ಲಿಗೆ ಬಂದ್ಬಿಡಿ. ಇನ್ನು ನೀವೇನೂ ದುಡಿಯಬೇಕಾಗಿಲ್ಲ. ಇಲ್ಲಿ ಇಷ್ಟು ದೊಡ್ಡ ಬಂಗಲೆ ಇದೆ. ಎಲ್ಲ ವ್ಯವಸ್ಥೆ ಇದೆ. ಇಲ್ಲಿ ನಿಮಗೆ ಏನೂ ಕೊರತೆ ಇರುವುದಿಲ್ಲ''.

ಹಸನಬ್ಬ ಮಾತನಾಡಲಿಲ್ಲ. ನೋವಿನಿಂದ ಅವರ ಹೃದಯ ಹಿಂಡಿದಂತಾಯಿತು. ಸೊಸೆಯ ಮುಂದೆಯೇ ಎಂತಹ ಅವಮಾನ... ನನ್ನಿಂದಾಗಿ ಇವನಿಗೆ ಮರ್ಯಾದೆಯಿಂದ ಬದುಕಲು ಆಗುತ್ತಿಲ್ಲ! ಛೆ....!

ಮಗ ಮತ್ತೂ ಭುಸುಗುಡುತ್ತಲೇ ಇದ್ದ. ಅವನ ಬಾಯಿಯಿಂದ ಹೊರಡುವ ಒಂದೊಂದು ಮಾತೂ ಅವರ ಹೃದಯವನ್ನು

ಚುಚ್ಚುತ್ತಿತ್ತು. ಅವರಿಗೆ ಮಾತನಾಡುವುದು ಬಿಡಿ, ತಲೆ ಎತ್ತಿ ಅವನ ಮುಖ ನೋಡಲೂ ಸಾಧ್ಯವಾಗಲಿಲ್ಲ.

ಹಾಗೆಯೇ ಎದ್ದು ಹೊಸಿಲು ದಾಟಿದವರ ಕಣ್ಣು ತುಂಬಿ ಬಂತು. ತನ್ನ ಕರುಳ ಕುಡಿಗೆ ಏನಾಗಿದೆಯೋ, ಏನು ತೊಂದರೆಯಾಗಿದೆಯೋ ಎಂದು ಭಯ, ಆತಂಕದಿಂದ ಓಡೋಡಿ ಬಂದಿದ್ದವರಿಗೆ ದುಃಖದಿಂದ ಅಳುವೇ ಬಂದುಬಿಟ್ಟಿತ್ತು. ಬಸ್ಸೇರಿ ಕಿಟಕಿಯತ್ತ ಮುಖವಿಟ್ಟು ಕುಳಿತವರ ಕಣ್ಣಲ್ಲಿ ನೀರಿಳಿಯುತ್ತಲೇ ಇತ್ತು. ಬಸ್ಸು ಹೊರಟಾಗ ಬೀಸಿದ ತಂಪು ಗಾಳಿಗೆ ಮುಖವೊಡ್ಡಿದವರು ಹಾಗೆಯೇ ಕಣ್ಣು ಮುಚ್ಚಿಕೊಂಡರು.

ಅಬ್ದುಲ್ಲಾನಿಗೆ ಆಗ ಒಂದು ವರ್ಷ ಪ್ರಾಯ. ಅಂಬೆಗಾಲಿಡುವ, ತೊದಲುವ, ಕಂಡದ್ದೆಲ್ಲ ಬೇಕೆನ್ನುವ ವಯಸ್ಸು. ಅವನ ಹಟ, ತುಂಟಾಟ, ಅಳು, ನಗು, ಇಡೀ ಮನೆಯನ್ನು ನಂದನವಾಗಿಸಿತ್ತು. ಮಕ್ಕಳಿಲ್ಲ ಎಂದು ಕಣ್ಣೀರಿಟ್ಟ, ಬಂಜೆ ಎಂದು ಹಣೆಪಟ್ಟಿ ಹೊತ್ತ ಆಮಿನಾಳ ಕನಸಿನ ಕೂಸು. ಮದುವೆಯಾಗಿ ಏಳು ವರ್ಷಗಳನಂತರ ಹುಟ್ಟಿದ ಮಗು. ತಾಯಿಯಾದ ಮೇಲೆ ಅವಳ ದೇಹದಲ್ಲಿ ಪ್ರೀತಿಯ ಹೊಳೆಯೇ ಹರಿಯತೊಡಗಿತ್ತು. ಮಗುವಿಗಿಂತಲೂ ಪತಿಯ ಮೇಲೆಯೇ ಅವಳಿಗೆ ಹೆಚ್ಚು ಪ್ರೀತಿ. ಏಳು ವರ್ಷಗಳಿಂದ ತನ್ನ ಗರ್ಭ ಅರಳದಿದ್ದರೂ ಕಿಂಚಿತ್ತೂ ತನ್ನನ್ನು ನೋಯಿಸದ, ತನ್ನ ಹೊಟ್ಟೆಯಲ್ಲೊಂದು ಬೀಜ ಬಿತ್ತಿದ, ತನ್ನ ಕೈಗೊಂದು ಕುಡಿ ಕೊಟ್ಟ, ತಮ್ಮ ಬಾಳಿಗೊಂದು ಆಸರೆ ಹುಟ್ಟಿಸಿದ ಪತಿಯನ್ನು ಎಷ್ಟು ಕೊಂಡಾಡಿದರೂ, ಎಷ್ಟು ಪ್ರೀತಿಸಿದರೂ, ಎಷ್ಟು ಆರೈಕೆ ಮಾಡಿದರೂ ಅವಳಿಗೆ ತೃಪ್ತಿ ಇಲ್ಲ. ಅವಳ ಪ್ರೀತಿಯನ್ನು ಕಂಡು ಹಸನಬ್ಬ ಮೂಕರಾಗಿದ್ದರು.

ಇಂತಹ ಪತ್ನಿ ಅವರ ಬಾಳಿನಿಂದ ಒಂದು ದಿನ ಇದ್ದಕ್ಕಿದ್ದಂತೆ ಹೊರಟು ಹೋದಾಗ ಅವರಿಗೆ ಆಕಾಶವೇ ಕಳಚಿಬಿದ್ದಂತಾಗಿತ್ತು. ಅನ್ನ, ನಿದ್ದೆ ಬಿಟ್ಟು ಕಣ್ಣೀರಿಡುತ್ತಾ ಹುಚ್ಚನಂತಾಗಿದ್ದ ಅವರನ್ನು ಆಗ ಸಂತೈಸಿದ್ದು ನೆರೆಮನೆಯ ಮೂಸಬ್ಬ.

''ಸಾವು ಮನುಷ್ಯರಿಗೆ ಬರದೆ ಮತ್ತೆ ಕಲ್ಲಿಗೆ ಬರ್ತದಾ ಮಾರಾಯ. ಇಂದು ಅವಳು ನಾಳೆ ನಾವು. ಒಂದು ದಿನ ಹೆಚ್ಚು ಕಮ್ಮಿ ಅಷ್ಟೇ. ಎಲ್ಲರೂ ಸಾಯುವವರೇ. ನೀನು ಹೀಗೆ ಅಳುತ್ತಾ ಕುಳಿತರೆ ಸತ್ತವರೇನು ತಿರುಗಿ ಬರುತ್ತಾರಾ?. ನೋಡು, ಅವಳು ನಿನ್ನ ಕೈಗೊಂದು ಮಗು ಕೊಟ್ಟು ಹೋಗಿದ್ದಾಳೆ. ಅದನ್ನು ಚೆನ್ನಾಗಿ ಸಾಕು. ಅವಳಿಗಾಗಿ ನೀನು ಅಷ್ಟನ್ನಾದರೂ ಮಾಡಬೇಡವಾ?''

ಅಂದಿನಿಂದ ಹಸನಬ್ಬ ಸ್ವಲ್ಪ ಚುರುಕಾಗತೊಡಗಿದ್ದರು. ''ಹೌದು, ಬದುಕಬೇಕು. ಆಮಿನಾಳ ಈ ಮಗುವಿಗಾಗಿ ನಾನು ಬದುಕಬೇಕು.'' ಅವರು ಮಗುವಿನ ಆರೈಕೆಯಲ್ಲಿ ಎಲ್ಲವನ್ನೂ ಮರೆಯತೊಡಗಿದರು. ಆಮಿನಾಳ ಪಡಿಯಚ್ಚಿನಂತಿರುವ



ಈ ಮಗು ಬೆಳೆಯಬೇಕು, ದೊಡ್ಡವನಾಗಬೇಕು, ವಿದ್ಯಾವಂತನಾಗಬೇಕು. ಇದು ಮಾತ್ರ ಈಗ ಅವರ ಮನಸ್ಸಿನಲ್ಲಿದ್ದುದು. ಅದಕ್ಕಾಗಿ ಅವರು ಹಗಲೂ ರಾತ್ರಿ ಶ್ರಮಿಸ ತೊಡಗಿದರು.

ಮಗುವಿನೊಡನೆ ಬದುಕಲು ಒದ್ದಾಡುವ ಗೆಳೆಯನನ್ನು ಕಂಡು ಮೂಸಬ್ಬನಿಗೆ ಅಯ್ಯೋ ಎನಿಸಿತು. ''ನೋಡು ಹಸನ್, ಈ ಮಗುವಿನೊಂದಿಗೆ ಎಷ್ಟು ದಿನಾಂತ ನೀನು ಹೀಗೆ ಮನೆಯಲ್ಲಿಯೇ ಇರ್ತಿಯಾ? ನಿನ್ನ ಕೃಷಿ, ವ್ಯವಹಾರ ಎಲ್ಲವನ್ನೂ ಬಿಟ್ಟು ಹೀಗೆ ಕುಳಿತಿದ್ದಿಯಲ್ಲಾ. ಮುಂದೆ ನಿನ್ನ ಆರ್ಥಿಕ ಸ್ಥಿತಿ ಏನಾಗಬೇಡ! ಮುಂದೆ ಈ ಮಗುವಿನ ವಿದ್ಯೆಗೆ, ಖರ್ಚಿಗೆ ಹಣ ಬೇಡವೇ?''

ಹಸನಬ್ಬ ಗೆಳೆಯನ ಮುಖ ನೋಡಿದ.

''ಹೌದು ಹಸನ್, ನೀನು ಹೀಗೆ ಮಗುವನ್ನು ಅಂಗೈಯಲ್ಲಿಟ್ಟುಕೊಂಡು ಮನೆಯೊಳಗೇ ಕೂತರೆ ನಾಳೆ ನಿನ್ನ ಮಗ ಬೇಡಬೇಕಾದಿತು. ನೀನು ಮೊದಲಿನಂತಾಗಬೇಕು. ಆರ್ಥಿಕವಾಗಿ ಗಟ್ಟಿಯಾಗಬೇಕು. ಆಗ ಮಾತ್ರ ಆಮಿನಾಳ ಕನಸು ನನಸಾದೀತು.''

''ನಾನು ಏನು ಮಾಡಬೇಕು ಅಂತಿಯಾ?''

''ಹಸನ್.. ನೀನು ಈ ಮಗುವಿಗಾಗಿಯಾದರೂ ಇನ್ನೊಂದು ಮದುವೆಯಾಗಬೇಕು...''

''ಇಲ್ಲ ಮೂಸಬ್ಬ... ನೀನು ತಿಳಿದಂತೆ ನನ್ನ ಆಮಿನಾ ಸತ್ತಿಲ್ಲ. ಅವಳಿನ್ನೂ ಜೀವಂತವಿದ್ದಾಳೆ. ಈ ಮನೆ ತುಂಬಾ ಅವಳೇ ತುಂಬಿದ್ದಾಳೆ. ನನಗೆ ಇನ್ನೊಂದು ಮದುವೆಯ ಆವಶ್ಯಕತೆಯೇ ಇಲ್ಲ''

''ಸುಮ್ಮನೆ ಭ್ರಮೆಯಲ್ಲಿ ಏನೇನೋ ಮಾತಾಡಬೇಡ ಹಸನ್. ಈ ಮಗುವಿನ ಆರೈಕೆ ನಿನ್ನೊಬ್ಬನಿಂದ ಸಾಧ್ಯವಿಲ್ಲ. ಅದಕ್ಕೆ ಹೆಣ್ಣೊಬ್ಬಳು ಬೇಕೇ...''

ಮೂಸಬ್ಬ ಅವರ ಮನವೊಲಿಸಲು ಪ್ರಯತ್ನಿಸಿದ್ದ.

''ಅವಳು ಬದುಕಿ ಬಾಳಿದ ಮನೆ ಇದು. ಅವಳ ಸ್ಥಾನದಲ್ಲಿ ಇನ್ನೊಂದು ಹೆಣ್ಣು! ಇಲ್ಲ, ಸಾಧ್ಯವೇ ಇಲ್ಲ. ಬೇಕಾದರೆ ಕೆಲಸಕ್ಕೆ ಜನ ಇಟ್ಟೇನು. ಮದುವೆ ಮಾತ್ರ ಸಾಧ್ಯವೇ ಇಲ್ಲ...'' ಹಸನಬ್ಬ ಖಡಾಖಂಡಿತವಾಗಿ ಹೇಳಿಬಿಟ್ಟರು.

ಮತ್ತೆ ವಾರ ಕಳೆಯುವುದರೊಳಗೆ ಮೂಸಬ್ಬ ತನ್ನ ಹೆಂಡತಿಯ ಊರಿನಿಂದ ಕೆಲಸದಾಳೊಬ್ಬಳನ್ನು ಕರೆತಂದಿದ್ದ. ಹೆಸರು ರುಕಿಯಾ. ವಿಧವೆಯಾದ ಅವಳಿಗೆ ಮೂರು ವರ್ಷದ ಗಂಡು ಮಗುವೂ ಜೊತೆಗಿತ್ತು. ಮೂಸಬ್ಬ ತನ್ನ ಮನೆಗೆ ತಾಗಿಕೊಂಡೇ ಇರುವ ಕೋಣೆಯನ್ನು ಅವಳ ವಾಸಕ್ಕೆ ಬಿಟ್ಟುಕೊಟ್ಟಿದ್ದ.

ರುಕಿಯಾ ಪ್ರತಿದಿನ ಬೆಳಗ್ಗೆ ಎದ್ದು ಹಸನಬ್ಬರ ಮನೆಗೆ ಬರುವಳು. ಅವಳು

ಬರುವ ಮೊದಲೇ ಹಸನಬ್ಬ ತಿಂಡಿ, ಕಾಫಿ ಮುಗಿಸುತ್ತಿದ್ದರು. ಯಾಕೋ ಅವರಿಗೆ ಅವಳನ್ನು ಕಂಡರೆ ಸಂಕೋಚ. ಅವಳು ಬಂದ ತಕ್ಷಣ ಅವರು ಮನೆ ಬಿಡುತ್ತಿದ್ದರು.

ಹಗಲಿಡೀ ತನ್ನ ತೋಟ, ಗದ್ದೆ, ಅಡಿಕೆ ವ್ಯಾಪಾರದಲ್ಲಿ ಮುಳುಗಿದ್ದರೂ ಕೆಲಸದಾಳಿನ ಕೈಯಲ್ಲಿರುವ ತನ್ನ ಕಂದನ ನೆನಪು ಒಮ್ಮೊಮ್ಮೆ ಅವರನ್ನು ಮನೆಯ ಕಡೆ ಸೆಳೆಯುತ್ತಿತ್ತು. ಆಗ ಅವರು ತಡೆಯಲಾರದೆ ಬಂದು ಮಗುವನ್ನು ನೋಡಿ ಹೋಗುತ್ತಿದ್ದರು.

ಹೀಗೆ ಒಂದು ದಿನ...

ಅಂದು ಏಳುವಾಗ ತಡವಾಗಿತ್ತು. ತನ್ನ ಕೊಳೆಯಾದ ಬಟ್ಟೆಗಳನ್ನು ಒಗೆಯದೆ ಹಾಗೇ ಇಟ್ಟು ಸ್ನಾನ ಮಾಡಿ ಹಸನಬ್ಬ ಮನೆ ಬಿಟ್ಟಿದ್ದರು. ಮಧ್ಯಾಹ್ನದ ಹೊತ್ತು ಒಮ್ಮೆ ಮಗುವನ್ನು ನೋಡಿ ಬರೋಣ ಎಂದು ಮನೆಯ ಕಡೆ ಬಂದವರು, ರುಕಿಯಾ ತನ್ನ ಬಟ್ಟೆಗಳನ್ನು ಒಗೆದು ಒಣಗಲು ಹಾಕುತ್ತಿರುವುದನ್ನು ಕಂಡು ಬೆಂಕಿಯಾದರು. ಸೀದಾ ಮನೆಯೊಳಗೆ ಬಂದವರೇ ''ಹೆಣ್ಣೇ'' ಎಂದು ಗರ್ಜಿಸಿದರು.

ತೊಟ್ಟಿಲಲ್ಲಿ ನಿದ್ರಿಸುತ್ತಿದ್ದ ಮಗುವಿಗೇನಾದರೂ ಆಗಿದೆಯೋ ಎಂದು ನಡುಗುತ್ತಾ ರುಕಿಯಾ ಓಡೋಡಿ ಬಂದಿದ್ದಳು.

''ನಿನ್ನನ್ನು ಇಲ್ಲಿ ಕರೆಸಿದ್ದು ಮಗುವನ್ನು ನೋಡಿಕೊಳ್ಳಲು. ನನ್ನ ಬಟ್ಟೆ ಒಗೆಯಲು ನಿನಗೆ ಯಾರು ಹೇಳಿದ್ದು?''

ರುಕಿಯಾ ಹಿಡಿಯಾಗಿ ಬಾಗಿಲ ಬದಿಗೆ ಸರಿಯುತ್ತಾ ನಿಟ್ಟುಸಿರು ಬಿಟ್ಟಳು.

''ಮಗುವಿನ ಕೆಲಸ ಮಾತ್ರ ಮಾಡುವುದಾದರೆ ಇಲ್ಲಿರಬೇಕು. ನನ್ನ ಕೆಲಸ ಮಾಡಲು ಇಲ್ಲಿ ಜನ ಬೇಡ.''

ರುಕಿಯಾ ಮರೆಯಲ್ಲಿಯೇ ನಿಂತು ತಲೆ ಆಡಿಸಿದಳು.

''ನನ್ನ ಬಟ್ಟೆ ಒಗೆಯಲು, ನನ್ನ ಆರೈಕೆ ಮಾಡಲು ನನ್ನ ಹೆಂಡತಿಗೆ ಮಾತ್ರ ಅಧಿಕಾರ ಇರುವುದು. ಆ ಅಧಿಕಾರವನ್ನು ನಾನು ಸಾಯುವವರೆಗೂ ಬೇರೆ ಯಾರಿಗೂ ಬಿಟ್ಟುಕೊಡೋಲ್ಲ. ಯಾರಿಗೂ ಬಿಟ್ಟು ಕೊಡೋಲ್ಲ! ಇನ್ನೊಂದು ಸಲ ಇಂತಹ ಕೆಲಸ ಮಾಡಿದೆಯಾ, ನೀನು ಇಲ್ಲಿಗೆ ಬರುವುದೇ ಬೇಡ...''

ಹಸನಬ್ಬರ ಆರ್ಭಟಕ್ಕೆ ಮಗು ಎಚ್ಚರವಾಗಿ ಅಳತೊಡಗಿತು. ಮರೆಯಿಂದ ಹೊರಬರಲು ಸಾಧ್ಯವಾಗದೆ ಚಡಪಡಿಸುತ್ತಾ ಬಾಗಿಲ ಸಂದಿಯಲ್ಲಿ ಇಣುಕಿ ಹಸನಬ್ಬರ ಮುಖ ನೋಡಿದಳು ರುಕಿಯಾ...

ಎಲ್ಲೋ ನೋಡುತ್ತಿದ್ದ ಅವರ ಕಣ್ಣುಗಳಲ್ಲಿ ನೀರು ತೊಟ್ಟಿಕ್ಕುತ್ತಿತ್ತು. ತನ್ನ ತೋಳಿನಿಂದ ಕಣ್ಣೀರೊರೆಸುತ್ತಾ ಅವರು ಮಗುವನ್ನೂ ನೋಡದೆ ಮೆಟ್ಟಿಲಿಳಿದು



ಹೊರಟೇ ಬಿಟ್ಟಿದ್ದರು.

ಅಂದು ಇಡೀ ದಿನ ಅವರು ಹುಚ್ಚನಂತಾಗಿದ್ದರು. ಎಲ್ಲಿ ನೋಡಿದರೂ ಆಮಿನಾಳದೇ ನೆನಪು. ಅವಳದೇ ಮುಖ. ಹೃದಯ ತುಂಬಾ ಮೊಳೆ ಚುಚ್ಚಿದಂತೆ ನೋವು. ವಿರಹ ತಾಳಲಾರದೆ ಅಂದಿಡೀ ಅಳುತ್ತಲೇ ಕಳೆದ ಅವರು ಮನೆಯ ಕಡೆ ಕಾಲೆಳೆಯುತ್ತಿದ್ದರು. ದೂರದಲ್ಲಿ ಮನೆಯ ದೀಪ ಕಂಡಾಗಲೇ ಅವರಿಗೆ ಅರಿವಾದದ್ದು... ರಾತ್ರಿಯಾಗಿದೆ, ತಾನಿಂದು ಬಹಳ ತಡವಾಗಿ ಮನೆಗೆ ಬರುತ್ತಿದ್ದೇನೆ ಎಂದು.

ಮನೆ ಹತ್ತಿರವಾಗುತ್ತಿದ್ದಂತೆ ಅವರ ಕಾಲುಗಳು ಒಮ್ಮೆಲೇ ಸ್ತಬ್ಧವಾದವು. ಕಿವಿಗಳು ಅರಳಿ ನಿಂತವು. ಮನೆಯೊಳಗಿಂದ ಕೋಗಿಲೆಯೊಂದು ಹಾಡುತ್ತಿತ್ತು. ಮೆಟ್ಟಲೇರಿ ನಿಂತ ಹಸನಬ್ಬ ಕೋಗಿಲೆಗೆ ಅಡ್ಡಿಯಾಗಲಿಲ್ಲ. ಹಾಗೆಯೇ ಮೈಮರೆತು ನಿಂತು ಗಾನ ಆಲಿಸುತ್ತಿದ್ದವರು ಹಾಡು ನಿಂತಾಗ ಒಮ್ಮೆ ಮೆಲ್ಲ ಕೆಮ್ಮಿದರು. ಬಾಗಿಲು ತೆರೆದುಕೊಂಡಿತು. ಹೊಸಿಲು ದಾಟಿ ಒಳಗಡಿಯಿಟ್ಟವರು ಮಗುವಿನ ಬಳಿ ಬಂದರು. ಮಗು ನಿದ್ರಿಸುತ್ತಿತ್ತು. ಸ್ವರ್ಗದ ಹೊಂಗನಸಿನಲ್ಲಿ ಅದರ ಮುಖದ ತುಂಬಾ ಹೂನಗು...

''ನಾನು ಹೋಗುತ್ತೇನೆ''

ಹಸನಬ್ಬ ನಿಂತಲ್ಲೇ ತಿರುಗಿ ನೋಡಿದರು.

ರುಕಿಯಾ ತನ್ನ ಮಗನ ಕೈಹಿಡಿದು ಮೆಟ್ಟಲಿಳಿದು ನಡೆಯುತ್ತಿದ್ದಳು.

ಎರಡು ಹೆಜ್ಜೆ ಮುಂದೆ ನಡೆದು ಬಾಗಿಲಿಗೊರಗಿ ಬಿಟ್ಟ ಕಣ್ಣಿಂದ ಅವಳು ಮರೆಯಾಗುವವರೆಗೂ ಹಾಗೇ ನೋಡುತ್ತಾ ನಿಂತರು.

''ಛೇ! ನಾನು ಅವಳೊಬ್ಬಳನ್ನೇ ಕಳಿಸಬಾರದಿತ್ತು. ಈ ಕತ್ತಲೆಯಲ್ಲಿ ಎಷ್ಟು ಭಯಪಟ್ಟಳೋ ಏನೋ. ಕೈಗೊಂದು ಬೆಳಕಾದರೂ ಕೊಡಬಹುದಿತ್ತು. ಬೆಳಗ್ಗೆಯೂ ನಾನು ಬಹಳ ಕೆಟ್ಟದಾಗಿ ವರ್ತಿಸಿಬಿಟ್ಟೆ. ಅಷ್ಟು ಹಾರಾಡುವ ಅಗತ್ಯವೇನಿತ್ತು? ಅವಳು ಮಾಡಿದ್ದು ಒಳ್ಳೆಯದ್ದಕ್ಕಲ್ಲವೇ...?''

ಅಂದು ರಾತ್ರಿಯಿಡೀ ಅವರು ನಿದ್ರಿಸಲಿಲ್ಲ.

ಮತ್ತೆ ಬೆಳಗಾಗುತ್ತಲೇ ಬಂದಿದ್ದಳು ರುಕಿಯಾ.

ಮಗುವನ್ನು ರುಕಿಯಾಳ ಕೈಗಿತ್ತು ''ನಾನು ಬರುತ್ತೇನೆ'' ಎಂದಾಗ ಅವಳಿಗೆ ಆಶ್ಚರ್ಯ. ಎಂದೂ ಇಲ್ಲದ ವರ್ತನೆ. ಸಾಹುಕಾರರ ಮುಖದ ತುಂಬಾ ಎಂದೂ ಕಾಣದ ಸಂಭ್ರಮ... ಅವರು ತಿರುಗಿ ತಿರುಗಿ ಮಗುವಿಗೆ ಕೈ ಬೀಸುತ್ತಾ ನಡೆಯುತ್ತಿದ್ದರು...

ಯಾಕೋ ಅವಳ ಮನಸ್ಸಿಗೂ ಇಂದು ಖುಷಿಯಾಗಿತ್ತು. ''ದೇವರೇ, ಈ

ಸಾಹುಕಾರ ಎಂದೂ ಹೀಗೇ ಸಂತೋಷವಾಗಿರಲಿ'' ಎಂದು ಅವಳ ಮನಸ್ಸು ಹಾಡಿತು; ದಿನ, ತಿಂಗಳು, ವರ್ಷಗಳು ಕಳೆಯುತ್ತಿದ್ದವು.

ಪುಟ್ಟ ಅಬ್ದುಲ್ಲಾ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದ....

ಹಸನಬ್ಬ ಮಗುವಿಗಾಗಿ ಮಾತ್ರ ಬದುಕುತ್ತಿದ್ದೇನೆ ಎಂಬಂತಿದ್ದರು. ಅವರಿಗೆ ಮಗ ಬಿಟ್ಟು ಬೇರೆ ಯಾವುದೇ ವಿಷಯದಲ್ಲಿ ಆಸಕ್ತಿಯಿರಲಿಲ್ಲ. ತಿನ್ನುವುದು, ಮಲಗುವುದು, ದುಡಿಯುವುದು, ಎಲ್ಲವೂ ಮಗನಿಗಾಗಿ...

ರುಕಿಯಾ ಎಂದಿನಂತೆ ಬೆಳಗ್ಗೆ ಬರುತ್ತಿದ್ದಳು. ಸಂಜೆ ಹಿಂದಿರುಗುತ್ತಿದ್ದಳು. ಅಬ್ದುಲ್ಲಾ ದೊಡ್ಡವನಾಗಿದ್ದುದರಿಂದ ಅವಳಿಗೆ ಈಗ ಕೆಲಸ ಕಡಿಮೆ.

ಅವಳು ತನ್ನ ಮಗನನ್ನೂ ಶಾಲೆಗೆ ಸೇರಿಸಿದ್ದಳು.

ಸಾಹುಕಾರರನ್ನು ಕಂಡರೆ ಅವಳಿಗೆ ಬಹಳ ಗೌರವ. ಅವರ ನೋವು, ದುಗುಡ, ವಿರಹ ಎಲ್ಲವೂ ಅವಳಿಗೆ ಅರ್ಥವಾಗುತ್ತಿತ್ತು. ಅವಳೂ ಗಂಡನನ್ನು ಕಳೆದುಕೊಂಡವಳಲ್ಲವೇ? ಅವಳು ಈಗ ಸಾಹುಕಾರರ ಯಾವ ವಿಷಯ, ಕೆಲಸಕ್ಕೂ ಕೈ ಹಾಕುತ್ತಿರಲಿಲ್ಲ. ಅವರನ್ನು ಅವರ ಪಾಡಿಗೆ ಬಿಟ್ಟು ತನ್ನೆಲ್ಲ ನೋವುಗಳನ್ನು ಕೆಲಸದಲ್ಲೇ ಮರೆಯುವಳು. ತನ್ನ ಮತ್ತು ಮಗನ ಹೊಟ್ಟೆಗಾಗಿ ಕೊನೆತನಕ ಈ ಮನೆಯಲ್ಲಿಯೇ ಕೆಲಸಕ್ಕಿರುವಂತಾಗಲಿ ಎಂದು ಪ್ರಾರ್ಥಿಸುವಳು...

ಬಸ್ಸು ಒಮ್ಮೆಲೇ ಮುಂದಕ್ಕೆ ಜಗ್ಗಿದಂತಾಗಿ ಹಸನಬ್ಬ ಬೆಚ್ಚಿ ಬಿದ್ದರು. ಡ್ರೈವರು ತಲೆ ಹೊರಗೆ ಹಾಕಿ ಯಾರಿಗೋ ಬಯ್ಯುತ್ತಿದ್ದ. ''ಸಾಯಲಿಕ್ಕೆ ನಿನಗೆ ನನ್ನ ಬಸ್ಸೇ ಆಗಬೇಕಾ ಮಾರಾಯ? ಬೇರೆಲ್ಲಾದರೂ ಕೆರೆಯೋ, ಬಾವಿಯೋ ನೋಡು ಹೋಗು... ಸೈತಾನ್'' ಎಂದ. ಬಸ್ಸಿನಲ್ಲಿದ್ದವರೆಲ್ಲ ಒಮ್ಮೆ ಗೊಳ್ಳನೆ ನಕ್ಕರು.

ಹಸನಬ್ಬ ತನ್ನ ಅಂಗಿಯ ಕಿಸೆಯಲ್ಲಿದ್ದ ಟವಲ್ ತೆಗೆದು ಒಮ್ಮೆ ಕಣ್ಣು, ಮುಖ ಒರೆಸಿಕೊಂಡು ಮತ್ತೆ ಕಿಟಕಿಯ ಹೊರಗೆ ಕಣ್ಣು ಹಾಯಿಸಿದರು.

ಕಾಲೇಜಿನ ಹೊರಗೆ ಕೈಯಲ್ಲಿ ಪುಸ್ತಕ ಹಿಡಿದು ನಿಂತ ವಿದ್ಯಾರ್ಥಿಗಳ ದಂಡೇ ನೆರೆದಿತ್ತು...

ತನ್ನ ಮಗನೂ ಇದೇ ಕಾಲೇಜಿನಲ್ಲಿ ಓದಿದ್ದು...

ಅವರಿಗೆ ಮತ್ತೆ ಆಯಾಸವಾದಂತಾಯಿತು. ಹಾಗೆಯೇ ಸೀಟಿಗೆ ಒರಗಿ ಕಣ್ಣು ಮುಚ್ಚಿಕೊಂಡರು.

ಅಬ್ದುಲ್ಲಾ ಚಿಕ್ಕಂದಿನಲ್ಲೇ ಓದುವುದರಲ್ಲಿ ಬಹಳ ಜಾಣ. ಪ್ರತಿ ದಿನ ಅವರೇ ಅವನನ್ನು ಶಾಲೆಗೆ ಕರೆತಂದು ಒಯ್ಯುತ್ತಿದ್ದರು.

ಮಾತು ಮಾತಿಗೂ ಅವನು 'ಅಪ್ಪಾ' ಎಂದು ಕರೆಯುವಾಗ ಪುಸ್ತಕ ತೆರೆದು



ಓದುವಾಗ ಶಾಲೆಯ ಬಗ್ಗೆ ಹೇಳುವಾಗಲೆಲ್ಲಾ ಹಸನಬ್ಬರಿಗೆ ಕರುಳೇ ಕಿತ್ತು ಬಂದಂತಾಗುತ್ತಿತ್ತು. ಅವನ ತುಂಟತನ ಕಂಡಾಗಲೆಲ್ಲ ಅವರಿಗೆ ಆಮಿನಾಳ ನೆನಪಾಗುತ್ತಿತ್ತು. ''ಅಯ್ಯೋ... ಅವಳೀಗ ಇದ್ದಿದ್ದರೆ... ಎಷ್ಟೊಂದು ಖುಷಿ ಪಡುತ್ತಿದ್ದಳು. ಎಲ್ಲದಕ್ಕೂ ಪಡಕೊಂಡು ಬಂದಿರಬೇಕು...'' ಅವರು ಮತ್ತೆ ಮಗುವಿನ ಜೊತೆ ಬೆರೆಯುವರು.

ಹೀಗೆ ಅಬ್ದುಲ್ಲಾ ಬೆಳೆದ. ತಂದೆಯ ಅಕ್ಕರೆಯ ಮಗನಾಗಿ ಬೆಳೆದ. ಹೈಸ್ಕೂಲು ಮುಗಿಸಿ, ಕಾಲೇಜು ಸೇರಿದ. ಅಲ್ಲಿಯೂ ಆತ ಆಟ ಪಾಠ ಎಲ್ಲದರಲ್ಲಿಯೂ ಮುಂದು....

ಕಾಲೇಜು ಮುಗಿಯುತ್ತಲೇ ಒಂದು ದಿನ ಆತ ತಂದೆಗೆ ಹೇಳಿದ...

''ಅಪ್ಪಾ, ನನ್ನ ಓದು ಇನ್ನು ಸಾಕು. ನನಗೆ ಕೆಲಸಕ್ಕೆ ಸೇರಬೇಕೂಂತ ಆಸೆ''

ಹಸನಬ್ಬರಿಗೆ ಅಚ್ಚರಿಯಾಗಿತ್ತು.

''ಯಾಕಪ್ಪಾ! ನಿನಗೆ ಕೆಲಸ ಇಲ್ಲಿ ಏನು ಕಡಿಮೆಯಾಗಿದೆ? ಇಷ್ಟೊಂದು ತೋಟ, ಗದ್ದೆ ಇದೆ. ದುಡಿದರೆ ಹತ್ತು ಜನಕ್ಕೆ ಬೇಕಾದಷ್ಟು ಸಂಪಾದನೆ ಇಲ್ಲಿಯೇ ಇದೆಯಲ್ಲ...''

''ಇಲ್ಲಪ್ಪಾ, ನನ್ನ ಓದಿಗೆ ತಕ್ಕ ಕೆಲಸ ಬೇಕು.''

''ಬೇಡ ಮಗೂ, ಕೆಲಸ ಬೇಕಾದರೆ ಪೇಟೆಗೆ ಹೋಗಬೇಕು. ನಿನ್ನ ಬಿಟ್ಟು ಒಂದು ರಾತ್ರಿ ಕಳೆಯಲೂ ನನ್ನಿಂದ ಸಾಧ್ಯವಿಲ್ಲ. ಬೇಡಪ್ಪಾ...''

ಹಸನಬ್ಬರ ಪ್ರೀತಿ, ನೋವು ಇದ್ಯಾವುದೂ ಅಬ್ದುಲ್ಲಾನಿಗೆ ಅರ್ಥವಾಗಲಿಲ್ಲ. ಕೊನೆಗೂ ಅವನ ಹಠವೇ ಗೆದ್ದಿತು. ಅವನು ತನ್ನ ಗೆಳೆಯನೊಬ್ಬನ ಸಹಾಯದಿಂದ ಖಾಸಗಿ ಕಂಪೆನಿಯೊಂದರಲ್ಲಿ ಕೆಲಸ ಗಿಟ್ಟಿಸಿಕೊಂಡಾಗಿತ್ತು.

ಆತ ವಾರಕ್ಕೊಮ್ಮೆ ಮಾತ್ರ ಈಗ ಮನೆಗೆ ಬರುತ್ತಿದ್ದ. ಬಂದಾಗಲೆಲ್ಲ ತಂದೆಯ ಜೊತೆ ಪ್ರೀತಿಯಿಂದ ಮಾತನಾಡುತ್ತಿದ್ದ. ಅವನ ಬಟ್ಟೆ, ನಡೆ - ನುಡಿ ಎಲ್ಲ ನೋಡುವಾಗ ದೊಡ್ಡ ಅಧಿಕಾರಿಯಂತೆ ಕಾಣುತ್ತಿದ್ದ. ಅವನಿರುವ ದಿನ ಆ ಮನೆಯಲ್ಲಿ ಹಬ್ಬವೇ ಮಾಡುತ್ತಿದ್ದಳು ರುಕಿಯಾ.

ತನ್ನ ಮಗ ತನ್ನ ಹಾಗೆ ಆಗದಿದ್ದರೆ ಬೇಡ. ತನ್ನಂತೆ ಪ್ರೀತಿಸಲಿಲ್ಲವಲ್ಲಾ ಎಂಬ ಕೊರಗು ಹಸನಬ್ಬರಿಗೆ. ''ಎಲ್ಲವೂ ಹಾಗೇ... ರೆಕ್ಕೆ ಬಲಿತರೆ ಮತ್ತೆ ಅದರದೇ ಹಾದಿ. ಗಂಡಿನ ಕಷ್ಟ, ಸುಖ, ನೋವುಗಳನ್ನು ಹಂಚಿಕೊಳ್ಳಲು ಕಟ್ಟಿಕೊಂಡವಳಿಂದ ಮಾತ್ರ ಸಾಧ್ಯ. ಗಂಡಾದವನಿಗೆ ಹೆಂಡತಿಯ ಆಸರೆ ಕೊನೆಯ ತನಕ ಇದ್ದರೇನೇ ನೆಮ್ಮದಿ.... ಆಮಿನಾ... ಇಂತಹ ಸಮಯದಲ್ಲಿ ನೀನಾದರೂ ನನ್ನ ಬಳಿ ಇದ್ದಿದ್ದರೆ...'' ಹಸನಬ್ಬ ಪ್ರತಿ ನಿಮಿಷವೂ ಹೆಂಡತಿಯನ್ನು ನೆನೆದು ಕೊರಗುವರು. ಅವರ ಮಾತು ಈಗ ಮೌನ

ವಹಿಸಿತ್ತು. ಹೃದಯ ಮಾತ್ರ ಮಾತನಾಡುತ್ತಿತ್ತು.

ಒಂದು ಬೆಳಗ್ಗೆ ಮನೆಯ ಮುಂದೆ ಕಾರೊಂದು ಬಂದು ನಿಂತಿತು.

''ಮಗನೇನಾದರೂ ಕಾರಿನಲ್ಲಿ ಬಂದುಬಿಟ್ಟನೇ?'' ಹಸನಬ್ಬ ಖುಷಿಯಿಂದ ಹೊರಗೆ ಧಾವಿಸಿದರು. ಸೂಟು ಬೂಟು ಹಾಕಿದ ಇಬ್ಬರು ಅಪರಿಚಿತರು ಕಾರಿನಿಂದಿಳಿಯುತ್ತಿದ್ದರು.

''ಹಸನಬ್ಬನವರ ಮನೆ ಇದೇ ತಾನೇ?''

''ಹೌದು! ನಾನೇ ಹಸನಬ್ಬ, ತಾವು ಯಾರು?''

''ನಾನು ನಿಮ್ಮ ಮಗ ಕೆಲಸ ಮಾಡುವ ಕಂಪೆನಿಯ ಮಾಲಕ...''

''ಬನ್ನಿ, ಒಳಗೆ ಬನ್ನಿ...'' ಹಸನಬ್ಬ ಅವರನ್ನು ಆದರದಿಂದ ಒಳಗೆ ಕರೆದು ಕುಳ್ಳಿರಿಸಿದರು.

ಬಂದವರು ಅಬ್ದುಲ್ಲಾನನ್ನು ಹೊಗಳಿದ್ದೇ ಹೊಗಳಿದ್ದು. ಅವರ ಹೊಗಳಿಕೆ ಕಂಡು ಹಸನಬ್ಬರಿಗೇ ಮುಜುಗರವಾಗಿತ್ತು.

''ನೋಡಿ, ಇಂತಹ ಮಗನನ್ನು ಪಡೆಯಬೇಕಾದರೆ ನೀವು ಪುಣ್ಯ ಮಾಡಿರಬೇಕು. ಅದೆಲ್ಲ ಇರಲಿ... ಈಗ ನಾವು ಬಂದ ವಿಷಯಕ್ಕೆ ಬರೋಣ''.

''ನನ್ನ ಒಬ್ಬಳೇ ಮಗಳು ಕಾಲೇಜು ಓದುತ್ತಿದ್ದಾಳೆ. ಅವಳನ್ನು ನಿಮ್ಮ ಮಗನಿಗೆ ನೆಂಟಸ್ತಿಕೆ ಕೇಳಲು ಬಂದಿದ್ದೇವೆ...'' ಹಸನಬ್ಬ ಒಂದು ಕ್ಷಣ ಮೂಕರಾದರು. ಅವರಿಗೆ ಏನು ಹೇಳಬೇಕೆಂದೇ ತೋಚಲಿಲ್ಲ.

''ನೋಡಿ, ನಮಗಿರುವುದು ಒಬ್ಬಳೇ ಮಗಳು. ಗಂಡು ಮಕ್ಕಳಿಲ್ಲ. ನನ್ನ ಸರ್ವ ಆಸ್ತಿಗೂ ಅವಳೇ ಒಡತಿ. ನಿಮ್ಮ ಮಗನಿಗೆ ಯಾವ ಕೊರತೆಯೂ ಆಗಲಾರದು...''

''ಯಾವುದಕ್ಕೂ ನಾನು ಮಗನಲ್ಲಿ ಒಂದು ಮಾತು ಕೇಳಿ ಹೇಳುತ್ತೇನೆ'' ಎಂದರು ಹಸನಬ್ಬ.

ಇದಾಗಿ ತಿಂಗಳಲ್ಲಿ ಮದುವೆ ನಡೆದಿತ್ತು.

ಮಗನಿಗೆ ಬೀಗರು ಒಂದು ಭವ್ಯ ಬಂಗಲೆಯನ್ನೇ ಉಡುಗೊರೆಯಾಗಿ ಕೊಟ್ಟಿದ್ದರು. ಅವನೀಗ ಅದರಲ್ಲೇ ವಾಸವಾಗಿದ್ದ. ಊರಿಗೆ ಬರುತ್ತಿದ್ದುದೇ ಅಪರೂಪ. ಅದಕ್ಕೆಲ್ಲಾ ಅವನಿಗೆ ಸಮಯ ಸಿಗುತ್ತಿರಲಿಲ್ಲ. ನೆನಪಾದಾಗಲೆಲ್ಲ ಹಸನಬ್ಬನವರೇ ಹೋಗಿ ಮಗನ ಮನೆಯಲ್ಲಿ ಒಂದು ದಿನ ಇದ್ದು ಯೋಗಕ್ಷೇಮ ವಿಚಾರಿಸಿ ಬರುತ್ತಿದ್ದರು. ಮಗನ ಮನೆ, ಕಾರು, ಕೆಲಸ ನೋಡಿ ಅವರಿಗೆ ನೆಮ್ಮದಿಯಾಗಿತ್ತು. ಅಂತೂ ಅವನು ಸುಖವಾಗಿದ್ದಾನಲ್ಲ, ಅಷ್ಟು ಸಾಕು ಎಂದು ನಿಟ್ಟುಸಿರು ಬಿಡುತ್ತಿದ್ದರು.



''ಅಪ್ಪಾ, ನೀವ್ಯಾಕೆ ಅಲ್ಲಿ ಒಂಟಿಯಾಗಿರಬೇಕು. ಎಲ್ಲವನ್ನೂ ಮಾರಿ ಇಲ್ಲಿಗೇ ಬಂದುಬಿಡಿ'' ಹೋದಾಗಲೆಲ್ಲಾ ಮಗ ಅವರನ್ನು ಒತ್ತಾಯಿಸುತ್ತಿದ್ದ.

''ಇಲ್ಲ, ಮಗಾ, ಹಾಗೆಲ್ಲಾ ಆಗುವುದಿಲ್ಲ. ಅದು ನಿನ್ನಮ್ಮ ಬದುಕಿ ಬಾಳಿದ ಮನೆ, ಅದನ್ನು ಅಷ್ಟು ಸುಲಭವಾಗಿ ಮಾರಲು, ಬಿಟ್ಟು ಬರಲು ಸಾಧ್ಯವಿಲ್ಲ. ನನ್ನ ಜೀವ ಈಗ ಗಟ್ಟಿಯಾಗಿದೆ. ಕೈಕಾಲು ಬಿದ್ದಾಗ ನೋಡೋಣ. ನಿನ್ನ ಮನೆಯಲ್ಲಿಯೇ ಬಂದು ಬಿದ್ದಿರುತ್ತೇನೆ'' ಎನ್ನುತ್ತಿದ್ದರು.

ಬಸ್ಸು ತಾನಿಳಿಯುವ ನಿಲ್ದಾಣದಲ್ಲಿ ಬಂದು ನಿಂತಾಗ ಹಸನಬ್ಬ ಎದ್ದು ನಿಂತರು. ಬಸ್ಸಿನಿಂದ ಇಳಿಯುತ್ತಿದ್ದಂತೆಯೇ ರುಕಿಯಾಳ ಮಗ ನಾಸರ್ ಓಡೋಡಿ ಬಂದಿದ್ದ.

''ಕಾಕಾ, ಅಬ್ದುಲ್ಲಾ ಚೆನ್ನಾಗಿದ್ದಾರಾ?''

ಹಸನಬ್ಬ ತಿರುಗಿ ಅವನನ್ನೇ ನೋಡಿದರು. ಅವನ ಮುಖದ ತುಂಬಾ ಆತಂಕವಿತ್ತು.

''ಹಾಂ, ಚೆನ್ನಾಗಿದ್ದಾನೆ...'' ಅಷ್ಟು ಹೇಳಿ ಅವರು ನಡೆದರು. ಅವನು ಅವರ ಹಿಂದೆ ನಡೆದ. ಅವರಿಗೆ ಈಗ ಮಾತೇ ಬೇಡವಾಗಿತ್ತು. ಮನಸ್ಸು ತುಂಬಾ ದುಗುಡ ತುಂಬಿತ್ತು.

ಮನೆಗೆ ಬಂದವರೇ ಹಸನಬ್ಬ ತನ್ನ ಕೋಣೆಗೆ ಹೋಗಿ ಬಿದ್ದುಕೊಂಡರು. ಮಗ ಆಡಿದ ಒಂದೊಂದು ಮಾತೂ ಅವರ ಮನಸ್ಸನ್ನು ಚುಚ್ಚಿ ಚುಚ್ಚಿ ಗಾಯಗೊಳಿಸುತ್ತಿತ್ತು. ಅವರ ಜೀವಮಾನದಲ್ಲಿ ಎಂದೂ ಇಷ್ಟೊಂದು ನೋವು, ಅವಮಾನವನ್ನು ಅವರು ಅನುಭವಿಸಿದವರಲ್ಲ.

ಅವರಿಗೆ ಮತ್ತೆ ಆಮಿನಾಳ ನೆನಪಾಯಿತು.

''ಅಮಿನಾ, ನೋಡು ಆಮಿನಾ, ನಿನ್ನ ಮಗ ನನ್ನನ್ನು ಏನು ಅಂದುಬಿಟ್ಟ...!''

ಅವರ ಕಣ್ಣು ತುಂಬಿ ದುಃಖ ಒತ್ತರಿಸಿ ಬಂತು. ಕವಚಿ ಮಲಗಿ ದಿಂಬಿಗೆ ಮುಖವಿಟ್ಟು ಅವರು ಅತ್ತೇ ಬಿಟ್ಟರು...

ಬಾಗಿಲ ಬಳಿ ಸದ್ದಾದಂತಾಗಿ ಸಾವರಿಸಿಕೊಂಡು ಒಮ್ಮೆಲೇ ಎದ್ದು ಕುಳಿತರು. ರುಕಿಯಾ ಬಾಗಿಲ ಬಳಿ ನಿಂತಿದ್ದಳು. ಅವಳ ಮುಖದ ತುಂಬಾ ಗಾಬರಿ ಇತ್ತು.

''ಮಗು ಚೆನ್ನಾಗಿದೆಯಾ?''

''ಹಾಂ...''

''ಮತ್ತೇಕೆ ಹೀಗಿದ್ದೀರಿ? ಮಗು ಆರೋಗ್ಯವಾಗಿದೆ ತಾನೇ? ಅವನಿಗೆ ಏನೂ ಸಂಭವಿಸಿಲ್ಲ ತಾನೇ...?'' ಅವಳು ಉದ್ವೇಗಗೊಂಡಿದ್ದಳು.

ಹಸನಬ್ಬ ಮಾತನಾಡಲಿಲ್ಲ. ಅವಳನ್ನೇ ಒಮ್ಮೆ ದಿಟ್ಟಿಸಿ ನೋಡಿದರು. ಇಪ್ಪತ್ತೈದು

ವರ್ಷದಿಂದ ತನ್ನ ಮನೆಯಲ್ಲಿಯೇ ಇದ್ದರೂ ಎಂದೂ ಹೀಗೆ ಇಷ್ಟೊಂದು ಹತ್ತಿರದಿಂದ ಅವಳನ್ನು ನೋಡಿದವರಲ್ಲ. ''ನನ್ನ ಮಗನನ್ನು ಹೆರಲಿಲ್ಲ, ಅದು ಬಿಟ್ಟರೆ ಒಬ್ಬಳು ತಾಯಿ ತನ್ನ ಮಗುವಿಗೆ ಏನೆಲ್ಲ ನೀಡಬೇಕೋ ಅದೆಲ್ಲವನ್ನೂ ನೀಡಿದ ಮಹಾತಾಯಿ ಇವಳು. ಈ ತಾಯಿಯ ಮೇಲೆ ಎಂತಹ ಅಪವಾದ ಹೊರಿಸಿಬಿಟ್ಟ. ಈ ವಿಷಯ ವೇನಾದರೂ ಇವಳಿಗೆ ಗೊತ್ತಾಗಿಬಿಟ್ಟರೆ ಇವಳ ಪ್ರತಿಕ್ರಿಯೆ ಏನಿರಬಹುದು?''

''ನೀವ್ಯಾಕೆ ಮಾತನಾಡ್ತಿಲ್ಲ? ಹೇಳಿ ಮಗುವಿಗೇನಾಗಿದೆ?'' ಅವಳ ಧ್ವನಿ ಈಗ ನಡುಗುತ್ತಿತ್ತು.

ಇನ್ನೂ ತಾನು ಮಾತನಾಡದಿದ್ದರೆ ಇವಳು ಅತ್ತೇ ಬಿಡುವಳೇನೋ ಎಂದನಿಸಿತು ಹಸನಬ್ಬರಿಗೆ.

''ಮಗ ಚೆನ್ನಾಗಿದ್ದಾನೆ. ಅವನಿಗೇನೂ ಆಗಿಲ್ಲ. ನನಗೇ ಸ್ವಲ್ಪ ತಲೆನೋವು ಅಷ್ಟೇ''.

ಅವಳಿಂದ ದೀರ್ಘ ನಿಟ್ಟುಸಿರೊಂದು ಹೊರಬಿತ್ತು. ಮತ್ತೆ ಒಂದು ಕ್ಷಣವೂ ಅಲ್ಲಿ ನಿಲ್ಲದೆ ಅವಳು ಮರೆಯಾದಳು.

ಅಂದು ರಾತ್ರಿ ಇಡೀ ಹಸನಬ್ಬ ನಿದ್ರಿಸಲಿಲ್ಲ. ತನ್ನ ಮನಸ್ಸಿನ ನೋವನ್ನು ಯಾರಲ್ಲಾದರೂ ಹೇಳಿಕೊಳ್ಳದಿದ್ದರೆ ತನಗೆ ಹುಚ್ಚೇ ಹಿಡಿದು ಬಿಡುತ್ತದೇನೋ ಎನಿಸಿತು ಅವರಿಗೆ.

ಬೆಳಗಾಗುತ್ತಲೇ ಮೂಸಬ್ಬನನ್ನು ಕರೆಸಿ ವಿಷಯವೆಲ್ಲ ಹೇಳಿದರು. ಮೂಸಬ್ಬ ಕೆಲ ಹೊತ್ತು ಮಾತನಾಡಲಿಲ್ಲ.

''ಎಲುಬಿಲ್ಲದ ನಾಲಗೆ ಹೇಗೇಗೋ ಹೊರಳುತ್ತೆ. ಅದನ್ನೆಲ್ಲ ನೀನು ಹಚ್ಚಿ ಕೊಳ್ಳಬೇಡ.. ನಿನಗಿನ್ನು ಅವಳ ಅಗತ್ಯವಾದರೂ ಏನು? ಅಡುಗೆ ಅಂತೂ ನೀನೇ ಮಾಡಿಕೊಳ್ಳುತ್ತಿದ್ದೀಯಲ್ಲ... ಅವಳನ್ನು ಊರಿಗೆ ಕಳಿಸಿಬಿಡು''

''ಇಪ್ಪತ್ತೈದು ವರ್ಷದಿಂದ ಇಲ್ಲಿದ್ದಾಳೆ. ನನ್ನ ಮಗುವಿನ ತಾಯಿಯಾಗಿದ್ದಾಳೆ. ಏನು ಮಾಡಿದರೂ ಅವಳ ಋಣ ತೀರಿಸಲು ಸಾಧ್ಯವಿಲ್ಲ. ಅಂಥವಳನ್ನು ಇದ್ದಕ್ಕಿದ್ದ ಹಾಗೆ 'ನೀನು ಹೋಗು' ಎಂದು ಹೇಗೆ ಹೇಳಲಿ?''

''ಏನಾದರೂ ಒಂದು ಉಪಾಯ ಮಾಡಿ ಕಳಿಸಿಬಿಡು'' ಎಂದ ಮೂಸಬ್ಬ.

ಮರುದಿನ ಹಸನಬ್ಬ ರುಕಿಯಾಳನ್ನು ಕರೆದರು.

''ರುಕಿಯಾ, ನಿನ್ನ ಮಗ ಈಗ ದೊಡ್ಡವನಾಗಿದ್ದಾನೆ. ಅವನಿಗೊಂದು ಮದುವೆ ಮಾಡಬೇಕು. ಇಲ್ಲಿ ನನ್ನದು ಹೇಗೋ ನಡೆಯುತ್ತದೆ. ನೀನು ಊರಿಗೆ ಹೋಗಿ ಅವನಿಗೊಂದು ಮದುವೆ ಮಾಡಿ ಸುಖವಾಗಿರು'' ಎಂದರು.



ರುಕಿಯಾ ತಲೆ ಆಡಿಸಿದಳು.

ನಾಸರ್‌ಗೆ ವಿದ್ಯೆ ತಲೆಗೆ ಹತ್ತಲಿಲ್ಲ. ಅವನು ಈಗ ಬಸ್ಸು ನಿಲ್ದಾಣದಲ್ಲಿ ಹಣ್ಣು ಹಂಪಲು ಮಾರಿ ಒಳ್ಳೆಯ ಸಂಪಾದನೆ ಮಾಡುತ್ತಿದ್ದ.

ಅವನು ಎಷ್ಟೋ ಸಲ ತಾಯಿಗೆ ಹೇಳಿದ್ದ ''ಅಮ್ಮಾ ನಾನೀಗ ಸಂಪಾದನೆ ಮಾಡುತ್ತಿದ್ದೇನೆ. ನಮ್ಮಿಬ್ಬರ ಜೀವನಕ್ಕೆ ಇದು ಸಾಕು. ನೀನು ಇನ್ನೂ ಯಾಕೆ ಇಲ್ಲಿ ದುಡಿಯಬೇಕು. ನಡಿ ನಾವು ಊರಿಗೆ ಹೋಗೋಣ'' ಎಂದು.

''ಇಲ್ಲಪ್ಪಾ, ನಾವು ಈಗ ಏಕಾಏಕಿ ಎದ್ದು ಹೋದರೆ ಸಾಹುಕಾರರಿಗೆ ಇಲ್ಲಿ ಯಾರಿದ್ದಾರೆ? ಒಳ್ಳೆಯ ಮನುಷ್ಯ. ನಾವು ಹಸಿದಾಗ ಅನ್ನ ಕೊಟ್ಟವರು. ಅಂತಹವರನ್ನು ನಡುನೀರಿನಲ್ಲಿ ಕೈಬಿಡುವುದಾ? ಹಾಗೆಲ್ಲಾ ಮಾಡಬಾರದಪ್ಪಾ... ಅವರು ಹೋಗು ಅನ್ನುವವರೆಗೂ ಇಲ್ಲೇ ಇದ್ದು ಬಿಡೋಣ''.

ಅವನು ಬೇಡ ಅನ್ನಲಿಲ್ಲ. ಅವನಿಗೂ ತಾಯಿಯ ಮಾತು ಸರಿ ಎನಿಸಿತ್ತು.

ಇಂದು ಅಂತಹ ಒಂದು ದಿನ ಬಂದಾಗಿತ್ತು.

ಹಣದ ಒಂದು ಕಟ್ಟನ್ನು ಹೊರಟು ನಿಂತ ರುಕಿಯಾಳ ಕೈಗೆ ಕೊಡುತ್ತಾ ಹಸನಬ್ಬ ಹೇಳಿದರು

''ನೋಡು ರುಕಿಯಾ, ಇದರಲ್ಲಿ ಸ್ವಲ್ಪ ಹಣ ಇದೆ. ಇದನ್ನಿಟ್ಟುಕೊ. ನಿನ್ನ ಖರ್ಚಿಗೆ ಬೇಕಾಗಬಹುದು''

''ಬೇಡಿ ಸಾಹುಕಾರರೇ, ನೀವು ಈಗ ಕೊಟ್ಟದ್ದೇ ಜಾಸ್ತಿಯಾಗಿದೆ. ಅನಾಥರಾದ ನಮಗೆ ಬದುಕು ಕೊಟ್ಟಿದ್ದೀರಿ... ಹಸಿದ ಹೊಟ್ಟೆಗೆ ಅನ್ನ ಕೊಟ್ಟಿದ್ದೀರಿ. ಈ ಋಣವನ್ನು ಹೇಗೆ ತೀರಿಸುವುದೂಂತ ಯೋಚಿಸ್ತಿದ್ದೇನೆ. ನಿಮ್ಮ ಪ್ರೀತಿ, ಆಶೀರ್ವಾದ ಮಾತ್ರ ಸಾಕು. ನಮಗೆ ಬೇರೇನೂ ಬೇಡ'' ಎಂದು ಹೊಸಿಲು ದಾಟಿದವಳೊಮ್ಮೆ ತಿರುಗಿ ನೋಡಿದಾಗ ಅವಳ ಕಣ್ಣು ತುಂಬಿತ್ತು.

ಅವಳು ಕಣ್ಣಿಂದ ಮರೆಯಾದ ಮೇಲೆ ಒಳಗೆ ಬಂದು ಬಾಗಿಲು ಹಾಕಿದ ಹಸನಬ್ಬರಿಗೆ ತಾನೀಗ ಏಕಾಂಗಿ, ಅನಾಥ ಎನಿಸಿಬಿಟ್ಟಿತ್ತು.

''ಹೌದು, ಈ ಭೂಮಿಯ ಮೇಲೆ ಈಗ ನನಗೆ ನನ್ನವರೂಂತ ಯಾರೂ ಇಲ್ಲ. ನಾನು ಅನಾಥ. ಇನ್ನು ಈ ಜೀವನ ಸಾಕು. ಇನ್ನು ಈ ಬದುಕಿನಲ್ಲಿ ಸಾಧಿಸಲು ನನಗೆ ಏನೂ ಉಳಿದಿಲ್ಲ. ಸಾಧ್ಯವಾದಷ್ಟು ಬೇಗ ಇಲ್ಲಿಂದ ಮುಕ್ತಿ ಹೊಂದಬೇಕು..'' ಎನ್ನುತ್ತಾ ಅವರು ಮನೆಯೊಳಗೆ ಹುಚ್ಚನಂತೆ ತಿರುಗಾಡಿದರು.

ತಿಂಗಳುಗಳು ಉರುಳುತ್ತಿದ್ದವು.

ಹಸನಬ್ಬ ಮತ್ತೆ ಮಗನ ಮನೆಗೆ ಕಾಲಿಡಲಿಲ್ಲ. ಒಂದೆರಡು ಸಲ ಅಬ್ದುಲ್ಲಾ

ತಂದೆಯನ್ನು ಕರೆತರಲು ಕಾರು ಕಳುಹಿಸಿದ್ದ. ಹಸನಬ್ಬ ಹೋಗಲಿಲ್ಲ. ಅವರೀಗ ಮೂಸಬ್ಬ ಒಬ್ಬನನ್ನು ಬಿಟ್ಟು ಯಾರ ಜೊತೆಯೂ ಮಾತನಾಡುವುದಿಲ್ಲ. ಮನಸ್ಸಾದರೆ ಬೇಯಿಸಿದರು, ಇಷ್ಟವಾದರೆ ಒಮ್ಮೆ ತೋಟದ ಕಡೆ ಒಂದು ಸುತ್ತು ಹೊಡೆದರು ಅಷ್ಟೇ.

★★★

ವಾರದಿಂದ ಒಂದೇ ಸವನೆ ಸುರಿಯುತ್ತಿದ್ದ ಮಳೆ ಅಂದು ಸ್ವಲ್ಪ ಹನಿಯಾಗಿತ್ತು. ಮುಂಜಾನೆ ಎದ್ದು ಒಮ್ಮೆ ತೋಟದ ಕಡೆ ಹೋಗಿ ಬರೋಣ ಎಂದು ಹೊರಟು ಮೆಟ್ಟಲಿಳಿಯುತ್ತಿದ್ದ ಹಸನಬ್ಬ ಕಾಲು ಜಾರಿ ಬಿದ್ದುಬಿಟ್ಟರು. ಬಿದ್ದ ಪೆಟ್ಟಿಗೆ ಅವರ ಬಲಗಾಲ ಮೂಳೆ ಮುರಿದಿತ್ತು. ನೆರೆಯವರೆಲ್ಲ ಸೇರಿ ಅವರನ್ನು ಆಸ್ಪತ್ರೆಗೆ ಸೇರಿಸಿ ಮಗನಿಗೆ ಸುದ್ದಿ ಮುಟ್ಟಿಸಿದರು.

ಮಗ ಬರಬಹುದು ಎಂದು ಕಾದಿದ್ದ ಹಸನಬ್ಬರಿಗೆ ನಿರಾಶೆಯಾಗಿತ್ತು.

ಸಂಜೆಯಾಗುತ್ತಲೇ ತಂದೆಯನ್ನು ಕರೆತರಲು ಅಬ್ದುಲ್ಲಾನ ಕಾರು ಬಂತು.

''ನಿಮಗೆ ದೊಡ್ಡಾಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸ್ತಾರಂತೆ. ನೀವು ಈಗಲೇ ಬರ ಬೇಕಂತೆ'' ಎನ್ನುತ್ತಾ ಅಬ್ದುಲ್ಲಾ ಕಳುಹಿಸಿದ ಹಣವನ್ನು ನೀಡುತ್ತಾ ಡ್ರೈವರ್ ಹೇಳಿದ.

ಹಸನಬ್ಬ ಒಪ್ಪಲಿಲ್ಲ. ''ಯಾವ ಕಾರಣಕ್ಕೂ ನಾನು ಮಗನ ಮನೆಗೆ ಹೋಗೋದಿಲ್ಲ'' ಎಂದು ಅವರು ತೀರ್ಮಾನ ಮಾಡಿಯಾಗಿತ್ತು.

ಹಸನಬ್ಬ ಈಗ ಮಲಗಿದಲ್ಲಿಯೇ ಇದ್ದರು. ಅವರ ಬಲಗಾಲನ್ನು ಕಟ್ಟಿ ಹಾಕಲಾಗಿತ್ತು. ಇನ್ನು ಎರಡು ತಿಂಗಳು ಹೀಗೇ ಇರಬೇಕಾಗಬಹುದೆಂದು ವೈದ್ಯರು ಹೇಳಿದ್ದರು. ಆಸ್ಪತ್ರೆಯಲ್ಲಿದ್ದ ಒಂದು ವಾರವೂ ಮೂಸಬ್ಬನ ಆರೈಕೆಯಲ್ಲಿ ಕಳೆದ ಹಸನಬ್ಬ ಖಂಡಿತ ತನ್ನ ಮಗ ಬರುತ್ತಾನೆ ಎಂಬ ನಿರೀಕ್ಷೆಯಲ್ಲಿದ್ದರು. ಆಸ್ಪತ್ರೆಯಿಂದ ಹೊರಡುವ ದಿನ ಅವರಿಗೆ ಯೋಚನೆಗಿಟ್ಟುಕೊಂಡಿತು.

''ಯಾಕೆ ಮಗ ಬರಲಿಲ್ಲ? ನಾನೇನು ತಪ್ಪು ಮಾಡಿದ್ದೇನೆ? ಇವನು ಯಾಕೆ ಹೀಗಾದ? ಇವನಿಗೆ ನನ್ನ ಮೇಲೆ ಸ್ವಲ್ಪವೂ ಪ್ರೀತಿ ಇಲ್ಲವೇ...?''

ಅವರಲ್ಲಿ ಹಲವು ಯೋಚನೆಗಳು ಅಲೆಗಳಂತೆ ಭೋರ್ಗರಿಸತೊಡಗಿದವು. ಮತ್ತೆ ಒಂದೊಂದಾಗಿ ಹಳೆಯ ನೆನಪುಗಳು...

ಹಸನಬ್ಬ ಮನಸ್ಸನ್ನು ಗಟ್ಟಿ ಮಾಡಿಕೊಂಡರು.

ನಾನು ಜೀವನದಲ್ಲಿ ಎಂದೂ ಸೋತವನಲ್ಲ. ನನ್ನ ಆಮಿನಾ ನನ್ನನ್ನು ಬಿಟ್ಟು ಹೋದಾಗ ಕೂಡಾ ನಾನು ಎಲ್ಲವನ್ನೂ ಎದುರಿಸಿ ಬದುಕಿದ್ದೆ. ಈಗ ಸೋಲಬಾರದು...



ಮಗನಿಗೆ ಸೋಲಬಾರದು.'' ಅವರು ತನಗೆ ತಾನೇ ಧೈರ್ಯ ಹೇಳಿಕೊಳ್ಳುತ್ತಾ ಗಟ್ಟಿಯಾಗತೊಡಗಿದರು.

ಮೂಸಬ್ಬನನ್ನು ಕರೆದು ತನ್ನನ್ನು ಮನೆಗೆ ಕರೆದೊಯ್ಯುವಂತೆಯೂ ತನ್ನ ಕೆಲಸಕ್ಕೆ ಆಳೊಂದನ್ನು ನೇಮಿಸುವಂತೆಯೂ ತಿಳಿಸಿದರು.

ಆಸ್ಪತ್ರೆಯಿಂದ ಹೊರಡಬೇಕು ಎನ್ನುವಷ್ಟರಲ್ಲಿ ಮತ್ತೆ ಅಬ್ದುಲ್ಲಾನ ಕಾರು ಬಂದಿತ್ತು. ಮಗ ಬಂದಿರಬಹುದೇ ಎಂದು ಹಸನಬ್ಬರ ಕಣ್ಣುಗಳು ಹುಡುಕಿದವು.... ಇಲ್ಲ...

ಡ್ರೈವರ್ ಮತ್ತೆ ಹಸನಬ್ಬರನ್ನು ಮಗನ ಮನೆಗೆ ಬರುವಂತೆ ಒತ್ತಾಯಿಸಿದ... ಹಸನಬ್ಬ ಹೋಗಲಿಲ್ಲ. ''ಇನ್ನು ಮುಂದೆ ನೀನು ಇಲ್ಲಿಗೆ ಬರಬಾರದು'' ಎಂದು ಅವನಿಗೆ ಎಚ್ಚರಿಕೆ ಕೊಟ್ಟು ಕಳುಹಿಸಿಬಿಟ್ಟರು.

ಈಗಂತೂ ಹಸನಬ್ಬರಿಗೆ ಎಲ್ಲವೂ ಅರ್ಥವಾಗತೊಡಗಿತ್ತು.

ಮನೆಗೆ ಬಂದ ಹಸನಬ್ಬ ಅತ್ತೇ ಬಿಟ್ಟಿದ್ದರು.

''ನೀನೆಂಥದ್ದು ಮಾರಾಯ ಅಳುವುದು. ಚಿಕ್ಕ ಮಕ್ಕಳ ಹಾಗೆ. ನಾನೇನು ನಿನಗೆ ಹೊರಗಿನವನಾ ಧೈರ್ಯವಾಗಿರು, ನಾನಿಲ್ಲವಾ?''

ಮೂಸಬ್ಬ ಅವರನ್ನು ಸಮಾಧಾನಪಡಿಸುತ್ತಿದ್ದಂತೆಯೇ ಬಾಗಿಲ ಬಳಿ ಸದ್ದಾದಂತಾಯಿತು.

ಹಸನಬ್ಬ ಕಣ್ಣೊರೆಸುತ್ತಾ ತಿರುಗಿ ನೋಡಿದರೆ

ರುಕಿಯಾ!

ರುಕಿಯಾ ಆತಂಕದಿಂದ ಏದುಸಿರುಬಿಡುತ್ತಾ ಬಾಗಿಲಲ್ಲಿ ನಿಂತಿದ್ದಳು.

**ಪ್ರಜಾವಾಣಿ**